

# ಜೀವಿಸುವ ಒಂದು ನೂತನ ಮಾರ್ಗ

## ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವುದರ ಅರ್ಥ ಏನೆಂಬುದನ್ನು ತಿಳಿದುಕೊಳ್ಳುವುದು

ಜಾಯ್ಸ್ ಮೇಯರ್

#1 ನ್ಯೂಯೊರ್ಕ್ ಟೈಮ್ಸ್‌ನ ಹೆಚ್ಚಾಗಿ ಮಾರಾಟವಾಗುವಂಥ ಗ್ರಂಥಕರ್ತರು

# ಜೀವಿಸುವ
# ಒಂದು ನೂತನ ಮಾರ್ಗ

# ಜೀವಿಸುವ
# ಒಂದು ನೂತನ ಮಾರ್ಗ

ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವುದರ
ಅರ್ಥ ಏನೆಂಬುದನ್ನು ತಿಳಿದುಕೊಳ್ಳುವುದು


## ಜಾಯ್ಸ್ ಮೇಯರ್



JOYCE MEYER MINISTRIES®

Plot No. 512/B, Road No. 30, Jubilee Hills, Hyderabad - 500 033

If you purchase this book without a cover you should be aware that this book may have been stolen property and reported as "unsold and destroyed" to the publisher. In such case neither the author nor the publisher has received any payment for this "stripped book."

Unless otherwise indicated, all Scripture quotations are taken from THE AMPLIFIED BIBLE: Old Testament. Copyright © 1962, 1964 by Zondervan Publishing House (used by permission); THE KING JAMES VERSION; and from THE AMPLIFIED NEW TESTAMENT. Copyright© 1958 by the Lockman Foundation (used by permission).

The author would like to acknowledge that the story used in chapter 3, on pages 11-13 is on original sermon illustration by Dr. Monroe Parker and is used by permission of Gospel Projects Press, P.O. Box 643, Milton, FL 32572: copyright 1977. www.childrensbibleclub.com

Copyright © 2015 by Joyce Meyer Ministries - Asia

All rights reserved. No part of this publication may be reproduced, distributed, or transmitted in any form or by any means, or stored in a database or retrieval system, without the prior written permission of Joyce Meyer Ministries - Asia.

Joyce Meyer Ministries - Asia
Plot No. 512/B, Road No. 30,
Jubilee Hills, Hyderabad - 500 033
Phone: +91-40-2300 6777

Website: www.jmmindia.org

A New Way of Living - *Kannada (R1-2015)*
*Understanding What It Means to Accept Christ*

*Printed at:*
Caxton Offset Pvt. Ltd.
Hyderabad - 500 004

# ಅನುಕ್ರಮಣಿಕೆ


| | | |
|---|---|---|
| 1. | ನೀವು ಯಾವತ್ತಿದ್ದರೂ ಮಾಡಬೇಕಾದ ಅತ್ಯಂತ ಪ್ರಾಮುಖ್ಯ ನಿರ್ಣಯ | 1 |
| 2. | ನಾವೆಲ್ಲರೂ ಪಾಪ ಮಾಡಿದ್ದೇವೆ | 6 |
| 3. | ಒಪ್ಪಿಸಿಕೊಡುವ ಸಮಯವಾಗಿದೆ | 13 |
| 4. | ಜೀವಿಸುವ ಒಂದು ನೂತನ ಮಾರ್ಗ | 20 |
| 5. | ಯೋಚನೆ ಮಾಡಲು ಒಂದು ನೂತನ ಮಾರ್ಗ | 30 |
| 6. | ಮಾತಾಡುವ ಒಂದು ನೂತನ ಮಾರ್ಗ | 39 |
| 7. | ನಿಮ್ಮನ್ನು ನೀವೇ ವಿವೇಚಿಸಿಕೊಳ್ಳುವ ಒಂದು ನೂತನ ಮಾರ್ಗ | 45 |
| 8. | ನಂಬಿಕೆಗೆ ಭಯವನ್ನು ವಿನಿಮಯ ಮಾಡು (ಅದಲು ಬದಲು) | 52 |
| 9. | ಆನಂದಿಸುವ ಜೀವಿತ | 57 |
| | ರಕ್ಷಣೆಯ ಪ್ರಾರ್ಥನೆ | 61 |
| | ಯುಕ್ತಿಸಾಧನೆಯ ಶಿಫಾರಸ್ಸು | 63 |

## ಅಧ್ಯಾಯ–1

# ನೀವು ಯಾವತ್ತಿದ್ದರೂ ಮಾಡಬೇಕಾದ ಅತ್ಯಂತ ಪ್ರಾಮುಖ್ಯ ನಿರ್ಣಯ

ನಿಮ್ಮ ಜೀವಿತದಿಂದ ನೀವು ಅತೃಪ್ತರಾಗಿದ್ದೀರೊ? ಹಾಗಿದ್ದಲ್ಲಿ, ನೀವು ಒಬ್ಬಂಟಿಗರಲ್ಲ, ಸಮಸ್ತ ಜನರು ಆಯಾಸಗೊಂಡಿದ್ದಾರೆ, ಬೇಸತ್ತಿದ್ದಾರೆ, ಬರಿದುಮಾಡಿಕೊಂಡಿದ್ದಾರೆ ಮತ್ತು ಅತೃಪ್ತರಾಗಿದ್ದಾರೆ. ಕೆಲವರು ಜೀವವಿಲ್ಲದೆ ಮತ್ತು ನಿಷ್ಕಾರಣವಾದ ಕಟ್ಟಳೆಗಳೊಂದಿಗೆ ಅದನ್ನು ಕಾಪಾಡಿಕೊಳ್ಳಲಾಗದವರಂತೆ ಪ್ರಯಾಸದಿಂದಿರುವುದಕ್ಕೆ, ಒಂದೇ ಒಂದು ಅಂದರೆ ಅವರು ತಮಗೆ ಹೇಗೆ ಅನ್ನಿಸುತ್ತದೆಯೋ ಹಾಗೆ ಅದಕ್ಕೆ ಮತೀಯ ನಿರೀಕ್ಷೆಯಲ್ಲಿ ಪರಿಹಾರ ಹುಡುಕಲು ಪ್ರಯತ್ನಿಸುತ್ತಿದ್ದಾರೆ. ನೀವು ದೇವರನ್ನು ನಿಮ್ಮ ಬರಿದಾದ, ಅಡ್ಡಿಪಡಿಸುವ, ಅಪರಾದ ಇಲ್ಲದಂತೆ ಮಾಡುವ ಜೀವಿತದಲ್ಲಿ ಪರಿಹಾರ ಹುಡುಕಲು ಪ್ರಯತ್ನಿಸಿದ್ದೀರಿ ಎಂಬುದು ಅದರ ತಾತ್ಪರ್ಯವಲ್ಲ.

ನೀವು ಪ್ರಿತಿಸಲ್ಪಡಬೆಕಾದರೆ, ನಿಮಗೆ ಒಬ್ಬ ಸ್ನೇಹಿತನು ಬೆಕಾಗಿದ್ದರೆ, ನಿಮ್ಮ ಪಾಪಗಳುಮನ್ನಿಸಲ್ಪಡಬೇಕಾದರೆ, ನಿಮಗೆ ಒಂದು ಒಳ್ಳೆಯ ಭವಿಷ್ಯಬೆಕಾದರೆ. . . . . ಯೇಸುಕ್ರಿಸ್ತನೇ ನಿಮ್ಮ ಉತ್ತರವಾಗಿದ್ದಾನೆ. ನಿಮಗೆ ಒಂದು ನೂತನ ಜೀವಿತವನ್ನು ಮತ್ತು ನಿಮ್ಮನ್ನು ಹೊಚ್ಚ ಹೊಸತರ ಸ್ರಷ್ಟಿಯಾಗಿಸಲು ಅವನು ಕಾತುರನಾಗಿದ್ದಾನೆ.

ನಿಮ್ಮ ಜೀವಿತದಲ್ಲಿ ನೀವು ತ್ರಪ್ತಿ ಹೊಂದದವರಾಗಿದ್ದರೆ, ಕೆಲವು ವಿಷಯಗಳನ್ನು ನೀವು ಬದಲಾವಣೆ ಮಾಡಿಕೊಳ್ಳಲೇ ಬೇಕು. ನಾವು ಯಾವಾಗಲೂ ಮಾಡುತ್ತಿರುವ ವಿಷಯಗಳನ್ನೇ ಮಾಡುತ್ತಾಹೋದರೆ, ನಮಗೆ ಯಾವಾಗಲೂ ಇರುವಂತಹ ಜೀವಿತವೇ ಇರುತ್ತದೆ. ನೀವು ಒಂದು ನಿರ್ಣಯವನ್ನು ಮಾಡಬೇಕಾಗಿದೆ ಮತ್ತು ಅದು ಯಾವತ್ತಿದ್ದರೂ ನೀವು ಮಾಡುವ ಪ್ರಾಮುಖ್ಯ ನಿರ್ಣಯವಾಗಿದೆ.

ನೀವು ಎಲ್ಲಿ, ಯಾವ ಉದ್ಯೋಗವನ್ನು ಆಯ್ದುಕೋಳ್ಳುತಿರಿ, ಯಾವ ವಿದ್ಯಾಲಯದಲ್ಲಿ ಓದುತ್ತೀರಿ; ಯಾರನ್ನು ಮದುವೆಯಾಗುತ್ತೀರಿ, ಯಾವ ರೀತಿಯಲ್ಲಿ ನಿಮ್ಮ ಹಣವನ್ನು ಉಪಯೋಗಿಸುತ್ತೀರಿ ಮತ್ತು ಎಲ್ಲಿ ವಾಸಿಸುತ್ತೀರಿ, ಈ ತೀರ್ಮಾನವು ಬಹು ಮುಖ್ಯವಾದದ್ದಾಗಿದೆ. ಈ ತೀರ್ಮಾನವು ನಿಮ್ಮ ನಿತ್ಯತ್ವವನ್ನು ತೀರ್ಮಾನಿಸುತ್ತದೆ. ನಿತ್ಯತ್ವವು ಅಂತ್ಯವಿಲ್ಲದ ಸಮಯ, ಅದನ್ನು ನಾವು ಎಲ್ಲಿ ಕಳೆಯುತ್ತೇವೆಂಬದನ್ನು, ನಮ್ಮಲ್ಲಿ ಪ್ರತಿಯೊಬ್ಬರು ತಿಳಿದುಕೊಳ್ಳುವುದು ಅವಶ್ಯವಾಗಿದೆ. ಮರಣಾನಂತರ ಅಲ್ಲಿ ಜೀವಿತವಿದೆ. ನೀವು ಯಾವಾಗ ಸಯುತ್ತೀರೋ ಆಗ ನೀವು ಅಸ್ಥಿತ್ವದಲ್ಲಿರುವದನ್ನು ನಿಲ್ಲಿಸುವುದಿಲ್ಲ, ನೀವು ಬರೊಂದು ಸ್ಥಳದಲ್ಲಿ ವಾಸಿಸಲು ಪ್ರಾರ್ಂಬಿಸುತ್ತಿರಿ. ನೈಸರ್ಗಿಕವದ ಬಾಗಿಲಿನಿಂದ ಹಾದು ಹೋಗುವರೀತಿಯಾಗಿದೆ ಎಂಬುದಾಗಿ ಹೆಲ್ಪಟ್ಟಿದೆ. ನೀವು ಸುಮ್ಮನೆ ಒಂದು ಸ್ಥಳವನ್ನು ಬಿಟ್ಟು ಮತ್ತೊಂದು ಸ್ಥಳಕ್ಕೆ ಹೋಗುವುದು.

ಈ ಲೋಕದಲ್ಲಿ ದೇವರೊಂದಿಗಿನ ಒಂದು ಸಂಬಂಧವನ್ನು ಪಡೆದುಕೊಳ್ಳಲು ಮತ್ತು ನಿತ್ಯಕಾಲಕ್ಕೂ ಆತನೊಂದಿಗೆ ಜೀವಿಸಲು ನೀವು ಇಷ್ಟಪಡುತ್ತೀರೊ? ಹಾಗಿದ್ದ ಪಕ್ಷದಲ್ಲಿ, ನೀವು ಯೇಸುಕ್ರಿಸ್ತನನ್ನು ನಿಮ್ಮ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವುದು ಅವಶ್ಯವಾಗಿದೆ. ನಾವೆಲ್ಲರೂ ಪಾಪಮಾಡಿದ್ದೇವೆ ಮತ್ತು ನಮ್ಮೆಲ್ಲರಿಗೂ ಒಬ್ಬ ರಕ್ಷಕನ ಅವಶ್ಯಕತೆಯಿದೆ. ನಮ್ಮ ಪಾಪಗಳ ನಿಮಿತ್ತ ದಂಡವನ್ನು ಹೊರುವುದಕ್ಕಾಗಿ ದೇವರು ತನ್ನ ಒಬ್ಬನೇ ಮಗನನ್ನು ಕಳುಹಿಸಿಕೊಟ್ಟನು. ಆತನು ಶಿಲುಬೆಗೆ ಹಾಕಲ್ಪಟ್ಟನು ಮತ್ತು ನಮ್ಮ ಕೆಟ್ಟನಡವಳಿಕೆಗೋಸ್ಕರ ಆತನ ನಿಷ್ಕಳಂಕವಾದ ರಕ್ತವನ್ನು ಕ್ರಯವಾಗಿ ಸುರಿಸಿದನು. ಅವನು ಸತ್ತು ಹೂಣಲ್ಪಟ್ಟನು, ಆದರೆ ಮೂರನೆಯ ದಿನದಲ್ಲಿ ಆತನು

ಸತ್ತವರೊಳಗಿಂದ ಎದ್ದು ಬಂದು ಈಗ ಪರಲೋಕದಲ್ಲಿ ತಂದಯಾದ ದೇವರ ಬಲ ಪಾರ್ಶ್ವದಲ್ಲಿ ಆಸೀನನಾಗಿದ್ದಾನೆ. ಆತನೊಬ್ಬನು ಮಾತ್ರ ನಿಮ್ಮ ಸಮಾಧಾನದ ನಿರೀಕ್ಷೆ, ಸಂತೋಷ ಮತ್ತು ದೇವರೊಂದಿಗೆ ಸ್ಥಿರವಾದ ನೆಲೆಯಾಗಿದ್ದಾನೆ.

ನಮ್ಮ ಪಾಪಗಳಿಂದ ರಕ್ಷಿಸಲ್ಪಡಬೇಕಾಗಿದ್ದರೆ, ನಾವು ಯೇಸುವನ್ನು ಕರ್ತನೆಂದು ಅರಿಕೆಮಾಡಿ ಒಪ್ಪಿಕೊಂಡು, ದೇವರು ಅವನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ನಮ್ಮ ಹೃದಯಗಳಲ್ಲಿ ನಂಬಬೇಕೆಂದು ಸತ್ಯವೇದವು ನಮಗೆ ಭೋದಿಸುತ್ತದೆ.

> ಯಾಕೆಂದರೆ, ನೀವು ಒಪ್ಪಿಕೊಂಡು, ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ನಿಮ್ಮ ಹೃದಯಗಳಲ್ಲಿನಂಬಿ (ಆತುಕೋಳ್ಳುವುದಕ್ಕೆ, ನಂಬುವುದರಲ್ಲಿ, ಮತ್ತು ಸತ್ಯದ ಮೇಲಿನ ವಿಶ್ವಾಸ) ತುಟಿಗಳಿಂದ ಅರಿಕೆಮಾಡಿದರೆ, ನೀವು ರಕ್ಷಿಸಲ್ಪಡುತ್ತೀರಿ. —ರೋಮ 10:9

ಈ ರೀತಿಯಿಂದ ನಂಬುವುದು ತಲೆಯ ಜ್ಞಾನಕ್ಕಿಂತಲೂ ಮಿಗಿಲಾದದ್ದು, ಯತಾರ್ಥವಾದದ್ದು ಮತ್ತು ಹೃದಯ ಸ್ಪರ್ಶದಿಂದ ತಿಳಿದದ್ದಾಗಿದೆ. ಬಹುಮಂದಿ ಒಬ್ಬ ದೇವರಿದ್ದಾನೆಂದು ನಂಬುತ್ತಾರೆ, ಆದರೆ ಆತನಿಗೆ ಅವರು ತಮ್ಮ ಜೀವಿತವನ್ನು ಒಪ್ಪಿಸಿಕೊಟ್ಟಿರುವುದಿಲ್ಲ. ದೇವರು ಜೀವನದ ಗ್ರಂಥಕರ್ತನಗಿದ್ದನೆ, ಮತ್ತು ಸ್ವಚಿತ್ತದಿಂದ, ಸಂತೋಷದಿಂದ ನಿಮ್ಮ ಜೀವಿತವನ್ನು ಆತನ ಕಡೆಗೆ ತಿರುಗಿಸಬೇಕೆಂದು ಅವನು ಆಶಿಸುತ್ತಾನೆ. ದೇವರು ನಿಮ್ಮನ್ನು ಸ್ವತ್ಂತ್ರ ಚಿತ್ತವುಲ್ಲವರಗಿ ಸೃಷ್ಟಿಮಾಡಿದನು ಮತ್ತು ಆತನನ್ನು ಆರಿಸಿಕೊಳ್ಳುವುದಕ್ಕೆ ನಿಮ್ಮನ್ನು ಅವನು ಒತ್ತಾಯಪಡಿಸುವುದಿಲ್ಲ ಆದರೆ ನೀವು ಮಾಡತ್ತಿರೋ ಈಲ್ಲವೋಎಂಬುದನ್ನು ಇಲ್ಲಿ ಈಲೋಕದಲ್ಲಿರುವಗಲೇ ನೀವು ಗುಣಮಟ್ಟದಲ್ಲಿನ ಅಂತರವನ್ನು ಸೃಷ್ಟಿಸಿಕೊಡುತ್ತದೆ, ಮತ್ತು ನೀವು ಸತ್ತಮೇಲೆ ನಿಮ್ಮ ನಿತ್ಯತ್ವವನ್ನು ಎಲ್ಲಿ ಕಳೆಯುತ್ತೀರಿ ಎಂಬುದನ್ನು ಅದು ನಿರ್ಧರಿಸುವ ಅಂಶವಾಗಿದೆ.

ನಿಮ್ಮ ಜೀವಿತವನ್ನು ಸಾಗಿಸುವ ಒಂದು ಒಳ್ಳೆಯ ಕೆಲಸವನ್ನು ನೀವು ಮಾಡಿದ್ದೀರೊ? ಇಲ್ಲದಿದ್ದರೆ, ನಿಮ್ಮನ್ನು ಸೃಷ್ಟಿಸಿದಾತನ ಕಡೆಗೆ ಮತ್ತು ನಿಮ್ಮನ್ನು ನೀವು ಅನೇಕಸಾರಿ ತಿಳಿದುಕೊಳ್ಳದೇ ಇದ್ದದ್ದಕಿಂತ ಹೆಚ್ಚಾಗಿ ನಿಮ್ಮನ್ನು

ತಿಳಿದುಕೊಂಡಿರುವಾತನ ಕಡೆಗೆ ಅದನ್ನು ಏಕೆ ತೆಗೆದುಕೊಂಡು ಹೋಗಬಾರದು. ನಾನು ಒಂದು ಮೋಟಾರು ಗಾಡಿಯನ್ನು ಕೊಂಡು ಕೊಂಡರೆ, ಅದು ತೊಂದರೆ ಕೊಡಲು ಪ್ರಾರಂಭವಾದಾಗ, ನಾನು ಅದನ್ನು ತಯಾರಿಮಾಡಿದವರ ಬಳಿಗೆ ತೆಗೆದುಕೊಂಡು ಹೋಗುತ್ತೇನೆ, ಅವರು ಅದನ್ನು ಸರಿಮಾಡಬಲ್ಲರು. ದೇವರೊಂದಿಗೆ ಇರುವ ಸಿದ್ಧಾಂತ ಇದೇ ರೀತಿಯಾಗಿದೆ. ಆತನು ನಿಮ್ಮನ್ನು ಸೃಷ್ಟಿಸಿ, ನಿಮ್ಮನ್ನು ಬಹಳವಾಗಿ ಪ್ರೀತಿಸುತ್ತಾನೆ. ನಿಮಗೆ ನಿಮ್ಮ ಜೀವಿತವು ತೃಪ್ತಿಯಾಗಿರದಿದ್ದರೆ, ಅದನ್ನು ಆತನ ಸನ್ನಿಧಿಗೆ ತೆಗೆದುಕೊಂಡು ಹೋಗಿರಿ, ಅವನು ಅದನ್ನು ಸರಿಪಡಿಸುವನು.

ಮೊದಲೇ ನಾನು ನಿಮಗೆ ಹೇಳಿದಂತೆ ನೀವು ಒಂದು ನಿರ್ಣಯವನ್ನು ಮಾಡದ ಹೊರತು ಯಾವುದೂ ಬದಲಾಗುವುದಿಲ್ಲ. ಒಬ್ಬ ಕ್ರೈಸ್ತನಾಗಲು ನಿಮಗೆ ಆಶೆಯಿದೆಯೇ? ನಿಮ್ಮ ಪಾಪವನ್ನು ಮಾತ್ರವಲ್ಲದೇ ಹಾಗೆಯೇ ನಿಮ್ಮ ಜೀವಿತವನ್ನು ಕೂಡ ದೇವರಿಗೆ ಒಪ್ಪಿಸಿಕೊಡಲು ನೀವು ಸಿದ್ಧರಾಗಿದ್ದೀರೋ? ನಿಮ್ಮ ಪಾಪಮಯ ಮಾರ್ಗಗಳಿಂದ ಹಿಂತಿರುಗಲು ಮತ್ತು ದೇವರೊಂದಿಗೆ ಮತ್ತು ದೇವರಿಗಾಗಿ ಜೀವಿಸಬೇಕಾಗಿರುವ ಒಂದು ಹೊಚ್ಚಹೊಸ ಜೀವಿತದಲ್ಲಿ ಜೀವಿಸುವುದು ಹೇಗೆ ಎಂದು ಕಲಿತುಕೊಳ್ಳಲು ನೀವು ಸಿದ್ಧರಾಗಿದ್ದೀರೋ? ಹಾಗಿದ್ದ ಪಕ್ಷದಲ್ಲಿ, ಓದುತ್ತಾ ಮುಂದುವರಿಯುವುದಾದರೆ, ನೀವು ಬಹುಶಃ ಊಹಿಸಬಲ್ಲ ಅತ್ಯುತ್ತಮ ವಿಷಯ, ದೂರದಲ್ಲಿ ನಿಮಗೋಸ್ಕರ ಒಂದು ಜೀವಿತ ಅಲ್ಲಿ ಕಾಯ್ದಿರಿಸಲ್ಪಟ್ಟಿದೆ. ಆದು ಎಲ್ಲರಿಗೂ ದೊರೆಯುವಂಥದ್ದಾಗಿದೆ. ಯಾರನ್ನೂ ಬಿಟ್ಟಿಲ್ಲ. ಇದನ್ನೇ ದೇವರು ನಿಮ್ಮ ಭವಿಷ್ಯದ ವಿಷಯದಲ್ಲಿ ಹೇಳುವವನಾಗಿದ್ದಾನೆ.

> ನಾನು ನಿಮ್ಮ ಭವಿಷ್ಯದಲ್ಲಿ ಮಾಡಿಕೊಳ್ಳುತ್ತಿರುವ ಆಲೋಚನೆಗಳನ್ನು ನಾನೇ ಬಲ್ಲೆನು; ಅವು ಅಹಿತದ ಯೋಚನೆಗಳಲ್ಲ, ಹಿತದ ಯೋಚನೆಗಳೇ (ಯೆರೇಮಿಯ 29:11) ಎಂದು ಯೆಹೋವನು ಹೇಳುತ್ತಾನೆ.

ನಿಮಗೋಸ್ಕರ ಯಾರೂ ನಿಮ್ಮ ಆಯ್ಕೆಯನ್ನು ಮಾಡಲಾರರು. ಅದು ನಿಮ್ಮದೆ ಮತ್ತು ನೀವಾಗಿ ನೀವೆ ಮಾಡತಕ್ಕದ್ದಾಗಿದೆ. ಎಂತಹ ಗುಣಮಟ್ಟದ ಜೀವಿತವನ್ನು

ನೀವು ಹೊಂದಲು ಇಚ್ಚಿಸುತ್ತೀರಿ? ಇಂದು ನಮ್ಮ ಸಮಾಜದಲ್ಲಿ ನೀವು ನೋಡುವ ಮಾದರಿಗಳನ್ನೇ ಹಿಂಬಾಲಿಸಲು ನಿಜವಾಗಿ ನಿಮಗೆ ಇಷ್ಟವಿದೆಯೊ? ನಾವು ಲೋಕದೊಳಕ್ಕೆ ಏನು ತಕ್ಕೊಂಡು ಬರಲಿಲ್ಲಿವಷ್ಟೆ; ಅದರೊಳಗಿಂದ ಏನು ತಕ್ಕೊಂಡು ಹೋಗಲಾರೆವೂ (ತಿಮೋತಿ 6:7) ದೇವರು ಆಲ್ಫಾ ಮತ್ತು ಒಮೇಗ ಆಗಿದ್ದಾನೆ, ಪ್ರಾರಂಭವೂ ಅಂತ್ಯವೂ ಆಗಿದ್ದಾನೆ. ಆದಿಯಲ್ಲಿ ದೇವರಿದ್ದನು, ಅಂತ್ಯದಲ್ಲೂ ದೇವರು ಇರುವನು. ಪ್ರತಿಯೊಬ್ಬನು ತನ್ನ ತನ್ನ ವಿಷಯವಾಗಿ ದೇವರ ಮುಂದೆ ಉತ್ತರ ಕೊಡಬೇಕು. (ರೋಮ 14:12) ಅದಕೋಸ್ಕರ ಸಿದ್ದರಾಗುವುದಕ್ಕೆಇದೇ ಒಳ್ಳೆಯ ಸಮಯ! ಸಿದ್ಧರಾಗಿದ್ದೀರೋ ಇಲ್ಲವ್ರೋ,ಯೇಸು ಬರುತ್ತಾನೆ ಎಂದು ನಾನು ಯಾವಾಗಲೂ ಹೇಳುತ್ತೇನೆ. ಈಗ ಸಿದ್ದರಾಗಿ, ಈಗಲೇ ಸರಿಯಾದ ನಿರ್ಣಯ ಮಾಡಿಕೊಳ್ಳಿರಿ, ಯಾಕೆಂದರೆ ಆ ಮೇಲೆ ಬಹಳ ತಡವಾದೀತು.

## ಅಧ್ಯಾಯ–2

# ನಾವೆಲ್ಲರೂ ಪಾಪ ಮಾಡಿದ್ದೇವೆ

ಪಾಪವೆಂಬುದು ತಿಳಿದಿರುವಂಥ ದೇವರ ಚಿತ್ತಕ್ಕೆ ಉದ್ದೇಶಪೂರ್ವಕವಾದ ಅವಿಧೇಯತೆಯಾಗಿದೆ. ನಾವೆಲ್ಲರೂ ಪಾಪಮಾಡಿದ್ದೇವೆ. ಪಾಪಮಾಡದೆ ಇರತಕ್ಕ ಒಬ್ಬ ಮನುಷ್ಯನಾದರೂ ಈ ಲೋಕದಲಿಲ್ಲ (ರೋಮ.3:23, ಪ್ರಸಂಗಿ 7:20) ಅದೇ ಒಂದು ದುಃಖಕರವಾದ ಸುದ್ದಿ, ಆದರೆ ಅಲ್ಲಿಂಯೂ ಕೂಡ ಶುಭವರ್ತಮಾನಗಳಿವೆ. ನಾವೆಲ್ಲರೂ ಕ್ಷಮಿಸಲ್ಪಡಬಲ್ಲೆವು ಮತ್ತು ದೇವರೊಂದಿಗೆ ಸಮಾಧಾನ ಮಾಡಿಕೊಳ್ಳಬಲ್ಲೆವು.

ಎಲ್ಲರೂ ಪಾಪಮಾಡಿದ್ದರಿಂದ, ದೇವರು ದಯಪಾಲಿಸುವಂಥವುಗಳ ಮತ್ತು ಪುರಸ್ಕರಿಸುವಂಥವುಗಳ ಘನತೆಯನ್ನು ಮತ್ತುಮಹಿಮೆಯನ್ನು ಹೊಂದದೇ ಹೋಗಿದ್ದಾರೆ.

(ಎಲ್ಲರೂ) ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ. ಅವರು ನೀತಿವಂತರೆಂದು ನಿರ್ಣಯ ಹೊಂದದೇ ಹೋಗಿದ್ದಾರೆ. ಅವರು ನೀತಿವರೆಂದು ನಿರ್ಣಯ ಹೊಂದುವುದು ದೇವರ ಉಚಿತಾರ್ಥವಾದ ಕೃಪೆಯಿಂದಲೇ (ಆತನ ಹೇಳಲಸಕ್ಯವಾದ ಪ್ರೀತಿ ಮತ್ತು ಕರುಣೆ) ಕ್ರಿಸ್ತಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವುದು.

—ರೋಮ 3:23–24

*ನಾವೆಲ್ಲರೂ ಪಾಪ ಮಾಡಿದ್ದೇವೆ*

ನಿಮ್ಮ ಪಾಪಗಳಿಗಾಗಿ ಈಗಾಗಲೇ ಯೇಸು ಬೆಲೆ ಕೊಟ್ಟಿದ್ದಾನೆ; ಈಗ ನೀವು ಮಾಡಬೇಕಾದದ್ದೆಲ್ಲವೂ ಏನೆಂದರೆ ಅವನನ್ನು ನಂಬಿ ಸ್ವೀಕಾರ ಮಾಡುವುದು. ನೀವು ನಿಮ್ಮ ಪಾಪಗಳನ್ನು ಒಪ್ಪಿಕೊಂಡು, ಅವುಗಳಿಗೋಸ್ಕರ ಪಶ್ಚಾತ್ತಾಪಪಟ್ಟು, ಅವುಗಳಿಂದ ಸಂಪೂರ್ಣವಾಗಿ ತಿರುಗಿಕೊಳ್ಳುವುದಾದರೆ ದೇವರು ನಿಮ್ಮನ್ನು ಕ್ಷಮಿಸುವನು ಮತ್ತು ನಿಮ್ಮನ್ನು ಒಬ್ಬ ನೂತನ ಮನುಷ್ಯರನ್ನಾಗಿ ಮಾಡುವನು.

> ನಮ್ಮ ಪಾಪಗಳನ್ನು (ಯಾವ ಅಡ್ಡಿಯಿಲ್ಲದೆ) ಒಪ್ಪಿಕೊಂಡು ಅರಿಕೆ ಮಾಡಿದರೆ, ಆತನು ನಂಬಿಗಸ್ತನೂ ನೀತಿವಂತನೂ (ತನ್ನ ಸ್ವಭಾವಕ್ಕೆ ಮತ್ತು ವಾಗ್ದಾನಗಳಿಗೆ ಸತ್ಯವಂತನು) ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು (ನಮ್ಮ ಅನೀತಿಗಳನ್ನು ವಜಾಮಾಡುತ್ತಾನೆ) ಸಕಲ ಅನೀತಿಯನ್ನು ಪರಿಹರಿಸಿ (ಸಂಪೂರ್ಣವಾಗಿ) ನಮ್ಮನ್ನು ಶುದ್ಧಮಾಡುವನು. (ಸತತವಾಗಿ ಅಂದರೆ ಯಾವುದು ಆತನ ಉದ್ದೇಶದಲ್ಲಿ ಇಲ್ಲವೊ ಮತ್ತು ಯಾವುದು ದೃಢತೆಯಲ್ಲಿ ಇಲ್ಲವೋ ಅಂತಹ ಯೋಚನೆಗಳನ್ನು ಮತ್ತು ಕ್ರಿಯೆಗಳನ್ನು). —1 ಯೋಹಾನ 1:9

ಏನಾದರು ಒಂದನ್ನು ಮಾಡುಬೇಕೆಂದು ನೀವು ದೇವರ ಮೇಲೆ ಕಾಯಬೇಕಾದ ಅವಶ್ಯಕತೆಯಿಲ್ಲ. ಮಾಡಬೇಕೆಂದಿರುವ ಅಗತ್ಯತೆಗಳನ್ನೆಲ್ಲಾ ಅವನು ಆಗಲೇ ಮಾಡಿದ್ದಾನೆ. ನಮ್ಮ ಸ್ಥಾನದಲ್ಲಿ ಸಾಯುವುದಕ್ಕಾಗಿ ಆತನು ತನ್ನ ಒಬ್ಬನೇ ಮಗನನ್ನು ಕೊಟ್ಟನು, ಯಾಕೆಂದರೆ ನಮ್ಮ ದುಷ್ಕೃತ್ಯಗಳಿಗೋಸ್ಕರ ದಂಡಕೊಡುವುದಕ್ಕೆ ಒಂದು ಪರಿಪೂರ್ಣವಾದ ಮತ್ತು ಪಾಪರಿಹತವಾದ ಯಜ್ಞಾರ್ಪಣೆ ಮಾತ್ರ ಅರ್ಪಿಸಲ್ಪಡಬಹುದಾಗಿದೆ. ನ್ಯಾಯಕ್ಕೆ ತೃಪ್ತಿಸಿಕ್ಕಿದೆ,ಮತ್ತು ನಾವು ಯೇಸಿಕ್ರಿಸ್ತನನ್ನು ನಂಬುವದರ ಮೂಲಕ ಸ್ವತಂತ್ರವಾಗಿ ಹೋಗುಬಹುದು ಮತ್ತು ಆತನ ಮೂಲಕ ದೇವರ ಬಳಿಗೆ ಅತ್ಯಂತ ಹತ್ತಿರದ ಭಂದುತ್ವದಲ್ಲಿ ಪ್ರವೇಶ ಮಾಡಬಹುದು. ನಾವು ಸ್ವಂತ ಆಧಾರದ ಮೇಲೆ ದೇವರ ಬಳಿಗೆ ಹೋಗಲಾರೆವು–ನಮಗೆ ಒಬ್ಬ ವಕೀಲನ ಅವಶ್ಯಕತೆ ಇದೆ. ಮದ್ಯಸಿಕೆಯಲ್ಲಿ ಬರುವ ಹಾಗೆ ಯಾರಾದರೊಬ್ಬರು ಅವಶ್ಯ, ಆ

ಒಬ್ಬನೇ ಯೇಸುವಾಗಿದ್ದಾನೆ. ನಮ್ಮ ಮತ್ತು ದೇವರ ಮಧ್ಯದಲ್ಲಿದ್ದ ಅಂತರದಲ್ಲಿ ಯೇಸು ಪ್ರತ್ಯಕ್ಷನಾದನು, ಆ ಅಂತರವನ್ನು ನಮ್ಮ ಪಾಪಗಳೇ ಸೃಷ್ಟಿಸಿದವು, ಮುಖ್ಯವಾಗಿ ಆತನೇ ನಮ್ಮನ್ನು ದೇವರ ಬಳಿಗೆ ಕರೆತರುತ್ತಾನೆ.

ಒಂದು ಮಗುವಿನೊಲಗೆ ತನ್ನ ತಂದೆ ಇರುವಂತೆ (ಆತನ ರಕ್ತ, ಡಿ.ಎನ್.ಎ, ಕ್ರೋಮೋಸೊಮ್ ಇತ್ಯಾದಿ) ಇವೆಲ್ಲವುಗಳಂತೆ ದೇವರು ತನಗಾಗಿ ಲೋಕವನ್ನು ತನ್ನ ಕಡೆಗೆ ಸೆಳೆದುಕೊಂಡು ಸಂಧಾನ ಮಾಡಿಕೊಳ್ಳಲು ದೇವರು ಕ್ರಿಸ್ತನಲ್ಲಿದ್ದನು. ದೇವರು ತಾನು ಸೃಷ್ಟಿಸಿದ ಜನರನ್ನು (ಮಾನವರನ್ನು) ಪ್ರೀತಿಸುತ್ತಾನೆ ಮತ್ತು ತಪ್ಪಿಸಿಕೊಳ್ಳಲು ಯಾವ ಮಾರ್ಗವನ್ನು ತೋರಿಸಿಕೊಡದೆ ಇದ್ದಂಥ ಪಾಪದ ಗುಲಾಮತನದೊಳಗೆ ಮಾರಲ್ಪಟ್ಟವರನ್ನು ನೋಡುವುದಕ್ಕೆ ಆತನಿಗೆ ಇಷ್ಟವಿಲ್ಲ. ಆದರೆ ತಪ್ಪಿಸಿಕೊಳ್ಳಲು ಇರುವ ಒಂದೇ ಮಾರ್ಗ ಯೇಸುವೇ ಆಗಿದ್ದಾನೆ.

## ಪಾಪವು ಶಾಪವನ್ನು ತರುತ್ತದೆ

ನಮ್ಮ ಪಾಪಗಳೇ ನಮ್ಮನ್ನು ಹಿಡಿದುಕೊಡುತ್ತದೆ ಎಂದು ದೇವರ ವಾಕ್ಯ ಹೇಳುತ್ತದೆ. (ಅರಣ್ಯ ಕಾಂಡ 32:33) ಪಾಪವು ಶಾಪವನ್ನು ತರುತ್ತದೆ ಆದರೆ ವಿಧೇಯತ್ವ ಆಶೀರ್ವಾದವನ್ನು ತರುತ್ತದೆ (ಧರ್ಮೋಪದೇಶಕಾಂಡ 28). ಒಂದು ಸಮಯದವರೆಗೆ ಒಬ್ಬ ಮನುಷ್ಯನು ತನ್ನ ಪಾಪಗಳ ಜೊತೆಯಲ್ಲಿ ಮುಂದುವರಿಯುತ್ತಾನೆ ಎಂದು ಅದು ತೋರಿಸಿಕೊಳ್ಳಬಹುದು. ಅವರ ಜೀವಿತವು ಬಹಳ ಚೆನ್ನಾಗಿ ಎಲ್ಲರಂತೆಯೇ ಮುಂದುವರಿಯಬಹುದು, ಆದರೆ ಅಂತ್ಯದಲ್ಲಿ ಅವರು ಮಾಡಿದ ಆಯ್ಕೆಗಳ ಫಲಿತಾಂಶವು ಯಾವಾಗಲೂ ಸಾಕ್ಷಿಯಾಗಿ ನಿಲ್ಲುತ್ತದೆ.

ದೇವರಿಗೆ ವಿಧೇಯತೆಯ ಜೀವಿತದ ಬದಲು ಪಾಪದ ಜೀವಿತವನ್ನು ನಾವು ಆರಿಸಿಕೊಂಡಾಗ ನಮ್ಮ ಆತ್ಮಗಳಲ್ಲಿ ದುಃಖಾವಸ್ತೆಯನ್ನು ನಾವು ಅನುಭವಿಸುತ್ತೇವೆ. ಮನುಷ್ಯನು ಮಾಂಸ ಮತ್ತು ಮೂಳೆಗಳಿಂದ ಮಾಡಲ್ಪಟ್ಟ ದೇಹಕ್ಕಿಂತ ಹೆಚ್ಚಾದವನು.

ಅವನು ಒಂದು ಆತ್ಮವಾಗಿದ್ದಾನೆ ಮತ್ತು ಬುದ್ಧಿ, ಸ್ಥಿರತೆ, ಉದ್ವೇಗ ಇವುಗಳನ್ನು ಒಳಗೊಂಡಿರುವಂಥ ಒಂದು ಜೀವಾತ್ಮವಿದೆ. ಅದು ಮನುಷ್ಯನ ಒಂದು ವ್ಯಕ್ತಿತ್ವವಾಗಿದೆ. ಪಾಪವಮಾಡಿದವರು ತಮ್ಮ ಮನಸ್ಸಿನಲ್ಲೇ ನೋವನ್ನು ಅನುಭವಿಸುತ್ತಾರೆ. ಅವರು ಮಾನಸಿಕ ವೇದನೆಯಿಂದ ತುಂಬಿದವರಾಗಿದ್ದಾರೆ, ಮತ್ತು ಅವರು ಏನೆಮಾಡಿದ್ದಾಗ್ಯೂ ಅಥವಾ ಹೊಂದಿದವರಾಗಿದ್ದರೂ ಪರವಾಗಿಲ್ಲ, ಅವರನ್ನು ಸಂಪೂರ್ಣವಾಗಿ ತೃಪ್ತಿಗೊಳಿಸುವಂಥದ್ದು ಒಂದು ಇಲ್ಲ. ಅವರು ಉದ್ವೇಗದಿಂದ ನರಳುತ್ತಾರೆ. ಅವರು ತಮ್ಮ ಸ್ವಂತಜೀವಿತವನ್ನು ಸಾಗಿಸುವುದಕ್ಕೆ ಅವರು ಆರಿಸಿಕೊಂಡದ್ದರಿಂದ, ಅವರ ಮಾರ್ಗದಲ್ಲಿ ವಿಷಯಗಳು ಸಾಗದೆ ಹೋದಾಗ, ಆಶಾಭಂಗಪಟ್ಟವರು ಮತ್ತು ಕೋಪೋದ್ರೇಕವುಳ್ಳವರು (ಉದ್ವೇಗದಿಂದ ಉದ್ರಿಕ್ತಗೊಳ್ಳುವವರು) ಆಗುತ್ತಾರೆ. ನಂಬಿಕೆಯ ಮಾರ್ಗದ ವಿಷಯವೇ ಅವರಿಗೆ ಗೊತ್ತಿಲ್ಲ. ದೇವರನ್ನು ನಂಬುವುದರಿಂದ ತಮಗಿಂತ ಬಲವಾದ ಒಂದು ಶಕ್ತಿ ಇದೆ ಎಂದು ಅವರಿಗೆ ತಿಳಿದುಕೊಳ್ಳಲಾಗದಾಗಿದೆ. ಅವರು ಎಂದಿಗೂ ತಮ್ಮ ಆತ್ಮಗಳಲ್ಲಿ ಸಮಾಧಾನ ಹೊಂದುವುಲ್ಲ, ಯಾಕೆಂದರೆ ಆತನಲ್ಲಿ ನಂಬಿಕೆ ಇಡುವುದರ ಮೂಲಕ ದೇವರ ಸಮಾಧಾನವನ್ನು ಯಾರೊ ಒಬ್ಬರು ಮಾತ್ರ ಹೊಂದಬಹುದು, (ಇಬ್ರೀಯ 4:3)

ಹೌದು, ಪಾಪಮಯವಾದ ಜೀವಿತ ಶಾಪಗಳಿಂದ ತುಂಬಿದ ಜೀವಿತವಾಗಿದೆ. ಅದರಿಂದ ಒಳ್ಳೆಯದೇನು ಹೊರಗೆ ಬರುವುದಿಲ್ಲ. ದೇವರಿಲ್ಲದೇ ಜೀವಿಸುವುದಕ್ಕೆ ಪ್ರಯತ್ನ ಪಡುವ ವ್ಯಕ್ತಿಯ ಕುರಿತು ಹೊರಬರುವ ವಿಷಯದಲ್ಲಿ ದೇವರು ಇದನ್ನೇ ಹೇಳುತ್ತಾನೆ.

ಯೆಹೋವನಾದ ನನಗೆ ಜನರು ಪಾಪಮಾಡಿದ ಕಾರಣ ಕುರುಡರಂತೆ ನಡೆಯುವ ಹಾಗೆ ಅವರನ್ನು ಸಂಕಟಪಡಿಸುವೆನು; ಅವರ ರಕ್ತವು ಧೂಳಿನಂತೆ ಚೆಲ್ಲಿಹೋಗುವದು, ಅವರ ಮಾಂಸವು ಮಲದ ಹಾಗೆ ಬಿದ್ದಿರುವುದು.

"ಯೆಹೋವನ ರೌದ್ರದ ದಿನದಲ್ಲಿ ಅವರ ಬೆಳ್ಳಿಬಂಗಾರಗಳು ಕೂಡ ಅವರನ್ನು ರಕ್ಷಿಸಲಾರವು; ಆತನ ರೋಷಾಗ್ನಿಯು ದೇಶವನ್ನೆಲ್ಲಾ ನುಂಗಿಬಿಡುವುದು;

ಆತನು ದೇಶನಿವಾಸಿಗಳೆಲ್ಲರನ್ನೂ ಕೊನೆಗಾಣಿಸುವನು,ಹೌದು, ಘೋರವಾಗಿ ನಿರ್ಮೂಲ ಮಾಡುವನು." —ಚೆಫನ್ಯ 1:17–18

ಈ ವಾಕ್ಯಗಳು ಭಯಪಡಿಸುವಂಥವುಳಾಗಿವೆ, ಆದರೆ ಕ್ರಿಸ್ತಯೇಸುನಿನಲ್ಲಿ ಯತಾರ್ಥವಾಗಿ ನಂಬಿಕೆಯಿಡುವವರ ಹೃದಯದಲ್ಲಿ ಅವರು ಭಯ ಪಡುವ ಅವಶ್ಯಕತೆಯಿಲ್ಲ.

"ಆತನನ್ನು ನಂಬುವವನಿಗೆ ತೀರ್ಪು ಆಗುವುದಿಲ್ಲ; ಆದರೆ ನಂಬದವನಿಗೆ ದೇವರ ಒಬ್ಬನೇ ಮಗನ ಹೆಸರನ್ನು ನಂಬದೆ ಹೋದವರಿಂದ ಆಗಲೇ ತೀರ್ಪು ಆಗಿಹೋಯಿತು." (ಯೋವಾನ 3:18)

## ಅಪರಾಧ ಮತ್ತು ದಂಡನೆ

ಪಾಪಿಯ ಸತತವಾಗಿರುವ ಜೊತೆಗಾರನು ಅಪರಾಧಿ, ಅದನ್ನು ಅಲಕ್ಷ್ಯ ಮಾಡಲು ಅವನು ಅನೇಕ ಬೇರೆ ಬೇರೆ ವಿಷಯಗಳನ್ನು ತರಬಹುದು, ಅದರೆ ಅಂತರಾಳದಲ್ಲಿ ಅವನ ಜೀವಿತವು ಸರಿಯಿಲ್ಲ ಎಂದು ಅವನು ತಿಳಿದಿದ್ದಾನೆ. ಅಪರಾಧದಿಂದ ತಪ್ಪಿಸಿಕೊಳ್ಳುವುದಕ್ಕೆ ಪಾಪಿಗಳಿಗೆ ಆಸಾಧ್ಯ ಎಂದು ಯೇಸು ಹೇಳಿದನು. (ಯೋಹಾನ 9:41)

ಸತ್ಯವೇದವು ಹಳೆಯ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ ಎಂದು ವಿಭಾಗಿಸಲ್ಪಟ್ಟಿದೆ. ಅದು ಹಳೆಯದಾಗಿದೆ ಎನ್ನುವ ಹಾಗೆ ಹಳೆಯ ಒಡಂಬಡಿಕೆ ಇದೆ. ಅದು ಹಳೆಯ ಒಪ್ಪಂದವನ್ನು ತೊರಿಸುತ್ತದೆ, ಯೇಸು ಒಂದು ಹೊಸ ಒಪ್ಪಂದವನ್ನು ಸ್ತಪಿಸುವ ಆ ಸಮುಯುದವರೆಗೆ ಜನರ ಪಾಪಗಳನ್ನು ಮರೆಯಾಗಿಡುವುದಕ್ಕೆ ದೇವರು ಉಪಯೇಗಿಸಿಕೊಂಡ ಒಂದಾಗಿತ್ತು. ಪಾಪಗಳಿಗಾಗಿ ಯಜ್ಞಾರ್ಪಣೆಯುನ್ನು ಮಾಡುವ ಕ್ರಮುದ ಮೂಲಕ, ಜನರ ಪಾಪಗಳು ಮುಚ್ಚಲ್ಪಡಬಹುದಾಗಿತ್ತೇ ಹೊರತು ಪಾಪವನ್ನು ಎಂದಿಗೂ ತೆಗೆಯುಲು ಸಾದ್ಯವಿರಲಿಲ್ಲ. ಅಪರಾಧವು ಯಾವಾಗಲು ಇತ್ತು. ಹಾಗಿದ್ದಗ್ಯೂ ಹೊಸ

ಒಡಂಬಡಿಕೆಯಲ್ಲಿ, ಹೊಸ ವಾಗ್ದನದ ಅಡಿಯಲ್ಲಿ ನಮಗೆ ಸಂಪೂರ್ಣವಾದ ಮತ್ತು ಕಡೇಯ ಯಜ್ಞಾರ್ಪಣೆಯಿದೆ ಅದು ಪಾಪವನ್ನು ಮುಚ್ಚಿಡುವುದಕ್ಕಲ್ಲಾ, ಬದಲು ಸಂಪೂರ್ಣವಾಗಿ ತೆಗೆದುಹಾಕುತ್ತದೆ. ಅದು ಪಾವನ್ನು ಮಾತ್ರವಲ್ಲ ಅದರ ಜೇತೆಯಲ್ಲೇ ಸಾಗುವ ಅಪರಾಧವನ್ನು ಕೂಡ ಹೊಗಲಾಡಿಸುತ್ತದೆ.

ದಯವಿಟ್ಟು, ಈ ಕೆಳಗಿರುವ ದೈವವಾಕ್ಯವನ್ನು ನಿಧಾನವಾಗಿ ಓದಿ ಮತ್ತು ಅವುಗಳು ಹೇಳುವುದರ ಶಕ್ತಿಯನ್ನು ವಿಮರ್ಶಿಸಿರಿ. ಇವೆಲ್ಲವುಗಳೂ ಇಬ್ರೀಯ 10ನೆಯ ಅಧ್ಯಾಯದಿಂದ  ಆರಿಸಲ್ಪಟ್ಟಿದೆ.

> ದೇವರ ಚಿತ್ತದಂತೆ ಅನುಸರಿಸುವುದಲ್ಲಿ, ಯೇಸು ಕ್ರಿಸ್ತನು (ಅಭಿಶಕ್ತನು) ಒಂದೇ ಸಾರಿ ದೇಹ ಸಮರ್ಪಣೆ ಮಾಡಿ ದೇವರ ಚಿತ್ತವನ್ನು ನೆರವೇರಿಸಿದರಿಂದಲೇ ನಾವು ಶುದ್ಧರಾದೆವು. (ಸಮರ್ಪಿಸಿಕೊಂಡು ಮತ್ತು ಪರಿಶುದ್ಧರನ್ನಾಗಿ ಮಾಡಿದನು). —ಇಬ್ರೀಯ 10:10

> ಆದರೆ ಈ ಯಾಜಕನು (ಕ್ರಿಸ್ತನು) ಪಾಪನಿವಾರಣೆಗೋಸ್ಕರ ನಿರಂತರವಾಗಿ ನಿಲ್ಲುವ ಒಂದೇ ಯಜ್ಞವನ್ನು ಸಮರ್ಪಿಸಿ ದೇವರ ಬಲಗಡೆಯಲ್ಲಿ ಕೂತುಕೊಂಡನು. —ಇಬ್ರೀಯ 10:12

> ಆ ದಿನಗಳು ಬಂದ ಮೇಲೆ ನಾನು ಅವರ ಸಂಗಡ ಮಾಡಿಕೊಳ್ಳುವ ಒಡಂಬಡಿಕೆಯು (ಹೊಸ ಒಡಂಬಡಿಕೆ) ಹೀಗಿರುವುದು ನನ್ನ ಆಜ್ಞೆಗಳನ್ನು ಅವರ ಹೃದಯಲ್ಲಿ ಇಡುವೆನು,ಅವರ ಮನಸ್ಸಿನ ಮೇಲೆ ಅವುಗಳನ್ನು ಬರೆಯುವೆನು ಎಂದು ಕರ್ತನು ನುಡಿಯುತ್ತಾನೆ, (ಅವರ ಅಂತರಾಳದ ಆಲೋಚನೆ ಮತ್ತು ತಿಳುವಳಿಕೆಗಳ ಮೇಲೆ)

> ಎಂಬುದಾಗಿ ಹೇಳಿದ ಮೇಲೆ ಇನ್ನು- ಅವರ ಪಾಪಗಳನ್ನೂ ಅವರ ದುಷ್ಕೃತ್ಯಗಳನ್ನೂ ನನ್ನ ನೆನಪಿಗೆ ಎಂದಿಗೂ ತರುವುದಿಲ್ಲ ಎಂದು ಹೇಳಿತ್ತಾನೆ. —ಇಬ್ರೀಯ 10:16–17

> ಆದಕಾರಣ ನೀನಪರಾಧಿಯೆಂದು ನಮ್ಮ ಮನಸ್ಸು ನಮಗೆ ಸಾಕ್ಷಿ ಹೇಳದಂತೆ ನಾವು ಹೃದಯವನ್ನು ಪ್ರೋಕ್ಷಿಸಿಕೊಂಡು (ಮನುಷ್ಯನ ಸಂಪೂರ್ಣವಾದ ವ್ಯಕ್ತಿತ್ವ ದೇವರ ಮೇಲೆ ನಿರ್ಭದವಿಲ್ಲದ ಆತನ ಬಲ, ಜ್ಞಾನ, ಮತ್ತು ಒಳ್ಳೆಯತನ ಆ ರೀತಿಯ ಒಲವಿನಿಂದ) ದೇಹವನ್ನು ತಿಳಿನೀರಿನಿಂದ ತೊಳೆದುಕೊಂಡು ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ, ಯತಾರ್ಥ ಹೃದಯವುಳ್ಳರಾಗಿಯೂ (ಪ್ರಾಮಾಣಿಕತೆ ಮತ್ತು ನಿಷ್ಕಪಟ)ದೇವರ ಬಳಿಗೆ ಬರೋಣ. —ಇಬ್ರೀಯ 10:22

ಈ ವೇದ ವಾಕ್ಯಗಳು ನಮಗೆ ಬಹಳ ಪ್ರಾಮುಖ್ಯವಾದ ಮತ್ತು ಸುಂದರವಾದ ಅನೇಕ ವಿಷಯುಗಳನ್ನು ಸೂಚಿಸುತ್ತವೆ. ಮೊದಲನೆಯದು, ಒಂದೇ ಸಾರಿಗೆ ಯೇಸುಕ್ರಿಸ್ತನು ಒಂದು ಯಜ್ಞಾರ್ಪಣೆ ಮಾಡಿಕೊಂಡನು ಮತ್ತು ಆತನ ಈ ಯಜ್ಞಕ್ಕೆ ಬೇರೆ ಯಾವುದೇ ಯಜ್ಞಾರ್ಪಣೆಯನ್ನು ಅರ್ಪಿಸುವ ಅವಶ್ಯಕತೆಯಿಲ್ಲ. ಹಳೆಯ ಒಡಂಬಡಿಕೆಯ ಅಡಿಯಲ್ಲಿ ಯಜ್ಞಾರ್ಪಣೆಗಳು ಪದೇ ಪದೇ ಮೇಲಿಂದ ಮೇಲೆ ಮಾಡಲ್ಪಡಬೇಕಾಗಿತ್ತು, ಆದಾಗ್ಯೂ ಅವುಗಳು ಅಪರಾಧವನ್ನು ಎಂದಿಗೂ ಪರಿಹಾರ ಮಾಡುತ್ತಿರಲಿಲ್ಲ. ಯೇಸು ಒಂದೇ ಸಾರಿ ಯಜ್ಞಾರ್ಪಿತನಾಗಿ ಎಲ್ಲಾ ಸಮಯಗಳಲ್ಲಿ ಒಳ್ಳೆಯದನ್ನು ಮಾಡುತ್ತಾ ಪಾಪ ಮತ್ತು ಅಪರಾಧಗಳನ್ನು ಪರಿಹಾರ ಮಾಡಿದನು.

ಅಪರಾಧವು ನ್ಯಾಯವಾದ ರೀತಿಯಲ್ಲಿ ವಜಾಮಾಡಲ್ಪಟ್ಟಿದೆ, ಆದರೆ ಒಬ್ಬನು ಸಂಪೂರ್ಣವಾಗಿ ನಿಶ್ಚಿಂತೆಯಿಂದ ಅಪರಾಧಿಯೆಂಬ ನಿರ್ಣಯದಿಂದ ಹೇಗೆ ಜೀವಿಸಬೇಕೆಂಬುದನ್ನು ಇನ್ನೂ ಕಲಿಯಬೇಕಾದ ಸಂಗತಿಯಾಗಿದೆ. ಪ್ರತ್ಯಕ್ಷವಾಗಿ, ಕ್ರಿಸ್ತನಿಗೋಸ್ಕರ ಜೀವಿಸಿದಂಥ ನೂತನ ಜೀವಿತವು ಅವರ ಭಾವನೆಗಳನ್ನು ಬೇರೆ ರೀತಿಯಲ್ಲಿ ಪ್ರತಿಯೊಬ್ಬರು ಕಲಿತುಕೊಳ್ಳುವುದನ್ನು ಅಪೇಕ್ಷಿಸುತ್ತದೆ. ಅವುಗಳು ಎಂದೆಂದಿಗೂ ಅವರನ್ನು ಆಳುವುದಕ್ಕೆ ಭಾವನೆಗಳನ್ನು ಕೊಡಬಲ್ಲದು. ಅವರು ದೇವರ ವಾಕ್ಯವನ್ನು ಕಲಿತು ಅದಕ್ಕೆ ವಿಧೇಯರಾಗಬೇಕು ಚಿಂತೆಯಿಲ್ಲ, ಅವರು ಹೇಗೆ ಅನುಭವ ಪಡೆಯುತ್ತಾರೆ ಎಂಬುದೇ, ಈ ರೀತಿಯ ವಿಧೇಯತೆಯ ಜೀವನ ಶೈಲಿ ಹೋಲಿಸಿ ನೋಡುವುದಕ್ಕಿಂತ ಹೆಚ್ಚಾಗಿ ಆಶೀರ್ವಾದದಲ್ಲಿ ನಡೆಸುತ್ತದೆ.

# ಅಧ್ಯಾಯ–3

# ಒಪ್ಪಿಸಿಕೊಡುವ ಸಮಯವಾಗಿದೆ

ನೀವು ಈಗಾಗಲೇ ಕ್ರಿಸ್ತನನ್ನು ಅಂಗೀಕರಿಸಿಕೊಂಡು ಕ್ರಿಸ್ತನಲ್ಲಿ ನಿಮ್ಮ ನೂತನ ಜೀವಿತವನ್ನು ಪ್ರಾರಂಭ ಮಾಡುವುದಕ್ಕಾಗಿ ಈ ಪುಸ್ತಕವನ್ನು ಸಹಾಯ ಮಾಡುವುದಕ್ಕಾಗಿ ಕೇಳಿಕೊಂಡಿದ್ದೀರಿ, ಅಥವಾ ಈ ಪುಸ್ತಕವು ನಿಮಗೆ ಕೊಡಲ್ಪಟ್ಟಿದೆ ಮತ್ತು ಈಗ ಆ ನಿರ್ಣಯವನ್ನು ತೆಗೆದುಕೊಳ್ಳಲು ನಿರೀಕ್ಷೆಯಿಂದ ಸಿದ್ಧರಾಗಿದ್ದಿರಿ.

ಯೋಹಾನ 3:16 ರಲ್ಲಿ (ಕೆ.ಜೆ.ವಿ) "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು, ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು." ಎಂಬುದಾಗಿ ಹೇಳುತ್ತದೆ.

ಈ ವಾಕ್ಯದ ಶಕ್ತಿಯನ್ನು ಅರ್ಥಮಾಡಿಕೊಳ್ಳಲು ನಿಮಗೆ ಸಹಾಯ ಮಾಡುವಂತಹ ಒಂದು ಕಥೆಯನ್ನು ನಿಮ್ಮ ಹತ್ತಿರ ಹಂಚಿಕೊಳ್ಳುತ್ತೇನೆ.

ಚಿಕಾಗೊ ಎಂಬ ಪಟ್ಟಣದಲ್ಲಿ ಚಳಿಯಿಂದ ಕೂಡಿದ ಒಂದು ಕಗ್ಗತ್ತಲೆಯ ರಾತ್ರಿಯಲ್ಲಿ ಇದ್ದಕ್ಕಿದ್ದಂತೆ ಒಂದು ಬಿರುಗಾಳಿ ಪ್ರಾರಂಭವಾಗಿತ್ತು. ಒಂದು ಮೂಲೆಯಲ್ಲಿ ಒಬ್ಬ ಚಿಕ್ಕ ಹುಡುಗನೊಬ್ಬನು ದಿನಪತ್ರಿಕೆಯನ್ನು ಮಾರುತ್ತಿದ್ದನು. ಚಳಿಯಿಂದ ತಪ್ಪಲು ಜನರು ಹೊಳಗಿದ್ದರು, ಮತ್ತು ವಹಳ ಚಳಿಇದ್ದುದರಿಂದ ಆ ಹುದುಗನು ನಿಜವಾಗಿ ಹೆಚ್ಚಾಗಿ ದಿನಪತ್ರಿಕೆಗಳನ್ನು ಮಾರಲು ಪ್ರಯತ್ನ ಮಾಡಲಿಲ್ಲ.

ಅವನು ಒಬ್ಬ ಪೋಲಿಸಿನ ಬಳಿಗೆ ಹೋಗಿ ಮಾನ್ಯರೇ, ಒಬ್ಬ ಬಡಹುಡುಗನು ಈ ರಾತ್ರಿಯನ್ನು ಕಳೆಯಲು ಒಂದು ಬೆಚ್ಚಗಿನ ಸ್ಥಳವನ್ನು ಮಲಗುವುದಕ್ಕೆ ತೋರಿಸಿಕೊಡಲು ನಿಮಗೆ ಸಾಧ್ಯವೋ? ನೋಡಿ, ನಾನು ಒಂದು ಪೆಟ್ಟಿಗೆಯಲ್ಲಿ ಆ ಮೂಲೆಯ ಕೆಳಗೆ ಸಂದಿನಲ್ಲಿ ಮಲಗುತ್ತೇನೆ, ಯಾಕೆಂದರೆ ಭಯಂಕರ ಚಳಿ ಇದೆ. ಆದರಿಂದ ನಿಜವಾಗಲು ತಂಗಲಿಕ್ಕೆ ಒಂದು ಬೆಚ್ಚಗಿನ ಸ್ಥಳವನ್ನು ಹೊಂದುವುದಾದರೆ ಬಹಳ ಚೆನ್ನಾಗಿರುತ್ತದೆ. ಎಂದು ಹೇಳಿದ.

ಆ ಪೋಲಿಸ್ ಪೇದೆ ಆ ಚಿಕ್ಕ ಬಾಲಕನನ್ನು ಮೇಲಿಂದ ಕೆಳಗಿನವರೆಗೂ ನೋಡಿ "ಒಳ್ಳೆಯದು, ನೀನು ಏನು ಮಾಡಬೇಕೆಂದು ನಾನು ತಿಳಿಸುತ್ತೇನೆ, ಈ ದಾರಿಯಲ್ಲಿ ಕೆಳಕ್ಕೆ ನಡೆದು ಆ ಓಣಿಯೊಳಗೆ ಹೋಗು, ಅಲ್ಲಿ ಕಾಣಿಸುವ ಆ ದೊಡ್ಡ ಬಿಳಿಯ ಮನೆಗೆ ಹೋಗಿ ಬಾಗಿಲನ್ನು ತಟ್ಟು, ಅವರು ಬಾಗಿಲನ್ನು ತೆಗೆದು ಹೊರಗೆ ಬಂದಾಗ ಸುಮ್ಮನೆ, "ಯೋಹಾನ 3:16" ಎಂದು ಹೇಳು, ಅವರು ನಿನ್ನನ್ನು ಒಳಗೆ ಬರಮಾಡಿಕೊಳ್ಳುತ್ತಾರೆ!" ಎಂದು ಹೇಳಿದನು.

ಅದೇರಿತಿಯಲ್ಲಿ ಆ ಬಾಲಕ ಮಾಡಿದ.

ಅವನು ಬಾಗಿಲಿನ ಮೆಟ್ಟಲುಗಳನು ಹತ್ತಿ ಮೇಲಕ್ಕೆ ನಡೆದು ಬಾಗಿಲಿನ್ನು ತಟ್ಟಿದನು. ಒಬ್ಬ ಸ್ತ್ರೀ ಉತ್ತರ ಕೊಟ್ಟಳು. ಅವನು ಮೇಲಕ್ಕೆ ನೋಡಿ, ಯೋಹನ 3:16 ಎಂದು ಹೇಳಿದನು.

ಕೂಡಲೆ ಆ ಸ್ತ್ರೀ "ಒಳಗೆ ಬಾ" ಎಂದು ಹೇಳಿದಳು.

ಅವಳು ಅವನನ್ನು ಒಳಕ್ಕೆ ಕರೆದುಕೊಂಡು ಹೋಗಿ, ಬೆಂಕಿ ಉರಿಯುತ್ತಿದ್ದ ಒಂದು ಸ್ಥಳದಲ್ಲಿ ಅದರ ಮುಂದೆ ಕುರ್ಚಿಯ ಮೇಲೆ ಕೂಡ್ರಿಸಿ, ಅಲ್ಲಿಂದ ಹೊರಗೆ ಹೋದಳು. ಅಲ್ಲಿ ಅವನು ಸ್ವಲ್ಪಹೊತ್ತಿನವರೆಗೆ ಕೂತುಕೊಂಡು, ತನ್ನಲ್ಲಿ ತಾನೆ ಯೋಚಿಸತೊಡಗಿದ *ಯೊಹಾನ 3:16 ನನಗೆ ಅದು ಅರ್ಥವಾಗಲಿಲ್ಲ, ಆದರೆ ನಿಜವಾಗಿ ಚಳಿಯಲ್ಲಿರುವ ಒಬ್ಬ ಬಾಲಕನನ್ನು ಅದು ಬೆಚ್ಚಗೆ ಮಾಡುತ್ತದೆ.*

ಸ್ವಲ್ಪ ಸಮಯದ ನಂತರ ಆಕೆ ಬಂದು "ನಿನಗೆ ಹಸಿವೆಯಾಗಿದೆಯೋ?" ಎಂದು ಕೇಳಿದಳು.

"ಹೌದು ಸ್ವಲ್ಪಹಸಿವಾಗಿದೆ. ಎರಡು ದಿನಗಳಿಂದ ನಾನು ಊಟ ಮಾಡಿಲ್ಲ, ಮತ್ತು ಕೊಂಚ ಆಹಾರವನ್ನು ತಿಂದರೆ ನಾನು ಸುಧಾರಿಸಿಕೊಳ್ಳಬಲ್ಲೆನು ಎಂದು ನಾನು ನೆನೆಸುತ್ತೇನೆ" ಎಂದು ಹೇಳಿದ. ಆಗ ಆ ಸ್ತ್ರೀಯು ಆತನನ್ನು ಆಡಿಗೆಯ ಮನೆಗೆ ಕರೆದುಕೊಂಡು ಹೋಗಿ ವಿಶೇಷವಾದ ಆಹಾರವನ್ನು ಇಟ್ಟಿದ್ದ ಒಂದು ಮೇಜಿನ ಬಳಿಯಲ್ಲಿ ಕುಳ್ಳರಿಸಿದಳು, ನಂತರ ಅವನು ಹೊಟ್ಟೆ ತುಂಬ ತಿನ್ನಲಾರದಷ್ಟು ಹೆಚ್ಚಾಗಿ ಊಟಮಾಡಿದ. ಆಗ ಅವನು *ಯೋಹಾನ 3:16 ನನಗೆ ಅರ್ಥವಾಗಲಿಲ್ಲ, ಆದರೆ ನಿಜವಾಗಿ ಹಸಿವೆಯಲ್ಲಿರುವ ಒಬ್ಬ ಬಾಲಕನನ್ನು ಆಹಾರದಿಂದ ತೃಪ್ತಿಪಡಿಸುತ್ತದೆ,* ಎಂದು ತನ್ನಲ್ಲಿ ತಾನೆ ಯೋಚಿಸತೊಡಗಿದ.

ಅವಳು ಅವನನ್ನು ಅಟ್ಟದ ಮೇಲಕ್ಕೆ ಕರೆದುಕೊಂಡು ಒಂದು ಸ್ನಾನದ ಕೋಣೆಯಲ್ಲಿ ಬಿಸಿನೀರಿನಿಂದ ತುಂಬಿದ ಬಾನೆಯ ಬಳಿಯಲ್ಲಿ ಬಿಟ್ಟಳು. ಅವನು ಅಲ್ಲಿ ಕುಳಿತು ಸ್ವಲ್ಪ ಹೊತ್ತು ಮೈ ಮೇಲೆ ನೀರು ಹಾಕಿಕೊಂಡನು. ಅವನು ಮೈಯನ್ನು ನೆನೆಸಿ ಕೊಳ್ಳುತ್ತಾ, *ಯೋಹಾನ 3:16 – ನನಗೆ ಅರ್ಥವಾಗಲಿಲ್ಲ, ಆದರೆ ನಿಜವಾಗಿ ಒಬ್ಬ ಕೊಳಕು ಬಾಲಕನನ್ನು ಶುದ್ಧ ಮಾಡುತ್ತದೆ,* ಎಂದು ತನ್ನಲ್ಲಿ ತಾನೆ ಯೋಚಿಸತೊಡಗಿದ. ಆ ಸ್ತ್ರೀಯು ಪುನಃ ಬಂದು ಆತನನ್ನು ಒಂದು ಕೋಣೆಗೆ ಕರಕೊಂಡು ಹೋಗಿ, ಅಲ್ಲಿ ಒಂದು ಹಳೆಯ ಮೆತ್ತನೆಯ ಹಾಸಿಗೆಯ ಮೇಲೆ ಅವನನ್ನು ಮಲಗಿಸಿ, ಕುತ್ತಿಗೆಯವರೆಗೆ ಹೊದಿಸಿ, ಅವನಿಗೆ ಮುದ್ದಿಟ್ಟು ಶುಭರಾತ್ರಿ ಹೇಳಿ, ದಿಪಗಳನ್ನು ಆರಿಸಿದಳು. ಅವನು ಕತ್ತಲೆಯಲ್ಲಿ ಮಲಗಿದ್ದಾಗ ಕಿಟಕಿಯಿಂದ ಹೊರಗೆ ನೋಡುತ್ತಾ, ಈ ಚಳಿಯ ರಾತ್ರಿಯಲ್ಲಿ ಹಿಮವು ಬೀಸುತ್ತಾ ಕೆಳಕ್ಕೆಬೀಳುತ್ತಿರುವುದನ್ನು ಗಮನಿಸಿದ. ಆಗ, *ಯೋಹಾನ 3:16 ನನಗೆ ಅರ್ಥವಾಗಲಿಲ್ಲ. ಆದರೆ ನಿಜವಾಗಿ ಒಬ್ಬ ಆಯಾಸದ ಬಾಲಕನನ್ನು ಆರಾಮವಾಗಿರುವಂತೆ ಮಾಡುತ್ತದೆ,* ಎಂದು ತನ್ನಲ್ಲಿ ತಾನೆ ಯೋಚಿಸತೊಡಗಿದ.

ಮರುದಿನ ಬೆಳ್ಳಿಗೆ ತಿರುಗಿ ಆಕೆ ಕೆಳಗೆ ತುಂಬಾ ಆಹಾರವನ್ನಿಟ್ಟಿದ್ದ ಅದೇ ಆ ದೊಡ್ಡ ಮೇಜಿನ ಬಳಿಗೆ ಕರಕೊಂಡು ಬಂದಳು. ಅವನು ತಿಂದ ನಂತರ ಅದೇ ಆರಾಮ ಕುರ್ಚಿಯ ಮೇಲೆ ಬೆಂಕಿಯ ಸ್ಥಳವಿದ್ದಲ್ಲಿ ಅವನನ್ನು ಬೆಚ್ಚಗೆ ಕುಳ್ಳರಿಸಿದ್ದಳು. ಅವಳು ಒಂದು ಸತ್ಯವೇದವನ್ನು ತಂದು, ಅವನ ಹತ್ತಿರ ಕುಳಿತು "ಯೋಹಾನ 3:16 ನಿನಗೆ ಅರ್ಥವಾಯಿತೋ ಎಂದು ಕೇಳಿದಳು?" "ಇಲ್ಲ ಅಮ್ಮ, ನನಗೆ ಅರ್ಥವಾಗಲ್ಲಿಲ್ಲ ನಾನು ಕೇಳಿಸಿಕೊಂಡದ್ದು ಇದೇ ಮೊದಲನೆಯ ಸಾರಿ ಅದೂ ಕಳೆದ ರಾತ್ರಿ ಆ ಪೋಲಿಸ್ ಪೇದೆ ಅದನ್ನು ಉಪಯೋಗಿಸುವುದಕ್ಕೆ ಹೇಳಿದನು, ಎಂದು ಹೇಳಿದ." ಆಕೆ ಸತ್ಯವೇದದಲ್ಲಿ ಹೋಹಾನ 3:16 ನೆ ವಾಕ್ಯವನ್ನು ತೆರೆದು, ಯೇಸುವಿನ ವಿಷಯವಾಗಿ ವಿವರಿಸುವುದಕ್ಕೆ ಪ್ರಾರಂಭಿಸಿದಳು. ನೇರವಾಗಿ ಅಲ್ಲಿಯೇ ಆ ಬೆಂಕಿಯ ಸ್ಥಳದ ಮುಂದೆ ಅವನು ತನ್ನ ಹೃದಯವನ್ನು ಮತ್ತು ಜೀವಿತವನ್ನು ಯೇಸುವಿಗೆ ಅರ್ಪಿಸಿದನು, ಅಲ್ಲಿ ಅವನು ಕುಳಿತು, *"ಯೋಹಾನ 3:16 ನನಗೆ ಅರ್ಥವಾಗುವುದಿಲ್ಲ. ಆದರೆ ನಿಜವಾಗಿ ಕಳೆದು ಹೋದ ಒಬ್ಬ ಬಾಲಕನು ಸುರಕ್ಷಿತನಾಗಿದ್ದಾನೆ ಎಂಬ ಅನುಭವವನ್ನು ಕೊಡುತ್ತದೆ" ಎಂದು ತಿಳಿದುಕೊಂಡನು* (ಲೇಖಕರು ಗೊತ್ತಿಲ್ಲ).

ಈಗ, ನಮ್ಮ ಪಾಪಗಳಿಗೋಸ್ಕರ ಸಂದಾಯವಾಗಿ ಕೊಡಲ್ಪಟ್ಟ ಂತೆ ಯೇಸುಕ್ರಿಸ್ತನನ್ನು ಅಂಗಿಕರಿಸಿಕೊಡು ನಮ್ಮ ಜೀವಿತವನ್ನು ಒಪ್ಪಿಸಿಕೊಡಲು ಸಿದ್ಧರಾಗಿದ್ದರೆ, ಈ ಪ್ರರ್ಥನೆಯನ್ನು ನನ್ನೊಟ್ಟಿಗೆಮಡಾಲು ನಾನು ಪ್ರೋತ್ಸಹಿಸುತ್ತೆನೆ. ಈ ಪ್ರರ್ಥನೆಯ ಪದಗಳನ್ನು ಗಟ್ಟಿಯಾಗಿ ಪುನರುಚ್ಚರಿಸಿರಿ ಮತ್ತು ಅದು ನಮಗೆ ಅರ್ಥಪೂರ್ಣವಾಗಿರುವಂತೆ, ಪ್ರತಿಯೊಂದು ಪದವನ್ನು ಕೇಳಿಸಿಕೊಳ್ಳಿರಿ.

*ತಂದೆಯಾದ ದೇವರೆ ನಾನು ನಿನ್ನನ್ನು ಪ್ರೀತಿಸುತ್ತೇನೆ. ನನ್ನ ಪಾಪಗಳನ್ನು ಕ್ಷಮಿಸುವುದಕ್ಕೆ ನಿನ್ನನ್ನು ಕೇಳಲು ನಂಬಿಕೆಯಿಂದ ಈ ದಿನ ನಿನ್ನ ಬಳಿಗೆ ಬರುತ್ತೇನೆ, ಯೇಸುವೇ ನಾನು ನಿನ್ನಲ್ಲಿ ನಂಬಿಕೆ ಇಡುತ್ತೇನೆ, ನನಗೋಸ್ಕರ ಆ ಶಿಲುಬೆಯ ಮೇಲೆ ಪ್ರಾಣಕೊಟ್ಟ ನಿನ್ನ ನಿಷ್ಕಳಂಕವಾದ ರಕ್ತವನ್ನು ನನಗಾಗಿ ಸುರಿಸಿದಿರಿ, ನನ್ನ ಸ್ಥಾನದಲ್ಲಿ ನಾನು ಅನುಭವಿಸಬೇಕಾದ ಎಲ್ಲಾ ಶಿಕ್ಷೆಯನ್ನು ನೀನು ತೆಗೆದುಕೊಂಡಿ*

*ಎಂದು ನಾನು ನಂಬುತ್ತೇನೆ. ನೀನು ಸತ್ತು ಹೂಣಲ್ಪಟ್ಟು, ಮೂರನೆಯ ದಿನದಲ್ಲಿ ಸತ್ತವರೊಳಗಿಂದ ಎದ್ದು ಬಂದ್ದೀ ಎಂದು ನಾನು ನಂಬತ್ತೇನೆ. ಮರಣವು ನಿನ್ನನ್ನು ಹಿಡಿಯಲಾರದೆ ಹೋಯಿತು. ನೀನು ಸೈತಾನನ್ನು ಗೆದ್ದು, ಆತನಿಂದ ಪಾತಾಳದ ಮತ್ತು ಮರಣದ ಬೀಗದ ಕೈಗಳನ್ನು ಅವನಿಂದಕಿತ್ತುಕೊಂಡಿದ್ದಿ. ನೀನು ನನ್ನನ್ನು ಪ್ರೀತಿಸಿದ್ದರಿಂದ ನನಗೋಸ್ಕರ ಇವೆಲ್ಲವನ್ನು ಮಾಡಿದಿ ಎಂದು ನಾನು ನಂಬುತ್ತೇನೆ. ನಾನೊಬ್ಬ ಕ್ರೈಸ್ತವನಾಗಿರುವುದಕ್ಕೆ ಆಶೆಪಡುತ್ತೇನೆ. ನನ್ನ ಜೀವಿತ ಕಾಲದ ಪರ್ಯಂತ ಎಲ್ಲಾ ದಿವಸಗಳು ನಿನ್ನ ಸೇವೆ ಮಾಡಲು ನಾನು ಆಶಿಸುತ್ತೇನೆ. ನೀನು ನನಗೆ ವಾಗ್ದಾನ ಮಾಡಿದ ನೂತನ ಜೀವಿತದಲ್ಲಿ ಹೇಗೆ ಜೀವಿಸ ಬೇಕೆಂದು ನಾನು ಕಲಿತುಕೊಳ್ಳಲು ಆಶಿಸತ್ತೇನೆ. ಯೇಸುವೇ, ಈಗ ನಾನು ನಿನ್ನನ್ನು ಅಂಗಿಕರಿಸಿಕೊಳ್ಳುತ್ತೇನೆ ಮತ್ತು ನನ್ನನ್ನು ನಾನು ಸಮರ್ಪಿಸಿ ಕೊಡುತ್ತೇನೆ. ನಾನಿರುವಂಥ ಸ್ಥಿಥಿಯಲ್ಲಿಯೇ ನನ್ನನ್ನು ಸೇರಿಸಿಕೊ ಮತ್ತು ನನ್ನನ್ನು ನೀನು ಏನು ಮಾಡಬೇಕೆಂದು ಇದ್ದೀಯೋ ಹಾಗೆಯೇ ಮಾಡು.*

*ಯೇಸುವೇ, ನೀನು ನನ್ನನ್ನು ರಕ್ಷಿಸಿದಕ್ಕಾಗಿ ಸ್ತೋತ್ರ. ನಿನ್ನ ಪವಿತ್ರ ಆತ್ಮನಿಂದ ನನ್ನನ್ನು ತುಂಬಿಸು ಮತ್ತು ನಾನು ತಿಳಿದುಕೊಳ್ಳ ಬೇಕಾಗಿರುವುದೆಲ್ಲವನ್ನು ನನಗೆ ಭೋದಿಸು. ಈಗ ನಾನು ರಕ್ಷಿಸಲ್ಪಟ್ಟಿದ್ದೇನೆಂದು ನಾನು ಹೊಸದಾಗಿ ಹುಟ್ಟಿದ್ದೇನೆಂದು, ನಾನು ಸತ್ತಮೇಲೆ ಪರಲೋಕಕ್ಕೆ ಹೋಗುತ್ತೇನೆಂದು ನಾನು ನಂಬುತ್ತೇನೆ. ತಂದೆಯಾದ ದೇವರೇ, ನನ್ನ ಜೀವಿತದ ಯಾತ್ರೆಯ ಸಂತೋಷವನ್ನು ಅನುಭವಿಸುವುದಕ್ಕೂ ಮತ್ತು ನಿನ್ನ ಮಹಿಮೆಗಾಗಿ ಜೀವಿಸುವುದಕ್ಕೂ ನಾನು ಮುಂದೆ ಸಾಗುತ್ತಾ ಇದ್ದೇನೆ!*

ಈ ಪ್ರಾರ್ಥನೆಯನ್ನು ನೀವು ಯಥಾರ್ಥವಾಗಿ ಮಾಡಿದ್ದಲ್ಲಿ, ನೀವು ನಿಮ್ಮ ಜೀವಿತದ ಅತ್ಯಂತ ಮಹತ್ವದ ನಿರ್ಣಯುವನ್ನು ಮಾಡಿದ್ದೀರಿ. ನಿಮಗೆ ಹೇಗೆ ಅನಿಸಿದರೂ ಚಿಂತೆಯಿಲ್ಲ, ದೇವರು ನಿಮ್ಮ ಪ್ರಾರ್ಥನೆಯನ್ನು ಕೇಳಿಕೊಂಡಿದ್ದಾನೆ ಮತ್ತು ಅದಕ್ಕೆ ಉತ್ತರ ಕೊಟ್ಟಿದ್ದಾನೆ. ನಿಮುಗೆ ಸಮಾಧಾನ ಇಲ್ಲದೆ ಸಂತೋಷವೆನಿಸಬಹುದು, ಬಿಡುಗಡೆ ಇಲ್ಲವೇ ಸ್ವಾತಂತ್ರವೆನಿಸಬಹುದು, ಮತ್ತು ಈಗ ನಿಮಗೆ ಏನು ಅನ್ನಿಸದೇ ಸಹಾ ಇರಬಹುದು. ನಿಮ್ಮ ಜೀವಿತದಲ್ಲಿ ನಿಮ್ಮ

ಅನಿಸಿಕೆಗಳನ್ನು ಎಂದಿಗೂ ಸರ್ವಾಧಿಕಾರಿಯಾಗಿರುವುದಕ್ಕೆ ಬಿಡಬೇಡಿರಿ. ದೇವರ ವಾಕ್ಯವನ್ನು ನಂಬರಿ, ಯಾಕೆಂದರೆ ಆತನು ನಂಬಿಗಸ್ತನು ಮತ್ತು ಆತನ ವಾಗ್ದಾನಗಳಿಗೆ ಸತ್ಯವಂತನೂ ಆಗಿದ್ದಾನೆ.

> "ತಂದೆಯು ನನಗೆ ಕೊಡುವಂಥವರೆಲ್ಲರೂ(ಒಪ್ಪಿಸಿಕೊಟ್ಟವರು) ನನ್ನ ಬಳಿಗೆ ಬರುವರು, ಮತ್ತು ನನ್ನ ಬಳಿಗೆ ಬರುವವನನ್ನು ನಾನು ತಳ್ಳಿಬಿಡುವುದೇ ಇಲ್ಲ." (ನನ್ನ ಬಳಿಗೆ ಬರುವ ಪ್ರತಿಯೊಬ್ಬರನ್ನು ಎಂದಿಗೂ, ನಾನು ತಳ್ಳಿಬಿಡುವುದಿಲ್ಲ) —ಯೋಹಾನ. 6:37

ಲೋಕದ ಅಂತ್ಯದ ಕಟ್ಟಕಡೆಯವರೆಗೂ, ಯಾವಾಗಲೂ ನಾನು ನಿಮ್ಮ ಸಂಗಡ ಇರುವೆನೆಂದು ದೇವರು ವಾಗ್ದಾನ ಮಾಡಿದ್ದಾನೆ. ನೀವು ಯಾವಾಗಲೂ ಆತನನ್ನು ಅನುಭವಿಸದೇ ಇರಬಹುದು, ಆದರೆ ಆತನು ಎಲ್ಲೆಲ್ಲಿಯೂ, ಸದಾಕಾಲ ಇರುತ್ತಾನೆ ಆತನು ಎಲ್ಲಾ ಸಮಯಗಳಲ್ಲಿ ತನ್ನ ದೃಷ್ಟಿಯನ್ನು ನಿಮ್ಮಮೇಲೆ ಇರಿಸಿದ್ದಾನೆ ಮತ್ತು ಚಿಂತೆಯಿಂದ ನಿಮ್ಮ ಮೇಲೆ ಕಾವಲಿರುತ್ತಾನೆ. ನಿಮಗೆ ಸಂಭಂದಪಟ್ಟ ಎಲ್ಲಾ ವಿಷಯಗಳಲ್ಲಿ ಅವನು ಸಂಭಂದಪಟ್ಟವನಾಗಿ, ಅವುಗಳನ್ನು ನೆರವೇರಿಸುತ್ತೇನೆಂದು ವಾಗ್ದಾನ–ಮಾಡಿದ್ದಾನೆ. ಆತನು ನಿಮ್ಮಲ್ಲಿ ಒಂದು ಒಳ್ಳೆಯ ಕೆಲಸವನ್ನು ಪ್ರಾರಂಭ ಮಾಡಿದ್ದಾನೆ ಮತ್ತು ಆತನೇ ಅದನ್ನು ನೆರವೇರಿಸಿ ಪರಿಪೂರ್ಣತೆಗೆ ತರುತ್ತಾನೆ. (ಆದಿಕಾಂಡ 28:15, ಕೀರ್ತನೆ 138:8, ಫಿಲಿಪ್ಪ 1:6)

ಅಭಿನಂದನೆಗಳು, ನಿಮಗೆ "ಯೇಸು" ಎಂಬ ಒಬ್ಬ ಪರಮ ಶ್ರೇಷ್ಠನಾದ ಸ್ನೇಹಿತನು ಈಗ ಇದ್ದಾನೆ, ಆತನು ಎಂದೆಂದಿಗೂ ನಿಮ್ಮೊಂದಿಗಿರುವ ಪರಮಶ್ರೇಷ್ಠನಾದ ಸ್ನೇಹಿತನಾಗಿದ್ದಾನೆ. ನೀವು ಆತನೊಂದಿಗೆ ಯಾವುದೇ ಅಥವ ಪ್ರತಿಯೊಂದು ವಿಷಯವಾಗಿ ಮಾತನಾಡಬಲ್ಲಿರಿ, ಎಕೆಂದರೆ ಆತನು ಯಾವಾಗಲೂ ನಿಮ್ಮನ್ನು ತಿಳಿದುಕೊಳ್ಳುತ್ತಾನೆ. (ಇಬ್ರೀಯ 4:15) ಆತನು ಎಂದಿಗೂ ನಿಮ್ಮನ್ನು ತಳ್ಳಿಬಿಡುವುದಿಲ್ಲ ಇಲ್ಲವೇ ತಿರಸ್ಕರಿಸುವುದಿಲ್ಲ, ದೇವರಿಗೆ ಬಹಳ ದೊಡ್ಡದಾದದ್ದೂ ಇಲ್ಲ ಮತ್ತು

ನಿಮ್ಮ ಜೀವಿತದ ಪ್ರತಿಯೊಂದು ವಿಶಯಗಳಲ್ಲಿ ಆತನನ್ನು ಆಹ್ವಾನಿಸಬೇಕೆಂದು ಸಹ ಇಷ್ಟಪಡುತ್ತಾನೆ.

ನೀವು ಒಂದು ನೂತನ ಸೃಷ್ಟಿಯಾಗಿದ್ದೀರಿ. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು (2 ನೇ ಕೊರಿಂಥ 5:17) ನೀಮಗೆ ಒಂದು ಅತ್ಯಂತ ನೂತನವಾದ ಪ್ರಾರಂಭ ಸಿಗುತ್ತದೆ.

ನೀವು ನಾವು ಎಲ್ಲರೂ ಕೂಡ ತಪ್ಪುಗಳನ್ನು ಮಾಡುತ್ತೇವೆ. ನಿಮಗೆ ಕಲಿಯಲು ಅತ್ಯಂತ ಹೆಚ್ಚಾದ ಸಂಗತಿಗಳಿವೆ, ಮತ್ತು ಒಂದು ಪ್ರಯಾಣವನ್ನು ಪ್ರಾರಂಭಿಸಿದ್ದೀರಿ, ಅದು ಜೀವಂತ ಕಾಲವೆಲ್ಲಾ ಉಳಿಯುವುದು. ನೀವು ಬೇಡಿಕೊಳ್ಳುವುದರಿಂದ ದೊರಕುತ್ತದೆ ಎಂದು ಯಾವಾಗಲೂ ನೆನಪಿನಲ್ಲಿಡಿರಿ. ಯಾವುದೇ ಪಾಪಗಳಿರಲಿ ಮಾನಸಾಂತರ ಪಡುವುದಕ್ಕೆ ಕಾತುರತೆಯಿಂದಿರಿ ಮತ್ತು ದೇವರ ಮುಂದೆ ಯಾವುದನ್ನು ಬಚ್ಚಿಡುವುದಕ್ಕೆ ಪ್ರಯತ್ನಿಸಬೇಡಿರಿ, ಯಾಕೆಂದರೆ ಎಲ್ಲಾ ಆತನು ತಿಳುಕೊಳುತ್ತಾನೆ.

ದೇವರು ನಿಮ್ಮನ್ನು ಹೆಚ್ಚಾಗಿ ಪ್ರೀತಿಸುತ್ತಾನೆ. ಎಲ್ಲಾ ಸಮಯದಲ್ಲಿಯೂ ಆತನು ನಿಮ್ಮನ್ನು ಪ್ರೀತಿಸುತ್ತಾನೆ. ನೀವು ಒಳ್ಳೆಯವರಾಗಿ ನಡಕೊಂಡ ದಿನಗಳಲ್ಲಿ ಆತನು ನಿಮ್ಮನ್ನು ಹೆಚ್ಚಾಗಿ ಪ್ರೀತಿಸುವುದಿಲ್ಲ ಅಥವ ಕೆಟ್ಟದ್ದಾಗಿ ನಡಕೊಂಡ ದಿನಗಳಲ್ಲಿ ಸ್ವಲ್ಪವಾಗಿ ಪ್ರೀತಿಸುವುದಿಲ್ಲ ಎಂಬುದಾಗಿ ಅಲ್ಲ. ಆತನು ಸರಳವಾಗಿಯೇ ಪ್ರೀತಿಸುತ್ತಾನೆ!

ಜೀವಿಸುವ ನೂತನ ಮಾರ್ಗದ ವಿಷಯದಲ್ಲಿ ಉಪದೇಶಿಸುವುದಕ್ಕೆ ಇದೇ ಸಮಯವಾಗಿದೆ.

# ಅದ್ಯಾಯ-4

# ಜೀವಿಸುವ ಒಂದು ನೂತನ ಮಾರ್ಗ

ದೇವರೊಂದಿಗೆ ಮತ್ತು ದೇವರಿಗಾಗಿ ಜೀವಿಸಬೇಕಾದ ಒಂದು ನೂತನ ಜೀವಿತವನ್ನು ನೀವು ಪ್ರವೇಶಿಸುವಾಗ, ಜಗತ್ತಿನ ಮಾರ್ಗಗಳಿಗಿಂತ ಆತನ ಬಹಳಷ್ಟು ಸಿದ್ಧಾಂತಗಳು ತಲೆಕೆಳಗಿರುತ್ತವೆ ಎಂದು ನಿಮಗೆ ಕಂಡುಬರುತ್ತದೆ. ನಿಜವಾಗಿ ತಲೆಕೆಳಗಾಗಿರುವುದು ಜಗತ್ತೇ ಮತ್ತು ದೇವರ ರಾಜ್ಯವು ಸರಿಯಾದ ರೀತಿಯಲ್ಲೇ ಎತ್ತಲ್ಪಟ್ಟಿದೆ. ದೇವರ ಮಾರ್ಗದಲ್ಲಿ ಮಾಡುವ ವಿಷಯಗಳಿಗೆ ನಾವು ರೂಢಿಮಾಡಿಕೊಂಡಿಲ್ಲ. ಮತ್ತು ಪ್ರಾರಂಭದಲ್ಲಿ ಅರ್ಥಮಾಡಿಕೊಳ್ಳಲು ಕಷ್ಟಕರವಾದದ್ದು ಮತ್ತು ಕಠಿಣವಾದದ್ದಾಗಿ ಕಾಣಬಹುದು.

## ದೀಕ್ಷಾಸ್ನಾನ

ಯೇಸುಕ್ರಿಸ್ತನಲ್ಲಿ ನೂತನ ವಿಶ್ವಾಸಿಯಾದವರು ನೀರಿನಲ್ಲಿ ದೀಕ್ಷಾಸ್ನಾನವನ್ನು ಮಾಡಿಸಿಕೊಳ್ಳುವುದು ಮೊಟ್ಟಮೊದಲನೆ ವಿಷಯವಾಗಿದೆ. ಕ್ರಿಸ್ತನನ್ನು ಹಿಂಬಾಲುಸಲು ನೀವು ಮಾಡಿದ ನಿಮ್ಮ ಅಂತರ್ಯದ ನಿರ್ಣಯ ದೀಕ್ಷಾಸ್ನಾನದ ಮೂಲಕ ಬಹಿರಂಗವಾಗಿ ನೀವು ತೋರಿಸುವ ಒಂದು ಸಾಕ್ಷಿಯಾಗಿದೆ. ದೀಕ್ಷಾಸ್ನಾನಕ್ಕಾಗಿ ಒಬ್ಬ ವ್ಯಕ್ತಿಯು ನೀರಿನಲ್ಲಿ ಮುಳುಗುವಾಗ ಅದು ಹಳೆಯ ಜೀವಿತವನ್ನು ಹೊಣೆಡುವುದನ್ನು ತೋರಿಸುತ್ತದೆ.

ಅವರು ನೀರಿನಿಂದ ಮೇಲೆ ಎತ್ತಲ್ಪಡುವಾಗ, ನೂತನ ಜೀವಿತದ ಪುನರುತ್ಥಾನವನ್ನು ತೋರಿಸುತ್ತದೆ. ದೇವರ ಕಡೆಗೆ ವಿಧೇಯತೆಯಿಂದ ನಾವು ಮಾಡುವ ಒಂದು ಸಂಗತಿಯಾಗಿದೆ. ಆ ನೀರಿನ ಅನುರೂಪವಾದ [ಅವರ ಬಿಡುಗಡೆ] ದೀಕ್ಷಾಸ್ನಾವು ಯೇಸು ಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ [ಅಂತರ್ಯದ ಪ್ರಶ್ನೆಗಳಿಂದ ಮತ್ತು ಭಯದಿಂದ] ಅದು ಮೈಕೊಳೆಯನ್ನು ಹೋಗಲಾಡಿಸುವಂಥದಲ್ಲ, [ಸ್ನಾನ ಮಾಡುವುದು] (ಅಂತರ್ಯ ಶದ್ಧೀಕರಣ ಮತ್ತು ಶಾಂತಿ) ಒಳ್ಳೇಮನಸ್ಸಾಕ್ಷಿ [ನಿಮಗೆ ಒದಗಿಸುವುದರಿಂದ] ಬೇಕೆಂದು ದೇವರಿಗೆ [ಕಾರಣ ನೀವು ನಿಮ್ಮದೆಂದು ನಂಬಿರುವವುಗಳನ್ನು ಪ್ರಕಟ್ಟಿಸುತ್ತಿದ್ದಿರಿ] ವಿಜ್ಞಾಪಿಸಿಕೊಳ್ಳುವಂಥದೇ.

—1 ಪೇತ್ರ 3:21

ಪೇತ್ರನು ಅವರಿಗೆ–ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ (ದೇವರ ಚಿತ್ತವನ್ನು ಅಲಕ್ಯ ಮಾಡುವ ಬದಲು ಒಪ್ಪಕೊಳ್ಳುವುದಕ್ಕೆ ನಿಮ್ಮ ಅಂತರ್ಯದಲ್ಲಿ ನಿಮ್ಮ ಆಲೋಚನೆಗಳನ್ನು ಮತ್ತು ಉದ್ದೇಶಗಳನ್ನು ಬದಲಾಯಿಸಿಕೊಳ್ಳಿರಿ) ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ, ಎಂದು ಉತ್ತರಿಸಿದನು. —ಅಪೋಸ್ತಲರ ಕೃತ್ಯಗಳು 2:38

## ಸಭೆಗೆ ಹೋಗುವುದು

ಇನ್ನೊಂದು ವಿಷಯ, ಸ್ಥಳೀಯ ಸಭೆಯ ವಿಶ್ವಾಸಿಗಳ ಮಧ್ಯದಲ್ಲಿ ಭಾಗವಹಿಸುವುದನ್ನು ನಾನು ವಿಶೇಷವಾಗಿ ಶಿಫಾರಸು ಮಾಡುತ್ತೇನೆ. ನಾನು ನನ್ನ ಕಾರನ್ನು ನಿಲ್ಲಿಸುವ ಕೊಠಡಿಯಲ್ಲಿ (ಗ್ಯಾರೇಜಿನಲ್ಲಿ) ಕೂತುಕೊಂಡೇ ಇರುವುದಾದರೆ, ನಾನು ಕಾರಿನಂತೆ ಮಾರ್ಪಾಡಿಸಲಾಗುವುದಿಲ್ಲ ಅದೇ ರೀತಿಯಲ್ಲಿ ಸಭೆಗೆ ಹೋಗುವುದರಿಂದ ಒಬ್ಬನನ್ನು

ಅದು ಕ್ರೈಸ್ತನನ್ನಾಗಿ ಮಾಡುವುದಿಲ್ಲ. ಸಭೆಗೆ ಹೋಗುವುದು ಕೇವಲ ಒಂದು ಕರ್ತವ್ಯವೆಂದು ಹೋಗುವುದಾದರೆ ನಾವು ಕ್ರೈಸ್ತರಾಗಿ ಮಾರ್ಪಡಿಸಲಾಗುವುದಿಲ್ಲ, ಆದರೆ ನಾವು ಕ್ರೈಸ್ತರಾಗಿರುವುದಾದರೆ, ಇತರೆ ವಿಶ್ವಾಸಿಗಳೊಂದಿಗೆ ಅನ್ಯೋನ್ಯತೆಯಲ್ಲಿ ನಾವು ದೇವರನ್ನು ಆರಾಧಿಸುವುದಕ್ಕೆ ಆಶಿಸುವವರಾಗಿರಬೇಕು ದೇವರ ವಾಕ್ಯವನ್ನು ನಾವು ಕಲಿತುಕೊಳ್ಳುವ ಒಂದು ಸ್ಥಳ ಕೂಡ ಸಭೆಯಾಗಿದೆ.

ಎಲ್ಲಾ ಸಭೆಗಳು ಒಳ್ಳೆಯ ಸಭೆಗಳಲ್ಲ. ಕೆಲವು ಸಭೆಗಳು ಭಕ್ತಿವೃದ್ಧಿಯನ್ನುಂಟು ಮಾಡುವ ಸಂಪ್ರಾದಯ ಸಭೆಗಳಾಗಿದ್ದು ಹೊರಗಣ ತೋರ್ಪಿಕ್ಕೆಯಲ್ಲ ಕಾಣಬರುತ್ತದೆ; ಆದರೆ ಯಾರಿಗಾದರೂ ನಿಜವಾಗಿ ಸಹಾಯ ಮಾಡುವ ಸಂಗತಿ, ಒಳಗೆ ಹೋದರೆ ಅಲ್ಲಿ ಏನು ಇರುವುದಿಲ್ಲ. ನಿಮಗೆ ದೇವರವಾಕ್ಯವೆಂಬ ಆತ್ಮೀಯ ಆಹಾರದಿಂದ ಪೋಷಿಸದೆ ಇರುವ ಮತ್ತು ಪ್ರತಿನಿತ್ಯವು ದೇವರೊಡನೆ ನಿಮ್ಮ ನಡತೆಯಲ್ಲಿ ಬೆಳೆಯುವಂತೆ ಹುರಿದುಂಬಿಸುವುದರಲ್ಲಿ ಪ್ರೋತ್ಸಾಹಿಸದೆ ಇರುವ ಒಂದು ಸಭೆಯಲ್ಲಿ ನೀವು ಭಾಗವಹಿಸುತ್ತಿರುವುದಾದರೆ, ಇನ್ನೊಂದು ಸರಿಯಾದ ಸಭೆಯು ಸಿಗುವತನಕ ನೀವು ಕಾದುಕೊಂಡಿರ್ರಿ. ಸಭೆಗಳು, ವೈದ್ಯರಹಾಗೆ, ಎಲ್ಲರು ಒಳ್ಳೆಯವರಲ್ಲಾ; ಎಲ್ಲರು ಕೆಟ್ಟವರೂ ಅಲ್ಲ. ನಿಮಗೆ ಸರಿಯಾಗಿ ಕಾಣಬರುವ ಒಂದುನ್ನು ಹುಡುಕಬೇಕಾದದ್ದು ಅವಶ್ಯ. ಕೆಲವರು ದೊಡ್ಡ ಸಭೆಯನ್ನು ಅಪೇಕ್ಷಿಸುತ್ತಾರೆ, ಕೆಲವರು ಸಣ್ಣದ್ದನ್ನೇ ಅಪೇಕ್ಷಿಸುತ್ತಾರೆ. ಕೆಲವು ಪಂಗಡಗಳು ಒಂದಕ್ಕಿಂತ ಒಂದು ಹೆಚ್ಚಾಗಿ ಅಭಿಮಾನಿಗಳಾಗಿರುತ್ತವೆ, ನಂತರವೂ ಇನ್ನೂ ಕೆಲವರು ಪಂಗಡಗಳಲ್ಲದಂಥ ಸಭೆಯ ಅಭಿಮಾನವುಳ್ಳವರಾಗಿರುತ್ತಾರೆ, ಅದರ ಅರ್ಥ ಸುಮ್ಮನೆ ಅವರು ದೊಡ್ಡದಾದ ಸಂಸ್ಥೆಗೆ ಸೇರಿದವರಲ್ಲಿ ಅನ್ನುವಂಥವರಾಗಿದ್ದಾರೆ. ನಿಮಗೆ ಸಭೆಯಲ್ಲಿ ಧೃಡವಾದ ಶಿಸ್ತಿನದಾಗಿದ್ದರೆ, ಅದು ನಿಮಗೆ ಸಹಾಯಮಾಡುತ್ತದೆ ಎಂಬುದು ಇಲ್ಲಿ ಒಂದು ಪ್ರಾಮುಖ್ಯವಾದ ಅಂಶವಾಗಿದೆ. ನಿಮ್ಮ ನಂಬಿಕೆಗಳಿಗೆ ಸರಿಹೊಂದುವಂತಹ ಮತ್ತು ಪ್ರಾಪಂಚಿಕ ಶೋಧನೆಗಳನ್ನು ದೂರವಿಡುವಂತೆ ಒಂದು ನೈತಿಕ ಮಟ್ಟವುಳ್ಳ ಸಾಮಾಜಿಕವಾದವುಗಳಿಗೆ ಸಹಕರಿಸುವ ಸ್ನೇಹಿತರನ್ನು ಸಂಪಾದಿಸಿ ಕೊಳ್ಳಲು ಸಹಾಯ ಮಾಡುತ್ತದೆ.

ನೀವು ಕ್ರೈಸ್ತರಾಗಿ ಯಾವ ಸಭೆಯಲ್ಲಿ ಬೆಳೆಯುವುದಕ್ಕೆ ಸಾಧ್ಯವೆನಿಸುತ್ತದೆಯೋ ಅಂತಹ ಸಭೆಗೆ ಹೋಗಲು ಖಚಿತಪಡಿಸಿಕೊಳ್ಳಿರಿ. ಒಬ್ಬ ಹೊಸದಾಗಿ ನಂಬಿದವನಿಗೆ ಅನೇಕ ಸಂಗತಿಗಳನ್ನು ತಿಳುಕೊಳ್ಳುವುದು ಬಹಳ ಪ್ರಾಮುಖ್ಯವಾದದ್ದು. ಅವನು ತಿಳುಕೊಳ್ಳದೇ ಹೋದರೆ ಮತ್ತು ಪ್ರಗತಿಯಾಗದಿದ್ದರೆ, ಅವನು ನಂಬಿಕೆಯಲ್ಲಿ ಬಿದ್ದು ಹೋಗುವನು ಇಲ್ಲವೆ ತನ್ನ ಹಿಂದಿನ ಜೀವಿತಕ್ಕೆ ಹಿಂತಿರುಗುವ ಅಪಾಯದಲ್ಲಿರುತ್ತಾನೆ.

ಹೊಸದಾಗಿ ನಂಬಿದವರಿಗೆ, ಸತ್ಯವೇದಾಧ್ಯಯನ ಮಾಡುವ ಚಿಕ್ಕ ಚಿಕ್ಕ ಗುಂಪುಗಳಲ್ಲಿ ಮಾಡುವುದು ಬಹಳ ಲಾಭಕರವಾಗಿದೆ. ಚಿಕ್ಕ ಗುಂಪುಗಳಲ್ಲಿ ಸರ್ವಸಾಮಾನ್ಯವಾಗಿ ನಿಮಗೆ ಕಲಿಯಲು, ಪ್ರಶ್ನೆಗಳನ್ನು ಕೇಳಲು, ಪ್ರಾರ್ಥನೆಗಳ ಅಂಶಗಳನ್ನು ಪಡಕೊಳ್ಳಲು ಮಾತ್ರವಲ್ಲದೆ ಇತರರಿಗಾಗಿ ಪ್ರಾರ್ಥನೆ ಮಾಡೂವ ಸಂಧರ್ಭಗಳು ಸಿಕ್ಕುತ್ತವೆ. ನಿರೀಕ್ಷಿತವಾಗಿ, ವಯಸ್ಕರ ಸತ್ಯವೇದ ಶಾಲೆಗಳನ್ನು ಅಥವ ಮನೆಯಲ್ಲಿ ಸೇರುವ ಕೂಡಿಕೆಯಲ್ಲಿ ನೀವು ಒಳಪಡಿಸಿಕೊಳ್ಳುವಂತೆ ನಿಮ್ಮ ಸಭೆಯು ಒದಗಿಸಿಕೊಡುತ್ತದೆ. ಸೇವೆ ಮಾಡುವುದೊಂದೇ ಸಭೆಯ ಸ್ಥಳವಾಗಿರುವುದು ಮಾತ್ರವೇ ಅಲ್ಲ, ಅದು ಕಂಡುಕೊಳ್ಳುವುದಕ್ಕೂ ಮತ್ತು ನಮ್ಮ ಸೇವೆಯನ್ನು ಕ್ರಿಸ್ತನದೇಹದಲ್ಲಿದ್ದುಕೊಂಡು (ಸಭೆ) ತಿಳಿಯಪಡಿಸುವ ಒಂದು ಸ್ಥಳವೂ ಆಗಿದೆ. ಮೇಲಾಗಿ, ಇತರರಿಂದ ಸ್ವಿಕರಿಸುವುದು ಮಾತ್ರವಲ್ಲ ಇತರರಿಗೂ ಕೊಡುವಂತಹ ಅವಶ್ಯಕತೆಯೂ ಆಗಿದೆ.

# ವಚನಭದ್ಧತೆ

ವಚನಭದ್ಧರಾಗಿರುವುದು ಬಹಳ ಮುಖ್ಯವಾದದ್ದು. ನಾವು ಒಂದು ಸಾರಿ ಮಾಡಿದ ತಪ್ಪಿನಿಂದಾಲ್ಲ ನಮ್ಮ ಜೀವಿತಗಳನ್ನು ಅಸ್ತವ್ಯಸ್ತತೆಗೆ ತಂದದು, ಆದರೆ ಪದೆ ಪದೆ ಮಾಡಿದ ತಪ್ಪುಗಳಿಂದಾಗಿದೆ. ಒಂದು ಸಾರಿ ಅಥವ ಎರಡು ಸಾರಿ ಕೆಲವು ವಿಷಯಗಳಲ್ಲಿ ನಾವು ಮಾಡುವ ಒಳ್ಳೆಯ ಕಾರ್ಯಗಳು, ದೇವರು ನಮಗೆ ಇಟ್ಟಿರುವ ನವಜೀವನ ಮಾರ್ಗದಲ್ಲಿ ಜೀವಿಸಲು ನಮಗೆ ಸಹಾಯ ಮಾಡುವುದಿಲ್ಲ. ನಾವು

ಏನನ್ನು ತಿಳಿದಿದ್ದೇವೋ, ಅದನ್ನು ಮಾಡುವುದರಲ್ಲಿ ನಾವು ಇಷ್ಟಪಡುವುದು ಸರಿಕಾಣದಿದ್ದಾಗ್ಯೂ, ಅದನ್ನೇ ಮಾಡಿ ಕಾಪಾಡಿಕೊಳ್ಳಬೇಕು ನಾವು ಸ್ಥಿರವಾಗಿರಬೇಕು. ದೇವರು ನಿಮಗೆ ಸ್ವಾರ್ಥತೆಯನ್ನು ಹತೋಟಿಯಲಿಟ್ಟುಕೊಳ್ಳುವ ಮತ್ತು ಶಿಸ್ತಿನಲ್ಲಿ ಇಟ್ಟುಕೊಳ್ಳುವ ಆತ್ಮನನ್ನು (2 ತಿಮೋತಿ 1:7) ದಯಪಾಲಿಸಿದ್ದಾನೆ, ಮತ್ತು ಅದಕ್ಕಾಗಿ ನೀವು ಮಾಡಬೇಕಾದದ್ದು ಒಂದೇ, ಅದನ್ನೇ ಅಭ್ಯಾಸಮಾಡಿರಿ.

ದೇವರೊಂದಿಗೆ ಸಮಯಯವನ್ನು ಕಳೆಯುವುದಕ್ಕೆ ಒಪ್ಪಿಸಿಕೊಡಿರಿ. ಆತನ ವಾಕ್ಯವನ್ನು ಕಲಿಯಲು ಇನ್ನೂ ಉತ್ತಮವಾದ ರೀತಿಯಲ್ಲಿ ಸತ್ಯವೇದವನ್ನು ಅರ್ಥಪಡಿಸುವಂತಹ ಪುಸ್ತಕಗಳನ್ನು ಓದುವುದನ್ನು ಅಭ್ಯಾಸಮಾಡಿಕೊಳ್ಳಿರಿ. ಉಪದೇಶಿಸುವ ಧ್ವನಿಸುರುಳಿಗಳನ್ನು ಮತ್ತು ಸೀಡಿಗಳನ್ನು ಕಿವಿಗೊಟ್ಟು ಕೇಳಿಸಿಕೊಳ್ಳಿರಿ, ಅಥವ ಒಳ್ಳೆಯ ಕ್ರಿಸ್ತೀಯ ಕಾರ್ಯಕ್ರಮಗಳನ್ನು ಟಿಲಿವಿಷನ್-ನಲ್ಲಿ ಗಮನಿಸಿರಿ. ಪ್ರಾರ್ಥನೆಯಲ್ಲಿಸಮಯವನ್ನು ಕಳೆಯಿರಿ. ಗಮನಿಸಿರಿ, ನಿಮ್ಮ ದಿನನಿತ್ಯದ ನಡವಳಿಕೆಗಾಗಿ ಪ್ರಾರ್ಥನೆ ಮಾಡುವುದನ್ನು ಕಲಿತುಕೊಳ್ಳಿರಿ. ನಿಮಗೆ ಸಂಬಂಧಪಟ್ಟ ಎಲ್ಲಾ ವಿಷಯಗಳಿಗಾಗಿ ದೇವರು ಚಿಂತಿಸುವವನಾಗಿದ್ದಾನೆ ಮತ್ತು ದೇವರೊಟ್ಟಿಗೆ ಸಂಭಾಷಿಸುವುದೇ ಪ್ರಾರ್ಥನೆಯಾಗಿದೆ. ಕ್ರೈಸ್ತರಾಗಿ ನೀವು ಬೆಳೆದಂತೆಲ್ಲಾ ದೇವರೊಂದಿಗೆ ಹೇಗೆ ಮಾತನಾಡಬೇಕೆಂಬುದನ್ನು ನೀವು ಕಲಿಯುವುದು ಮಾತ್ರವಲ್ಲದೇ ಆತನಿಂದ ಹೇಗೆ ಕೇಳಿಸಿಕೊಳ್ಳುವುದು ಎಂದು ಸಹ ನೀವು ಕಲಿತುಕೊಳ್ಳುವಿರಿ, ಮತ್ತು ಆತನ ಕಡೆಗಿರುವ ನಿಮ್ಮ ನಡತೆಯಲ್ಲಿ ಸಂತೋಷ ಪಡಿಸುವ ಆಯಕಟ್ಟನು ಕೊಡುತ್ತದೆ.

ವಚನಭದ್ದತೆಯಿಂದಿಬೇಕಾದ ಇನ್ನೊಂದು ಬಹಳ ಮುಖ್ಯವದ ಕಾರ್ಯಕ್ಷೇತ್ರವಗಿದೆ ಕೊಡುವುದು. ದೇವರು ನಮಗೆ ಎಷ್ಟೊಂದನ್ನು ಕೊಟ್ಟಿದ್ದಾನೆ, ಆದು ಆತನಿಗೆ ಮತ್ತು ಭೂಮಿಯಲ್ಲಿ ನಡೆಯುವ ಆತನ ಕೆಲಸಕ್ಕೆ ಹಿಂದಿರುಗಿಸಿ ಕೊಡಲು ಇಷ್ಟಪಡುವುದು ನೈಸರ್ಗಿಕ. ಯಾವಾಗ ನಿಮಗೆ ಸಹಾಯವು ಕೊಡಲ್ಪಡುತ್ತದೆಯೋ ಆಗ ಬೇರೆಯವರಿಗೆ ಕೊಡುವದು ಸಹಜವಾಗಿ ನೈಸರ್ಗಿಕವಾದದ್ದು. ಮಾತ್ರವಲ್ಲ ನಿಮ್ಮ ಒಪ್ಪಿಸಿಕೊಡುವಿಕೆಯಲ್ಲಿ ನಿಮ್ಮ ಸಭೆಗೆ

ಕೊಡುವ ಮಾರ್ಗಗಳಲ್ಲಿ ಒಂದಾಗಿದೆ. ಮತ್ತು ನಿಮಗೆ ಸಹಾಯ ಮಾಡಿರುವ ಬೇರೆ ತರದ ಸೇವೆಗಳಲ್ಲಿ ಅಂದರೆ ನೀವು ಯಾವದನ್ನು ನಂಬುತ್ತೀರೋ ಅವುಗಳೆಲ್ಲಾ ಒಂದು ಮಾರ್ಗವಾಗಿದೆ. ನಾವು ದೇವರಿಗೆ ಕೊಡುವ ಸಕಲದಲ್ಲಿಯೂ ಅದಕ್ಕಿಂತ ಹೆಚ್ಚಾಗಿ ಆತನು ಅದನ್ನು ನಿಮಗೆ ಹಿಂತಿರುಗಿ ಕೊಡುತ್ತಾನೆ ನಾವು ಏನನ್ನು ಬಿತ್ತುತ್ತೇವೋ ಅದನ್ನು ಹೊಯ್ಯುತ್ತೇವೆಯೆಂದು ದೇವರ ವೇದವಾಕ್ಯ ಹೇಳುತ್ತದೆ.

ಕ್ರಿಸ್ತನನ್ನು ಸ್ವೀಕಾರವಮಾಡುವುದಕ್ಕಿಂತ ಮತ್ತು ಆತನಲ್ಲಿ ನೂತ ಸೃಷ್ಟಿಯಾಗುವುದಕ್ಕಿಂತ ಮುಂಚೆ, ಕೊಡುವ ವಿಷಯದಲ್ಲಿ ನಮಗೆ ಅಷ್ಟು ಗಂಭೀರವಾದ ಆಸಕ್ತಿಯಿರಲಿಲ್ಲ. ನಾವು ಸ್ವಾರ್ಥಿಗಳು ಮತ್ತು ಇತರರಿಂದ ಅಪೇಕ್ಷಿಸುವವರು ಆಗಿದ್ದೆವು, ಆದರೆ ಕ್ರಿಸ್ತನೊಂದಿಗೆ ಆತನ ಪ್ರೀತಿಯಲ್ಲಿ ಆಳವಾಗಿ ಇಳಿದು ಹೋಗುವುದರಿಂದ ನಮ್ಮ ಹೃದಯವು ಬದಲಾವಣೆಯಾಗುತ್ತದೆ.

## ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಹೊಂದಿರುವುದು

ದೀಕ್ಷಾಸ್ನಾನ ಹೊಂದುವದು ಎಂದರೆ ಸಂಪೂರ್ಣವಾಗಿ ಮುಳುಗುವದು. ಯಾವದೇ ಒಂದನ್ನು ಆಳವಾಗಿ ಮುಳುಗಿಸುವದರಿಂದ ಅದಕ್ಕಾಗಿ ತೆರೆಯುವಿಕೆಯಿದ್ದರೆ. ಅದು ತುಂಬುತ್ತದೆ ನೀವು ತೆರೆದವರಾಗಿದ್ದರೆ ಪವಿತ್ರ ಆತ್ಮನಿಂದ ಸಂಪೂರ್ಣವಾಗಿ ತುಂಬಿಸಲ್ಪಡುತ್ತೀರಿ ನೀವು ಯೇಸುಕ್ರಿಸ್ತನನ್ನು ಅಂಗೀಕಾರವಮಾಡಿಕೊಂಡಾಗ ನಿಮಗೆ ಪವಿತ್ರ ಆತ್ಮವು ದೊರಕಿತು. ಆದರೆ, ನಿಮ್ಮ ಹೃದಯದ ಎಲ್ಲಾ ರೋಗಿಗಳನ್ನು ತೆರೆದಿಡುವಲ್ಲಿ ಒಂದು ವೇಳೆ ಅಂತಹ ಅಂಶಕ್ಕೆ ಇನ್ನು ಬಂದಿರಲಿಲ್ಲ ಮಾತ್ರವಲ್ಲ ಆತನು ನಿಮ್ಮನ್ನು ಸಂಪೂರ್ಣವಾಗಿ ತುಂಬಿಸುವಂತೆ ನೀವು ಸಿದ್ಧತೆಮಾಡಿಕೊಂಡಿರಲಿಲ್ಲ.

ನಿಮಗೆ ಪವಿತ್ರ ಆತ್ಮನು ಇದ್ದಾನೆ ನಿಮ್ಮ ಸಕಲವೂ ಆತನಲ್ಲಿ ಇದೆ. ಎಂದು ತಿಳುಕೊಳ್ಳಲು ನೀವು ಖಂಡಿತರಾಗಿರಬಹುದು. ತನ್ನ ಸೇವೆಯಲ್ಲಿ ಕರ್ತನು ನಿಮ್ಮನ್ನು ಉಪಯೋಗಿಸಲು ಇಷ್ಟವುಳ್ಳವನಾಗಿದ್ದಾನೆ ಅದನ್ನು ಜಯಜೀವಿತವಾಗಿಸಲು ಮತ್ತು ತಿರುಗಿ ಫಲಕೊಡಲು ಆತನ ಶಕ್ತಿಯ ಅವಶ್ಯಕತೆಯು ನಿಮಗೆ ಇದೆ.

ದೇವರು ನಮಗೆ ಅಲೌಕೀಕವಾದ ವರಗಳನ್ನು (ಲೌಕೀಕ ಶಕ್ತಿಯ ಬಲವನ್ನು) ನಮ್ಮದಿನನಿತ್ಯದ ಜೀವಿತದಲ್ಲಿ ಜೀವಸಲು ಸಹಾಯಮಾಡುವುದಕ್ಕೂ ಕೂಡತ್ತಾನೆ ಒಪ್ಪಿಸಿಕೊಡುತ್ತಾನೆ. ವರಗಳು ಬೇರೆ ಬೇರೆಯಾಗಿರುತ್ತದೆ, ಅವುಗಳನ್ನು ಪ್ರತಿಯೊಬ್ಬರೂ ಪಡಕೊಳ್ಳುತ್ತಾರೆ, ಆದರೆ ಕೆಲವರು ಇತರರಿಗಿಂತ ಹೆಚ್ಚು ಪ್ರಭಲವಾಗಿರಬಹುದು. ನಾನು ಕಲಿಸುವ ವರವನ್ನು ಹೊಂದಿದ್ದೆನೆ. ಇತರರು ಸಂಗೀತದಲ್ಲಿನ ವರ, ಅಥವ ಅಧಿಕಾರ ನಡೆಸುವ, ಕರುಣೆಯನ್ನು ತೊರಿಸುವ, ಅಥವ ಸಹಾಯ ಮಾಡುವ ವರಗಳನ್ನು ಹೊಂದಿದ್ದಾರೆ. 1ನೇ ಕೊರಿಂಥ 12:7–10ರಲ್ಲಿ ತಿಳಿಸಿರುವ ಒಂಬತ್ತು ವರಗಳನ್ನು ನಾವು ತಿಳಿದವರಾಗಿರಬೇಕು. ನಿಜವಾಗಿ ಈ ವರಗಳನ್ನು ಬಯಸುವುದಕ್ಕೆ (ಗಂಭ್ಬಿರವಾಗಿ ಇಚ್ಚಿಸಲಿಕ್ಕೆ) ನಾವು ಕಲಿಸಲ್ಪಟ್ಟಿದ್ದೇವೆ. ಅವುಗಳು ಬುದ್ದಿಯುಳ್ಳ ವಾಕ್ಯಗಳು, ಜ್ಞಾನವುಳ್ಳ ಮಾತುಗಳು, ನಂಬಿಕೆಯ ವರಗಳು, ಸ್ವಸ್ಥಪಡಿಸುವ ಶಕ್ತಿ, ಅದ್ಭುತ ಕಾರ್ಯಗಳನ್ನು ಮಾಡುವುದು, ಪ್ರವಾದನೆ ಹೇಳುವುದು, (ದೈವೀಕಚಿತ್ತ ಮತ್ತು ದೇವರ ಉದ್ದೇಶಗಳನ್ನು ಬಾಷಾಂತರಿಸುವುದು), ಒಳ್ಳೆಯ ಮತ್ತು ಕೆಟ್ಟದರ ಆತ್ಮಗಳ ನಡುವಣ ಅಂತರವನ್ನು ಕಂಡುಕೊಳ್ಳುವುದರಲ್ಲಿ ಸಾಮರ್ಥ್ಯ ಹೊಂದಿರುವುದು, ಅನ್ಯಭಾಷೆಗಳಲ್ಲಿ ಮಾತನಾಡುವದು, ಮತ್ತು ಅಂತಹ ಭಾಷೆಗಳ ಅರ್ಥವನ್ನು ತಿಳಿಸುವ ಸಾಮರ್ಥ್ಯ ಈ ಒಂಬತ್ತು ವರಗಳಾಗಿವೆ.

ನೀವು ಈ ವರಗಳನ್ನು ಅರ್ಥಮಾಡಿಕೊಳ್ಳಲು ಆಗದೇ ಇದ್ದಾಗ್ಯೂ ಸಹ, ಅದನ್ನು ನಿಮಗೆ ಕೊಡಲು ನೀವು ದೇವರನ್ನು ಬೇಡಿಕೊಳ್ಳುವಂತೆ, ಮತ್ತು ಅದರ ವಿಷಯದಲ್ಲಿ ನಿಮಗೆ ತಿಳಿಸಿ, ಅದರ ಸರಿಯಾದ ಉಪಯೋಗವನ್ನುಮಾಡಿ ಕೊಳ್ಳುವಂತೆ ದೇವರನ್ನು ಬೇಡಿಕೊಳ್ಳಬೇಕೆಂದು ನಾನು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ. ಜನರು ತಿಳಿಯದ ಈ ಭಾಷೆಗಳಲ್ಲಿ ಮಾತನಾಡುವುದನ್ನು ದೇವರ ವಾಕ್ಯದಲ್ಲಿ ಅನೇಕ ಸಂಧರ್ಭದಲ್ಲಿ ನಾವು ನೋಡುತ್ತೆವೆ (ಆತ್ಮೀಯ ಭಾಷೆಗಳಲ್ಲಿ). ನಾವು ಅನ್ಯಭಾಷೆಯಿಂದ ಪ್ರಾರ್ಥನೆ ಮಾಡುವಾಗ, ನಾವು ರಹಸ್ಯಗಳನ್ನು ಮತ್ತು ಧಾರ್ಮಿಕ ಸತ್ಯಗಳಿಗಾಗಿ ದೇವರಿಗೆ ಭಿನ್ನವಿಸುತ್ತೇವೆ ಮತ್ತು ನಾವು ವೃದ್ಧಿಗೊಂಡು ನಾವಾಗಿಯೇ ಅಭಿವೃದ್ಧಿ ಹೊಂದುತ್ತೇವೆ. ಪ್ರತಿಯೊಬ್ಬರೂ ಅನ್ಯಭಾಷೆಗಳಲ್ಲಿ ಮಾತನಾಡುವುದಕ್ಕೆ ಅವನು ಇಷ್ಟಪಡುತ್ತಾನೆಂದು ಅಪೋಸ್ತಲನಾದ ಪೌಲನು ಹೇಳುತ್ತಾನೆ. (1 ಕೊರಿಂಥ 14:2, 4–5)

ಅನ್ಯಭಾಷೆಗಳನ್ನಾಡುವ ವರವು ವಿಶೇಷವಾಗಿ ಅನೇಕ ವರ್ಷಗಳಿಂದ ಕ್ರೈಸ್ತರ ನಡುವೆ ಭಿನ್ನಾಭಿಪ್ರಾಯವನ್ನು ತಂದೊಡ್ಡುವ ಒಂದು ಅಂಶವಾಗಿದೆ. ಕೆಲವರು, ವರಗಳು ಈ ದಿನಕ್ಕೆ ಸಂಭಂದ ಪಡುತ್ತವೆ ಎಂದು ನಂಬುತ್ತಾರೆ, ಆದರೆ ಇತರರು ಅವುಗಳು ಹಾಗಲ್ಲ ಎಂದು ನಂಬುತ್ತಾರೆ. ನಾನು ವಯ್ಯಕ್ತಿಕವಾಗಿ ನನ್ನ ಜೀವಿತದಲ್ಲಿ ಈ ವರಗಳನ್ನು ಅನುಭವಿಸಿದ್ದೇನೆ. ಮೂವತ್ತು ವರ್ಷಗಳಿಗಿಂತಲೂ ಹೆಚ್ಚಾಗಿ ಅನ್ಯಭಾಷಗಳನ್ನು ಮಾತಾಡಿದ್ದೇನೆ, ಆದುದರಿಂದ ಈಗಿನ ಕ್ರೈಸ್ತರಿಗೆ ಅವುಗಳು ಸಂಮಜಸವಾದದ್ದು ಎಂದು ನಾನು ತಿಳಿದಿಕೊಂಡಿದ್ದೇನೆ. ನಮಗೆ ಯಾವುದು ಸಹಾಯ ಮಾಡುತ್ತದೊ ಅದು ನಮಗೆ ಅವಶ್ಯ.

ಆಗಾಗ್ಯೆ ಜನರು ತಮಗೆ ಯಾವ ಅನುಭವವಿಲ್ಲವೊ, ಅಥವಾ ಅರ್ಥಮಾಡಿಕೊಳ್ಳುವುದಿಲ್ಲವೊ ಅದನ್ನು ತಿರಸ್ಕರಿಸುವವರಾಗಿದ್ದಾರೆ. ಇದು ಒಂದು ತಪ್ಪು ನಾವು ಸತ್ಯವೇದವನ್ನು ಚೆನ್ನಾಗಿ ಓದಿ, ಅದು ನಮಗೆ ಏನು ಹೇಳುತ್ತೊ ಅದನ್ನು ನಂಬಬೇಕು.

ನೀವು ಪವಿತ್ರಾತ್ಮನಲ್ಲಿಯೇ ಗಮನವಿಡಬೇಕೆ ಹೊರತು ಆತನ ವರಗಳ ಮೇಲೆ ಅಲ್ಲ ಎಂದು ನಾನು ನಿಮ್ಮನ್ನು ಎಚ್ಚರಿಸುತ್ತೇನೆ. ವರಗಳು ತಾವಾಗಿಯೇ ಬರುತ್ತವೆ. ಕೆಲವು ಜನರು ಅನ್ಯಭಾಷೆಗಳ ಅಥವಾ ಅವರು ಬೇರೆ ವರಗಳನ್ನು ಪಡೆದುಕೊಂಡದಕಿಂತ ಹೇಚ್ಚಾಗಿ ತೋರಿಸಿಕೊಳ್ಳುತ್ತಾರೆ. ನಿಮ್ಮ ಜೀವಿತದಲ್ಲಿ ಆತನ ಪ್ರಸನ್ನತೆಗಾಗಿ ಪ್ರತಿನಿತ್ಯವು ಬೇಡಿಕೊಳ್ಳಿರಿ, ತಕ್ಕ ಸಮಯದಲ್ಲಿ ಅನ್ಯ ಭಾಷೆಗಳು ಹಾಗೆಯೇ ಇತರೆ ವರಗಳು ತಾವಾಗಿಯೇ ಬರುತ್ತವೆ.

## ದೇವರ ಪ್ರಸನ್ನತೆಯನ್ನು ಹುಡುಕಿರಿ, ಆತನ ದಾನಗಳಿಗಾಗಿ ಅಲ್ಲ

ದೇವರು ನಿಮಗೆ ಒಳ್ಳೆಯದನ್ನೇ ಮಾಡುವುದಕ್ಕೆ ಇಷ್ಟಪಡುತ್ತಾನೆ. ನಿಮಗೆ ಹೆಚ್ಚಾದ

ಆರ್ಶಿವಾದಗಳನ್ನು ಕೊಡುವುದಕ್ಕೆ ಇಷ್ಟಪಡುತ್ತಾನೆ, ಆದರೆ ಅವನು ಯಾರಾಗಿದ್ದಾನೆ ಎಂದು ಮಾತ್ರವಲ್ಲದೆ ಆತನು ನಿಮಗೆ ಏನು ಮಾಡಬಲ್ಲನೆಂದು ಆತನನ್ನು ನೀವು ಹುಡುಕುವುದು ಬಹಳ ಪ್ರಾಮುಖ್ಯವಾದದ್ದಾಗಿದೆ. ಹೋಲಿಕೆಗೆ ಮೀರಿ ದೇವರು ಅದ್ಭುತನಾಗಿದ್ದಾನೆ ಮತ್ತು ಆತನ ಪ್ರಸನ್ನತೆಯಲ್ಲಿ ಇರುವುದು ಆಶ್ಚರ್ಯಕರವಾಗಿದೆ. ಆತನ ಮುಖವನ್ನು ದರ್ಶಿಸುತ್ತಿದಂತೆ, ಆತನ ಕೈಗಳು ಯಾವಾಗಲೂ ತೆರೆದಿರುದನ್ನು ಕಾಣುತ್ತಿರಿ ನೀವು ಆತನ ಕೈಗಳನ್ನು ಮಾತ್ರ ನೋಡುವುದಾದರೆ, ಅದು ಆತನನ್ನು ಅವಮಾನ ಪಡಿಸುವಂಥದ್ದಗಿದೆ. ಬೇರೆಯುವರ ವಯ್ಯಕ್ತಿಕ ಅನುಕೂಲಕ್ಕಾಗಿ ಉಪಯೋಗಿಸಲ್ಪಡುವುದು ಯಾರಿಗು ಇಷ್ಟವಲ್ಲ ಮತ್ತು ದೇವರಿಗೂ ಇಷ್ಟವಲ್ಲ.

ನಿಮಗೆ ಬೇಕಾದದ್ದನ್ನು ಅಥವಾ ಅವಶ್ಯವಾಗಿರುವುದು ಯಾವುದನ್ನಾದರೂ ದೇವರನ್ನು ಬೇಡಿಕೊಳ್ಳಿರಿ ಅದು ನಿಮಗೆ ಒಳ್ಳೆಯದಾಗಿದ್ದರೆ, ಆತನ ತಕ್ಕ ಸಮಯದಲ್ಲಿ ನಿಮಗೆ ಅದನ್ನು ಅವನು ಕೊಡುತ್ತಾನೆ. ಆದರೆ ಎಲ್ಲದಕ್ಕಿಂತಲೂ ಹೆಚ್ಚಾಗಿ ನಿಮ್ಮಜೀವಿತದಲ್ಲಿ ಆತನನ್ನು ಹೆಚ್ಚಾಗಿ ಆತನ ಪ್ರಸನ್ನತೆ, ಆತನ ಮಾರ್ಗಗಳು, ಆತನ ಗುಣಲಕ್ಷಣಗಲು, ಆತನ ಜ್ಞಾನ, ಆತನ ತಿಳುವಳಿಕೆ, ಆತನ ಶಕ್ತಿ ಮುಂತಾದವುಗಳಲ್ಲಿ ಬಯಸುವುದನ್ನು ನೀವು ಯಾವಾಗಲೂ ನೆನೆಪುಮಾಡಿಕೊಳ್ಳಿ. ದೇವರು ಸರ್ವಸ್ವವೂ ಆಗಿದ್ದಾನೆ ಆತನಿಲ್ಲದೆ ನಾವು ಏನು ಇಲ್ಲ "ನನ್ನನ್ನು ಬಿಟ್ಟು ನೀವು ಏನು ಮಾಡಲಾರಿರಿ" ಎಂದು ಯೇಸು ಹೇಳಿದನು (ಯೋಹಾನ 15:5).

> ಏಕೆಂದರೆ ಸಮಸ್ತವೂ ಆತನಿಂದ ಉಂಟಾಗಿ, ಆತನ ಮೂಲಕವಾಗಿಯೂ ಆತನಿಗಾಗಿ ಇರುತ್ತದೆ. (ಸಮಸ್ತವೂ ಆತನಿಂದ ಉಂಟಾಯಿತು ಆತನಿಂದ ಬರುತ್ತದೆ, ಎಲ್ಲವೂ ಆತನ ಮೂಲ್ಲಕವಾಗಿ ಜೀವಿಸುತ್ತದೆ, ಎಲ್ಲವೂ ಆತನಲ್ಲಿ ಕೇಂದ್ರಿಕರಿಸಲ್ಪಟ್ಟಿದೆ, ಮತ್ತು ನೆರವೇರಿಸುವುದಕ್ಕೆ ಉದ್ದೇಶಿಸುತ್ತದೆ, ಮತ್ತು ಆತನಲ್ಲಿಯೇ ಮುಕ್ತಾಯವಾಗಿತ್ತೆ) ಆತನಿಗೆ ಸದಾಕಾಲವೂ ಮಹಿಮೆ ಉಂಟಾಗಲಿ! ಆಮೆನ್ (ಹಾಗೆಯೇ ಆಗಲಿ).
>
> —ರೋಮಾಪುರ 11:36

# ಕಲಿತುಕೊಳ್ಳುವುದಕ್ಕೆ ಬೇಕಾದಷ್ಟಿದೆ

ಈ ಚಿಕ್ಕ ಪುಸ್ತಕದಲ್ಲಿ ನಾನು ನಿಮ್ಮೊಂದಿಗೆ ಹಂಚ್ಚಿಕೊಂಡದಕಿಂತ ನೀವು ಕಲಿಯಬೇಕಾದ ಬಹಳ ಹೆಚ್ಚಾದ ಸಂಗಿತಿಗಳು ಇರುತ್ತವೆ. ನೀವು ನಿಮ್ಮ ನಂಬಿಕೆ ಯಾವ ಉಪದೇಶದ ಮೇಲಿದೆ ಎಂದು ಮತ್ತು ಕ್ರೈಸ್ತವ ಧರ್ಮದ ಮೂಲತತ್ವಗಳ್ನು ಕಲಿತುಕೊಳ್ಳುವುದು ಆವಶ್ಯವಾಗಿದೆ. ಒಬ್ಬ ನೂತನ ವಶ್ವಾಸಿಯ ಸ್ಥಾನ (ವರ್ಗ) ಸಾಧಾರಣವಾಗಿ ಅಧಿಕ ಸಂಖ್ಯೆಯಸಭೆಗಳಿಗೆ ಒಪ್ಪಿಸಲಾಗಿದೆ, ಅವುಗಳಲ್ಲಿ ಒಂದಕ್ಕೆ ನೀವು ಹಾಜರಾಗಬೇಕೆಂದು ನಾನು ನಿಮ್ಮನ್ನು ವಿಶೇಷವಾಗಿ ಶಿಫಾರಸ್ಸು ಮಾಡುತ್ತೇನೆ. ಯೇಸು ಒಬ್ಬ ಕನ್ಯೆಯ ಗರ್ಭದಲ್ಲಿಜನಿಸಿದ್ದನು ಎಂದು ನೀವು ತಿಳಿದುಕೊಳ್ಳುತ್ತೀರಿ. ಅದುನಿಮಗೆ ಅಸಾಧ್ಯವಾದದ್ದಾಗಿ ಕಾಣುತ್ತದೆಯೆಂದು ನನಗೆ ಗೊತಿದೆ, ಆದರೆ ಏನುಕಡಿಮೆಯಿಲ್ಲದೆ ಬಹಳ ಸತ್ಯವಾದದ್ದು ಮಾತ್ರವಲ್ಲ ನೀವು ಅದನ್ನು ಎಕ್ಕೆ ಎಂಬುದುನ್ನು ಅರ್ಥವಮಾಡಿಕೊಳ್ಳುವುದು ಪ್ರಾಮುಖ್ಯವಾದದ್ದು. ದೇವರಿಗೆ ಹಣದರೂಪದಲ್ಲಿ ಹಿಂತಿರುಗಿ ಕೊಡುವುದು ಬಹಳ ಮುಖ್ಯವಾದದ್ದು, ಎಕೆಂದರೆ ದೇವರನ್ನು ತಿಳಿಯದರಿಗೆ ಆ ಸುವಾರ್ತೆಯು ಸಾರಲ್ಪಡಬೇಕು ಎಂಬುದುನ್ನು ನೇವುಕಳಿಯತ್ತಿರಿ. ತ್ರೈಯೇಕತ್ವದ, ಒಬ್ಬನೇ ದೇವರನ್ನು ಸೇವಿಸುವ ಸತ್ಯ, ತಂದೆ, ಮಗ ಮತ್ತು ಪರಿಶುದ್ಧಾತ್ಮ ಎಂಬ ಆ ಮೂರು ವ್ಯಕ್ತಿಗಳನ್ನು ರುಜುವಾತುಪಡಿಸುವಂಥ ವಿಷೆಯಗಳನ್ನು ನೀವು ತಿಳಿದುಕೊಳ್ಳುವಿರಿ. ದೇವದೂತರಗಳ ಸಂದೇಶ, ಯೇಸುವಿನ ರಕ್ತದ ಪ್ರಾಮುಖ್ಯತೆ, ಹೇಗೆ ದೇವರ ಸ್ವರವನ್ನು ಆಲಿಸುವುದು, ನೀತಿಯ ಸಿದ್ಧಾಂತ, ಮಾನಸಾಂತರ ಮತ್ತು ಇತರ ಜನಸಮೂಹದ ಸಂಗತಿಗಳ, ವಷಯವಾಗಿಯೂ ನೀವು ತಿಳಿದುಕೊಳ್ಳುತ್ತೀರಿ.

ಆದಾಗ್ಯೂ, ಈ ಪುಸ್ತಕದಲ್ಲಿ ಎಲ್ಲವನ್ನು ನಾನು ಹಂಚಿಕೊಳ್ಳಲಾಗಲಿಲ್ಲ ನಾನು ನಿಮ್ಮೊಂದಿಗೆ ಹಂಚಿಕೊಳ್ಳಬೇಕೆಂದರುವ ಇನ್ನೂ ಕೆಲವು ವಿಷಯಗಳಿವೆ, ನಿಮ್ಮ ನೂತನ ಜೀವನಕ್ಕೆ ಅದು ಪ್ರಾಥಮಿಕವಾಗಿರುವ ಪ್ರಾಮುಖ್ಯತೆ ಎಂದು ನಾನು ನಂಬುತ್ತೇನೆ, ಆದದರಿಂದ ಬನ್ನಿರಿ, ಮುಂದೆ ಸಾಗೋಣ.

# ಅಧ್ಯಾಯ–5

# ಯೋಚನೆ ಮಾಡಲು ಒಂದು ನೂತನ ಮಾರ್ಗ

ಸಂಪೂರ್ಣವಾಗಿ ಹೊಸರೀತಿಯಲ್ಲಿ ಯೋಚನೆಮಾಡಲು ಕಲಿತುಕೊಳ್ಳುವುದು ಬಹಳ ಪ್ರಾಮುಖ್ಯವಾದದ್ದು. ನಿಮಗಾಗಿ ಮತ್ತು ನಿಮ್ಮ ಜೀವಿತಕ್ಕಾಗಿ ದೇವರಲ್ಲಿ ಒಳ್ಳೆಯ ಯೋಜನೆಗಳಿರುತ್ತವೆ. ಅದರ ವಿಷಯದಲ್ಲಿ ನೀವು ಆತನೊಂದಿಗೆ ಅದಕ್ಕಾಗಿ ಒಪ್ಪಂದ ಮಾಡಿಕೊಳ್ಳತಕ್ಕದ್ದು. ಸೈತಾನನಿಗೆ ಯಾವಾಗಲೂ ನಿಮಗಾಗಿ ಮತ್ತು ನಿಮ್ಮ ಜೀವಿತಕ್ಕೆ ಆತನ ಯೋಜನೆಗಳೂಕೂಡ ಇರುತ್ತವೆ, ಮತ್ತು ಅದು ಒಳ್ಳೆಯದಲ್ಲ. ಕಳ್ಳನು (ಸೈತಾನನು) ಕದಿಯುವುದಕ್ಕೆ, ಕೊಲ್ಲುವುದಕ್ಕೆ ಮತ್ತು ನಾಶಮಾಡುವುದಕ್ಕೆ ಮಾತ್ರ ಬರುತ್ತಾನೆ, (ಯೋಹನ 10:10) ಎಲ್ಲಾ ತರದ ತಪ್ಪಾದ ಯೋಚನೆಗಳನ್ನು ನಾವು ನಂಬುತ್ತೇವೆಂದು ನಿರೀಕ್ಷಿಸಿಕೊಂಡು, ನಂತರ ಅವನ ಜೊತೆಗೆ ಒಡಂಬಡಿಕೆಯನ್ನು ಮಾಡಿಕೊಳ್ಳುತ್ತೇವೆಂಬ ನಂಬಿಕೆಯಿಂದ ಅದನ್ನು ನಮ್ಮಲ್ಲಿ ಸೈತಾನನ್ನು ಒಳನುಗ್ಗಿಸುತ್ತಾನೆ. ಈ ರೀತಿಯ ಮಾರ್ಗಗಳಿಂದ ಅವನು ಜನರನ್ನು ಮೋಸಗೊಳಿಸುತ್ತಾನೆ ಮತ್ತು ಅವರ ಜೀವಿತದಲ್ಲಿ ಪ್ರವೇಶ ಮಾಡುವುದನ್ನು ಕಂಡು–ಹಿಡಿಯುತ್ತಾನೆ.

> ಇಹ ಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದು ಮೆಚ್ಚಿಗೆಯಾದದ್ದು ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳಿದುಕೊಳ್ಳುವಿರಿ.
>
> —ರೊಮಾ 12:2

ನಮ್ಮ ಯೋಚನೆಗಳು ಬದಲಾವಣೆ ಆಗದ ಹೊರತು ನಮ್ಮ ಜೀವಿತಗಳು ಬದಲಾವಣೆ ಹೊಂದುವುದಿಲ್ಲ ಎಂದು ಮೇಲಿರುವ ವಾಕ್ಯವು ನಮಗೆ ಸ್ಪಷ್ಟವಾಗಿ ತಿಳಿಸುತ್ತದೆ. ನಿಮಗೆ ಹೊಸ ಜೀವನವು ಬೇಕಾದರೆ ನಿಮಗೆ ಹೊಸ ಯೋಚನೆಯುಳ್ಳ ಒಂದು ನೂತನ ಮಾರ್ಗವನ್ನು ನೀವು ಪಡೆದುಕೊಳ್ಳಬೇಕು. ನಮ್ಮ ಪ್ರತಿಯೊಬ್ಬರಿಗಾಗಿ ದೇವರಲ್ಲಿ ಒಳ್ಳೆಯ ಯೋಜನೆಗಳಿವೆ, ಆದರೆ ಸರಿಯಾದ ಯೋಜನೆಗಳ ಪ್ರಾಮುಖ್ಯತೆಯನ್ನು ನಾವು ಕಲಿತುಕೊಳ್ಳುವ ಹಾಗೆ ಅದು ನಮ್ಮ ಜೀವಿತದಲ್ಲಿ ಪರಿಣಾಮಕಾರಿಯಾಗುವಾಗ ನಾವು ಹಾಗೆಯೇ ನೋಡುತ್ತೇವೆ.

## ನಿಮ್ಮ ಯೋಚನೆಗಳನ್ನು ನಿಮ್ಮ ಹತೋಟಿಯಲ್ಲಿಟ್ಟು ಕೊಳ್ಳಬಹುದು

ಒಂದು ವೇಳೆ ನೀವು ಸಹ ನಾನು ಇದ್ದಂತೆಯೆ ಇದ್ದು ನೀವು ಏನು ಯೋಚನೆ ಮಾಡುತ್ತೀರೊ ಅದರ ವಿಷಯದಲ್ಲಿ ಏನು ಮಾಡಲಾಗುವುದಿಲ್ಲವೆಂಬ ಯೋಚನೆಯಲ್ಲಿರಬಹುದು. ಅದು ಸರಿಯಲ್ಲ. ನೀವು ಏನು ಮಾಡಬಲ್ಲಿರಿ ಎಂಬುದರ ಆಯ್ಕೆ ಮಾಡಿಕೊಳ್ಳಬಹುದು, ಇಲ್ಲವೇ ಅದರ ಕುರಿತು ಯೋಚಿಸದೇ ಇರಬಹುದು ಮತ್ತು ನೀವು ಇದನ್ನು ಬಹಳಎಚ್ಚರಿಕೆಯಿಂದ ಮಾಡಬೇಕು. ಮನಸ್ಸು ಎಲ್ಲಿಗೆ ಹೋಗುತ್ತೊ ಮನುಷ್ಯನು ಹಿಂಬಾಲಿಸುತ್ತಾನೆ. ಏನಾದರು ತಿನ್ನುವುದದರ ವಿಷಯದಲ್ಲಿ ಯೋಚಿಸುವುದಕ್ಕೆ ಪ್ರಾರಂಭಿಸುವ ಅನುಭವ ನಮ್ಮೆಲ್ಲರಿಗೂ ಇದೆ. ಒಂದು ವೇಳೆ ಐಸ್‌ಕ್ರೀಮ್ ಅಥವ ಕೆಲವು ಇತರೆ ಪ್ರೇರೇಪಿಸುವ ಆಹಾರವಾಗಿರಬಹುದು. ನಾವು ಅದರ ಕುರಿತು ಎಷ್ಟು ಹೆಚ್ಚಾಗಿ ಯೋಚನೆ ಮಾಡುತ್ತೇವೋ ಅಷ್ಟೇ ಹೆಚ್ಚಾಗಿ ಅದನ್ನು ನಾವು ಹೊಂದಲೇಬೇಕೆಂದು ಧೃಡಮಾಡಿಕೊಂಡವರಾಗಿ ನಾವು ಬರುತ್ತೇವೆ. ಒಂದುವೇಳೆ ಅದರ ವಿಷಯದಲ್ಲಿ ನಾವು ಸಾಕಷ್ಟು ಯೋಚನೆ ಮಾಡಿದ ನಂತರ ಒಂದು ಕಾರಿನಲ್ಲಿ ಕೂತು ಅದನ್ನು ಬಹಳ ಮೈಲಿಗಳ ತನಕ ಓಡಿಸಿ, ಅದನ್ನು ತಿಂದಮೆಲೆ, ಕಳೆದ ಸಮಯವನ್ನು ವ್ಯರ್ಥಮಾಡಿ, ಹಣವನ್ನು ವೆಚ್ಚಮಾಡಿದಕ್ಕಾಗಿ [ಖರ್ಚು ಮಾಡಿದಕ್ಕಾಗಿ] ನಾವು ದುಃಖಕ್ಕೆ ಒಳಗಾಗುತ್ತೇವೆ.

ಯಾರಾದರೂ ನಮಗೆ ಒಂದುವೇಳೆ ಕೆಟ್ಟದ್ದಾಗಿ ನಡಕೊಂಡಿದ್ದರೆ, ಅವರು ಮಾಡಿದ ವಿಷಯದಲ್ಲಿ ಮೇಲಿಂದ ಮೇಲೆ ನಮ್ಮನ್ನು ನೋಯಿಸದರೆಂದು ಯೋಚಿಸುತ್ತೇವೆ, ನಾವಾಗಿಯೆ ಕೋಪಗೊಂಡು, ಮಾನಸಿಕವಾಗಿ ಗಲಿಬಿಲಿಗೆ ಗುರಿಯಾಗುವ ಅನುಭವವನ್ನು ಹೊಂದಬಲ್ಲೆವು. ನಮ್ಮ ಆಲೋಚನೆಗಳು ನಮ್ಮ ಮನೋಭಾವದ ಮೇಲೆ ಪ್ರಭಾವಬೀರುತ್ತವೆ ಮತ್ತು ನಾವು ಮಾತಾಡುವ ಶಬ್ಧಗಳು ಹೋರಗೆ ಕಾಣಬರುತ್ತದೆ. ಮುಂದಿನ ಸಮಯದಲ್ಲಿ ನೀವು ನಿಮ್ಮಲ್ಲೀ ಗಲಿಬಿಲಿಗೆ ಒಳಗಾಗಿದ್ದೇವೆ ಅಥವ ನಿರಾಶೆಗೊಂಡಿದ್ದೇವೆಂದು ನಿಮಗೆ ಕಂಡುಬಂದಾಗ, ನಿಮ್ಮಲ್ಲಿ ನೀವೆ ಸುಮ್ಮನೆ ಪ್ರಶ್ನಿಸಿಕೊಳಿರಿ, ನೀವು ಯಾವುದರ ಕುರಿತು ಯೋಚನೆ ಮಾಡುತ್ತಿದ್ದೀರಿ ಎಂದು, ಆಗ ನಿಮ್ಮ ಯೋಚನೆಗಳ ಮತ್ತು ಅನಿಸುವಿಕೆಗಳ ನಡುವೆ ಸಂಭಂದವಿದೆಯೆಂದು ನಿಮಗೆ ಕಂಡು ಬರುತ್ತದೆ.

ಸೈತಾನನೊಡನೆ ಹೋರಾಟವನ್ನು, ಯುದ್ಧವನ್ನು ನಾವು ಮಾಡುವ ಸ್ಥಳ ಆ ಯುದ್ಧರಂಗವು ನಮ್ಮ ಮನಸ್ಸೇ ಆಗಿದೆ. 2ನೇಯ ಕೊರಿಂಥ 10:4–5ರಲ್ಲಿ ನಾವು ತಪ್ಪಾದ ಯೊಚನೆಗಳನ್ನು ಮತ್ತು ಊಹೆಗಳನ್ನು ಬಿಟ್ಟು ಬಿಟ್ಟು (ಹೊರಗೆಹಾಕಿ), ಅವುಗಳನ್ನು ಯುದ್ಧ ಖೈದಿಗಳಂತೆ ಯೇಸುಕ್ರಿಸ್ತನ ಬಳಿಗೆ ತರಬೇಕೆಂದು ಭೋದಿಸುತ್ತದೆ. ಅಂದರೆ ದೇವರ ವಾಕ್ಯಕ್ಕೆ ಅನುಸಾರವಾಗಿ ನಾವು ಯೋಚಿಸಬೇಕು. ಯಾವುದೇ ವಿಷಯ ಕ್ರಿಸ್ತನ ಭೋದನೆಗಳೊಂದಿಗೆ ಒಪ್ಪಿಕೊಳ್ಳೂವುದಿಲ್ಲವೋ, ಅಂತಹವುಗಳನ್ನು ನಮ್ಮ ಮನಸ್ಸಿನಿಂದ ಕಿತ್ತು ಹೋರಗೆ ಹಾಕಬೇಕು ಮತ್ತು ಅದು ಸ್ಯ್ತಾನನಿಂದ ಬಂದ ಸುಳ್ಳೆಂದು ನಿರಾಕರಿಸಬೇಕು. ನಿಮ್ಮಶತ್ರು [ಸೈತಾನ] ನಿಮ್ಮ ಮನಸ್ಸನ್ನು ತನ್ನ ಹತೋಟಿಯಲ್ಲಿಟ್ಟು ಕೊಳಬಲ್ಲವನಾದರೆ, ಅವನು ನಿಮ್ಮ ಜೀವಿತವನ್ನು ಮತ್ತು ಹಣೇಬರಹವನ್ನು [ಅಂತ್ಯವನ್ನು] ಹತೋಟಿಯಲ್ಲಿಟ್ಟುಕೊಳ್ಳಬಲ್ಲನು.

ಉದಾಹರಣೆಗಾಗಿ, ಆತ್ಮಹತ್ಯಮಾಡಿಕೊಳ್ಳಬೇಕೆಂಬ ಯೋಚನೆ ನಿಮಗೆ ಇದ್ದರೆ, ಅದನ್ನು ದೇವರು ನಿಮ್ಮ ಮನಸ್ಸಿನೊಳಗೆ ಇಟ್ಟಿಲ್ಲ, ನೀವು ಜೀವಿಸಿ ಸಂತೋಷಪಡಬೇಕೆಂಬುದೆ ಆತನ ಆಶೆ. ನೀವು ಯಾವ ಕೆಲಸಕ್ಕೆ ಬಾರದವರು,

ಅಥವ ಯಾರು ನಿಮ್ಮನ್ನು ಪ್ರೀತಿಸುವುದಿಲ್ಲ ಎಂಬ ಯೋಚನೆಗಳು ನಿಮ್ಮಲ್ಲಿದ್ದರೆ, ಇಂತಹ ಯೋಚನೆಗಳು ದೇವರಿಂದ ಬಂದದ್ದಲ್ಲ ಯಾಕೆಂದರೆ ಅವುಗಳು ಆತನ ವಾಕ್ಯಾಗಳೊಂದಿಗೆ ಒಪ್ಪಿಕೊಳ್ಳುವುದಿಲ್ಲ.

## ನಕಾರಾತ್ಮಕ ಯೋಚನೆ

ಯಾವುದೇ ತರಹದ ನಕಾರಾತ್ಮಕ ಯೋಚನೆಯ ಬಗ್ಗೆ ಎಚ್ಚಾರಿಕೆಯಾಗಿರಿ. ನಿಮ್ಮ ಜೀವಿತಕ್ಕಾಗಿ ದೇವರ ವಿಷಯದಲ್ಲಿ ಅಥವ ಆತನ ಉದ್ದೇಶದಲ್ಲಿ ಯಾವ ನಕಾರಾತ್ಮಕ ವಿಷಯಗಳು ಇಲ್ಲ. ಒಂದು ಲೋಟದಲ್ಲಿ ಅರ್ಧ ಖಾಲಿಯಾಗಿರುವುದಕ್ಕಿಂತ ಅರ್ಧ ಭರ್ತಿಯಾಗಿರುವುದನ್ನು ನೋಡಿ ತಿಳುಕೊಳ್ಳುವುದು ಬಹಳ ಉತ್ತಮ ಸಕಾರಾತ್ಮಕವಾಗಿರುದು ಯಾರನ್ನೂ ನೋಯಿಸುವುದಿಲ್ಲ.

ಇಲ್ಲಿಯವರೆಗೆ ನಿಮ್ಮ ಜೀವಿತವು ಯಾವ ರೀತಿಯಲ್ಲಿತ್ತೊ, ಚಿಂತೆಯಿಲ್ಲ, ನೀವು ನಿಮ್ಮ ಭವಿಷ್ಯದ ಜೀವಿತಕ್ಕೆ ನಿಮಗೆ ಒಂದು ಸಕಾರಾತ್ಮಕವಾದ ದರ್ಶನವನ್ನು ನೀವು ಹೊಂದಿರಲೇ ಬೇಕು. ನಿಮಗೆ ಬಳ್ಳೆಯ ಸಂಗತಿಗಳು ನಿಮ್ಮ ಜೀವಿತದಲ್ಲಿ ಆಗುತ್ತದೆಯೆಂದು ನಂಬಿ ದೇವರೊಂದಿಗೆ ಒಪ್ಪಂದಕ್ಕೆ ಬನ್ನಿರಿ ಒಂದು ಸಮಯದಲ್ಲಿನಾನು ಇದ್ದಂತೆ ನೀವು ಸಹ ನಕಾರಾತ್ಮಕ ವ್ಯಕ್ತಿಯಾಗಿದ್ದರೆ, ಸಕಾರಾತ್ಮಕ ಯೋಚನೆ ಮಾಡುವುದಕ್ಕೆ ಸ್ವಲ್ಪ ಅಭ್ಯಾಸವನ್ನು ಕಂಡುಕೊಳ್ಳಬೇಕು. ನಾನು ಬಹಳ ನಕಾರಾತ್ಮಕ ವಾತಾವರಣದಲ್ಲಿ ಬೆಳೆಸಲ್ಪಟ್ಟೆನು ಮತ್ತು ಯಾವಾಗಲೂ ಕಷ್ಟಗಳನ್ನು ಮತ್ತು ಆಪತ್ತುಗಳನ್ನು ಎದುರು ನೋಡುತ್ತಿದ್ದೆನು, ಆದರೆ ನಮ್ಮ ಕಷ್ಟಗಳು ನಜವಾಗಿಯೂ ನಾವು ನಕಾರಾತ್ಮಕವದ ಯೋಚನೆಗಳನ್ನು ಮಾಡುವುದರ ಮೂಲಕ ಬರಬಲ್ಲದೆಂದು ನಂತರ ನಾನು ಕಳಿತುಕೊಂಡೆನು.

> ದೀನನ ದಿನಗಳೆಲ್ಲಾ ದುಃಖಭರಿತ; (ಕೆಟ್ಟವುಗಳು), ಹರ್ಷಹೃದಯನಿಗೆ ನಿತ್ಯವೂ ಔತಣ. —ಜ್ಞಾನೋಕ್ತಿಗಳು 15:15

ಮೊದಲನೆಯ ಸಾರಿ ಪವಿತ್ರಾತ್ಮನು ಈ ವಾಕ್ಯಕ್ಕೆ ನನ್ನನ್ನು ನಡೆಸಿದಾಗ, ಮನಸ್ಸಿನಲ್ಲಿ ಕೆಟ್ಟಾ ಯೋಚನೆಗಳು ಉಂಟಾಗುತ್ತದೆಯೆಂಬ ಯೋಚನೆಗಳ ಕುರಿತು ನನಗೆ ತಿಳಿದಿರಲಿಲ್ಲ ಆದರೆ ಅವುಗಳು ನಕಾರಾತ್ಮಕವದವುಗಳು ಮತ್ತು ಭಯಪಡಿಸುವ ಯೋಚನೆಗಳು, ಕೆಲವು ಕೆಟ್ಟ ಸಂಗತಿಗಳು ಪ್ರಾರಂಭವಾಗುತ್ತದೆಂದು ತಿಳಿದುಕೊಂಡೆ. ಎಲ್ಲಾ ಸಮಯಗಳಲ್ಲಿನಾನು ಎದುರು ನೋಡುತ್ತಿದ್ದದ್ದು, ನೆನೆಸುತ್ತಿದ್ದದ್ದು ಅದೇ ನನಗೆ ಆಗುತ್ತಿದೆಯೆಂದು ಸಹ ಒಪ್ಪಿಕೊಳ್ಳಬೇಕಾಯಿತು, ಎಕೆಂದರೆ ತೊಂದರೆ ನಾನುಎದುರು ನೋಡುತ್ತಿದ್ದದು. ಕೊಡುತ್ತಿತ್ತು. ನನ್ನ ಜೀವಿತವನ್ನು ನಾನು ಮಾರ್ಪಡಿಸಿಕೊಳ್ಳುವುದಕ್ಕೆ ಇಷ್ಟಪಟ್ಟೆ ಮತ್ತು ದೇವರು ಅದನ್ನು ಏಕೆ ಮಾರ್ಪಡಿಸುತ್ತಾ ಇಲ್ಲ ಎಂಬುದು ನನಗೆ ಅರ್ಥವಾಗಲಿಲ್ಲ, ಆದರೆ ಕಟ್ಟಕಡೆಗೆ, ಆತನು ನನ್ನ ಜೀವಿತವನ್ನು ಮಾರ್ಪಡಿಸುವುದಕ್ಕಿಂತ ಮುಂಚೆ ನಾನು ನನ್ನ ಯೋಚನೆಗಳನ್ನು ಬದಲಾವಣೆ ಮಾಡಬೇಕಾಗಿತ್ತು ಎಂದು ನಾನು ಗ್ರಹಿಸಿಕೊಂಡೆ.

ಯಾವ ವಿಷಯದಲ್ಲಿಯೂ ನಕಾರಾತ್ಮಕವಾಗಿರಬೇಡಿರಿ. . . . ನಿಮ್ಮ ಮುಂದಿನ ಅಥವ ನಿಮ್ಮ ಹಿಂದಿನ ವಿಷಯದಲ್ಲೂ ಕೂಡ. ನೀವು ದೇವರಲ್ಲಿ ನಂಬಿಕೆಯಿಟ್ಟೀರೆ, ನಿಮ್ಮ ಜೀವಿತಕ್ಕಾಗಿ ದೇವರ ಸಕಲ ಯೋಚನೆಗಳು ನಿಮ್ಮ ಹಿಂದಿನ ವಿಷಯದಲ್ಲಿ ಕಾರ್ಯಸಾಧಕವಾಗಬಹುದು. ನೀವು ಮಾಡಿದ ಎಲ್ಲಾ ತಪ್ಪುಗಳು ನಿಮ್ಮನ್ನು ಒಬ್ಬ ಒಳ್ಳೆಯ ಮತ್ತು ಬುದ್ದಿಯುಳ್ಳ ವ್ಯಕ್ತಿಯಾಗಿ ಮಾಡಬಹುದು. ನೀವು ಅವುಗಳಿಂದ ಕಲಿತುಕೊಳ್ಳಬಲ್ಲಿರಿ ಮತ್ತು ಅದೇ ತಪ್ಪನ್ನು ನೀವು ತಿರುಗಿ ಎಂದಿಗೂ ಮಾಡದೇ ಇರುವುದಕ್ಕೂ ಕಲಿತುಕೊಳ್ಳಬಲ್ಲಿರಿ. ನಿಮ್ಮ ಹಣದ, ಸ್ನೇಹಿತರ, ಕುಟುಂಬದ, ನಿಮ್ಮ ಹೊರಗಿನ ಅಂದ ಚೆಂದ, ಉದ್ಯೋಗ ಅಥವಾ ನಿರುದ್ಯೋಗ, ಜೀವಿಸುವ ಸ್ಥಳ, ಉಪಯೋಗಿಸುವ ಕಾರು ಇತ್ಯಾದಿ ಇತ್ಯಾದಿ ಇವುಗಳ ವಿಷಯಗಳಲ್ಲಿ ನೀವು ನಕಾರಾತ್ಮಕರಾಗಬೇಡಿರಿ. ಸಕಾರಾತ್ಮಕವಾದ ಗುಣಸ್ವಭಾವವನ್ನು ಸೃಷ್ಟಿಗೊಳಿಸಿ ಮತ್ತು ಅದು ಸ್ಪಷ್ಟವಾದ ಸಕಾರಾತ್ಮಕ ಶಕ್ತಿಯುಳ್ಳ ಜೀವನದಲ್ಲಿ ಜೀವಿಸಲು ನಿಮಗೆ ಸಹಾಯಮಾಡುವುದು.

# ಚಿಂತೆ ಮಾಡಬೇಡಿರಿ ಅಥವಾ ವ್ಯಾಕುಲರಗಿಬೇಡಿರಿ

ಚಿಂತೆಗಳು ಮತ್ತು ವ್ಯಾಕುಲಗಳು ಎರಡು ರೀತಿಯ ಅಕಾರಗಳುಳ್ಳ ಯೋಚನೆಗಳು, ಅವು ಕೆಟ್ಟವುಗಳಾಗಿವೆ. ಚಿಂತೆಮಾಡುವುದು ಯಾವುದೇ ರೀತಿಯಾ ಒಳ್ಳೆಯದನ್ನು ಮಾಡುವುದಿಲ್ಲ. ಆದರೆ ಅತ್ಯಂತ ಹೆಚ್ಚಿನ  ಕೇಡನ್ನುಂಟು ಮಾಡಬಲ್ಲದು. ನಿಮ್ಮ ಎಲ್ಲ ಚಿಂತೆಗಳ ಸ್ಥಾನದಲ್ಲಿ ದೇವರು ನಿಮ್ಮ ಸಮಸ್ಯೆಗಳನ್ನು ನೋಡಿಕೊಳ್ಳುತ್ತಾನೆ ಎಂಬ ನಂಬಕೆಯನ್ನು ಇಡಿರಿ. ನೀವು ಈಗಿರುವುದಕ್ಕಿಂತ ವಯಸ್ಕರಾಗಿ ಕಾಣುವಂತೆ ಚಿಂತೆ ನಿಮ್ಮನ್ನು ಮಡುತ್ತದೆ, ನಿಮಗೆ ತಲೆನೋವು ಮತ್ತು ಹೊಟ್ಟೆಯ ಸಮಸ್ಯೆಗಳನ್ನು (ಅಸೌಖ್ಯತೆಗಳನ್ನು) ಕೊಡುತ್ತದೆ ಮತ್ತು ನೀವು ಇತರರ ಜೊತೆಯಲ್ಲಿ ಮುಂದುವರಿಯುವುದರಲ್ಲಿಯೂ ಕೂಡ ಕಷ್ಟವನ್ನು ತರುತ್ತದೆ ನಿಮ್ಮ ಜೀವಿತಕ್ಕೆ ಅದು ದೇವರ ಚಿತ್ತವಲ್ಲ.

ಪ್ರಾರಂಭದಲ್ಲಿ ಚಿಂತೆಮಾಡದೇ ಇರುವುದು ಕಷ್ಟಕರವಾಗಿರಬಹುದು, ಎಕೆಂದರೆ, ನಿಮ್ಮ ವಿಷಯದಲ್ಲಿಯೇ ನೀವು ಗಮನ ಕೊಡುವುದಕ್ಕೆ ರೂಢಿಮಾಡಿ ಕೊಂಡಿದ್ದೀರಿ, ಮುಂದೆ ಮಾಡಬೇಕಾದ ವಿಷಯದಲ್ಲಿ ಲೆಕ್ಕಾಚಾರಮಾಡುತ್ತಿರ ಬಹುದು, ಆದರೆ ಹೊಸ ಮಾರ್ಗದಲ್ಲಿ ಜೀವಿಸುವುದಕ್ಕೆ ನೀವು ಈಗ ಕಲಿಯುತ್ತಿದ್ದೀರಿ ಎಂದು ನೆನಪು ಮಾಡಿಕೊಳ್ಳಿರಿ.

ದೇವರೊಂದಿಗೆ ಸಂಭಂದವನ್ನು ಇಟ್ಟೂಕೊಳ್ಳದೇ ಇರುವ ಜನರಿಗೆ ಅವರು ಚಿಂತೆಮಾಡಬೇಕೆಂಬ ಅನುಭವವನ್ನು ಹೊಂದಬಹುದು, ಆದರೆ ನೀವು ಹಾಗಿರ ಬೇಡಿರಿ. ದೇವರು ನಿಮ್ಮ ಪರವಾಗಿದ್ದಾನೆ ಮತ್ತು ಅವನು ನಿಮ್ಮ ಚಿಂತಾಭಾರವನ್ನು ಆತನ ಮೇಲೆ ಹಾಕಿರಿ, ಆತನು ನಿಮ್ಮ ಕುರಿತು ಚಿಂತಿಸುತ್ತಾನೆ. ಎಂದು ಹೇಳಿದನು (1 ಪೇತ್ರ 5:7).

ವ್ಯಾಕುಲತೆ ಎಂಬುದು ನಾಳೆಯ ವಿಷಯದಲ್ಲಿ ನೀವು ಈ ಹೊತ್ತು ಚಿಂತೆಮಾಡುತ್ತಾ ಕಳೆಯುವುದು. ಅದನ್ನು ಮಾಡಬೇಡಿ ಎಂದು ಯೇಸು ಹೇಳಿದನು,

ಕಾರಣ ಪ್ರತಿದಿನವು ಅದರದೇಆದ ಸಕಷ್ಟು ಸಮಸ್ಯೆಗಳಿರುತ್ತವೆ (ಮತ್ತಾಯ 6:34). ಅದನ್ನು ಮಾಡಬೇಕಾದ ಸಮಯ ಬಂದಾಗ ನೀವೇನು ಮಾಡಬೇಕೆಂದು ನಿಮಗೆ ಗೊತ್ತಾಗುವುದು, ಆದರೆ ಬಹುಶಃ ಅಲ್ಲಿಯ ತನಕ ನೀವು ತಿಳೀಯದೇ ಇರಬಹುದು ಆತನನ್ನು ನಂಬುವುದನ್ನು ಕಲಿತುಕೊಳ್ಳುವುದಕ್ಕೆ ದೇವರು ನಿಮ್ಮನ್ನು ಆಶಿಸುತ್ತಾನೆ. ಅವನು ತಡವಾಡುವುದೇ ಇಲ್ಲ, ಆದರೆ ಸಾಧಾರಣವಾಗಿ ಅವನು ಅದಕ್ಕೆ ಮುಂಚೆಯೂ ಬರಮಾಡುವುದಿಲ್ಲ. ಒಬ್ಬ ಹೊಸ ವಿಶ್ವಾಸಿಗೆ ಈ ತರಹದ ಅನಿಸುವಿಕೆಯು ಸರಳವಾಗಿ ಕಷ್ಟಕರವಾಗಿರುತ್ತದೆ,  ಏಕೆಂದರೆ ನೀವು ಅದಕ್ಕೆ ಹೊಂದಿಕೊಂಡಿಲ್ಲ. ಹೇಗೆ ಇರಲಿ ಸ್ವಲ್ಪ ಸಮಯದ ನಂತರ ಅದನ್ನು ಪ್ರೀತಿಸಲು ನೀವು ಪ್ರಾರಂಭಿಸುತ್ತೀರಿ. ನಿಮ್ಮ ಮನಸ್ಸು ತೊಂದರೆ ಇಲ್ಲದ ಕಡೆಗೆ ಇರುತ್ತದೆ ಮತ್ತು ಮುಂದಿನ ವಿಚಾರದಲ್ಲಿ ಪ್ರತಿನಿತ್ಯವೂ ಜೀವಿಸುವುದಕ್ಕೆ ಚಿಂತೆಮಾಡದೆ ಸುಖವಾಗಿರುವಿರಿ.

ಪ್ರತಿ ಸಮಯ ಚಿಂತೆ ಮಾಡುವುದಕ್ಕೆ ನೀವು ಪ್ರೇರೇಪಿಸಲ್ಪಡುತ್ತೀರಿ. ನೀವು ದೇವರ ಮಗು ಮತ್ತು ದೇವರು ನಿಮಗೋಸ್ಕರ ಚಿಂತಿಸುತ್ತಾನೆ ಎಂದು ಅವನು ವಾಗ್ದಾನ ಮಾಡಿದ್ದಾನೆ ಎಂಬುದಾಗಿ ಸೈತಾನನಿಗೆ ಸುಮ್ಮನೆ ಎಚ್ಚರಿಸಿ.

ನಿಮ್ಮ ಮನಸ್ಸನ್ನು ಹೊಸತುಮಾಡುವುದಕ್ಕೆ ನಡೆಸುವ ಮಾರ್ಗ, ದೇವರ ವಾಕ್ಯವನ್ನು ಓದುವುದರಿಂದ ಮತ್ತು ಅದರ ಮೇಲೆ ಧ್ಯಾನಮಾಡುವುದರಿಂದ. ಸರಿಯಾದ ಮತ್ತು ತಪ್ಪಾದ ಆಲೋಚನೆಗಳ ಅಂತರವನ್ನು ತಿಳೀದುಕೊಳ್ಳುವುದಕ್ಕೆ ಇದೇ ಆ ಮಾರ್ಗ. ಉದಾಹರಣೆಗಾಗಿ ಒಬ್ಬ ಮನುಷ್ಯನು ತನ್ನ ಜೀವಿತಕಾಲವನ್ನೆಲ್ಲಾ ಬಡತನದಲ್ಲಿರುವುದನ್ನೇ ಯೋಚಿಸುತ್ತಿರಬಹುದು, ಏಕೆಂದರೆ ಅವರ ಕುಟುಂಬದಲ್ಲಿ ಯಾವಗಲೂ ಬಡತನವೇ ಇರಬಹುದು. ಆದರೆ ದೇವರ ವಾಕ್ಯದಲ್ಲಿ ಇದು ಕೇವಲ ಅಸತ್ಯ ಎಂದು ನೀವು ಕಂಡು ಹಿಡಿಯುತ್ತೀರಿ. ದೇವರ ಸಹಾಯದಿಂದ ಮತ್ತು ನಿಮ್ಮ ಹಣಕಾಸಿನ ಜೀವನವನ್ನು ಆತನ ಸಿದ್ಧಾಂತಗಳಿಗೆ ಅನ್ವಯಿಸಿಕೊಳ್ಳುವುದರಿಂದ ಆ ಬಡತನದ ಹಾದಿಯನ್ನು ನಿಮ್ಮ ಜೀವಿತದ ಎಲ್ಲಾ ಸ್ಥಳಗಳಲ್ಲಿಯೂ

ಬೇಕಾದದ್ದಕ್ಕಿಂತ ಹೆಚ್ಚಾಗಿ (ಸಾಕಷ್ಟು) ಹೊಂದಿ ಬಡತನದ ವ್ಯೂಹವನ್ನು ನೀವು ಮುರಿದು ಬೀಳುವಂತೆ ಮಾಡಬಲ್ಲಿರಿ. ನೀವು ಆತ್ಮದ ವಿಷಯದಲ್ಲಿ ಅಭಿವೃದ್ಧಿ ಹೊಂದಿರುವ ಪ್ರಕಾರ ಎಲ್ಲಾ ವಿಷಯುಗಳಲ್ಲಿಯೂ ಅಭಿವೃದ್ಧಿ ಹೊಂದಿ ಸುಕ್ಷೇಮದಿಂದಿರುವಿರಿ ಎಂದು (ಯೋಹಾನ ಪತ್ರಿಕೆ 2ನೇ ವಚನ) ದೇವರ ವಾಕ್ಯ ತಿಳಿಸುತ್ತದೆ. ನೀವು ನಿಮ್ಮ ಆತ್ಮದಲ್ಲಿ ಪರಿಪಕ್ವತೆ ಹೊಂದಿ ದೇವರಿಗೆ ವಿಧೇಯರಾಗಿ ನಡೆದುಕೊಳ್ಳುವಲ್ಲಿ, ನೀವು ಸರಿಯಾದ ರೀತಿಯಲ್ಲಿ ನಿರ್ವಹಿಸುವ ಮತ್ತು ಬುದ್ದಿವಂತಿಕೆಯಿಂದ ಉಪಯೋಗಿಸಿಕೊಳ್ಳುವ ಸಕಲ ವರದಾನಗಳನ್ನು ನಿಮಗೆ ಆತನು ಕೊಡುತ್ತಾನೆ.

ದೇವರು ನಿಮ್ಮ ಅವಶ್ಯಕತೆಗಳನ್ನು ಪೂರೈಸುವನು ಮತ್ತು ಭಯಭೀತಿಯ ಜೀವಿತದಲ್ಲಿ ಕಳೆಯಬೇಕಾಗಿಲ್ಲ. ನಿಮಗೆ ಉದ್ಯೋಗದ ಅವಶ್ಯಕತೆ ಇರುವುದಾದರೆ, ನೀವು ಪ್ರಾರ್ಥನೆ ಮಾಡಬಹುದು ಮತ್ತು ಒಂದೂ ಉದ್ಯೋಗ ಸಿಗುವ ಹಾಗೆ ಅವನು ಸಹಾಯ ಮಾಡುತ್ತಾನೆ. ನೀವು ಕೈಹಾಕುವ ಪ್ರತಿಯೊಂದು ವಿಷಯದಲ್ಲಿ (ಕೆಲಸಗಳಲ್ಲಿ) ಉದ್ಧಾರವಾಗುವಂತೆ ಮತ್ತು ಜಯಗಳಿಸವಂತೆ ಮಾಡುವನು.

ನೀವು ಒಳ್ಳೆಯ ಜೀವಿತವನ್ನು ಜೀವಿಸಬೇಕೆಂದು ಯೇಸು ಇಷ್ಟಪಡುತ್ತಾನೆ. ನೀವು ಜೀವನದಲ್ಲಿ ಸಂತೋಷಪಡಬೇಕೆಂದು ಆಶಿಸಿ, ಅದನ್ನು ಕೊಡುವುದಕ್ಕಾಗಿಯೆ ಆತನು ಸತ್ತನು. ಜ್ಞಾನವನ್ನು ಸಂಪಾದಿಸಿಕೊಳ್ಳಿರಿ, ತಿಳಿವಳಿಕೆಯನ್ನು ಪಡೆದುಕೊಳ್ಳಿರಿ, ಅರ್ಹತೆಯನ್ನು ಹೊಂದಿಕೊಳ್ಳಿರಿ, ವಿವೇಕವನ್ನು ಪಡೆದುಕೊಳ್ಳಿರಿ. ಜ್ಞಾನವಿಲ್ಲದೆ ಜನರು ನಾಶವಾಗುತ್ತಾರೆ, ಆದುದರಿಂದ ಅದಕ್ಕಾಗಿ ಗೋಳಾಡಿರಿ. ಯೇಸುಕ್ರಿಸ್ತನೇ ದೇವರಿಂದ ಬಂದ ನಮ್ಮ ಜ್ಞಾನವೂ, ನೀತಿಯೂ, ಶುದ್ಧೀಕರಣವೂ ಮತ್ತು ವಿಮೋಚನೆಯೂ ಆಗಿದ್ದಾನೆ (1 ಕೋರಿಂಥ 1:30) ನಿಮ್ಮಲ್ಲಿರುವ ಜ್ಞಾನವೂ ಅಭಿವೃದ್ಧಿಯಾಗುವಂತೆ ಮಾಡಲು ಮತ್ತು ನೀವು ಆತನ ಮಾರ್ಗದಲ್ಲಿ ನಡೆಯುವ ಹಾಗೆ ನಿಮ್ಮ ಮನಸ್ಸನ್ನು ಪ್ರಕಾಶಗೊಳಿಸುವಂತೆ ದೇವರನ್ನು ಬೇಡಿಕೊಳ್ಳಿರಿ. ಏಕೆಂದರೆ ಜ್ಞಾನವು ಹವಳಕ್ಕಿಂತಲೂ ಶ್ರೇಷ್ಠ ಇಷ್ಟವಸ್ತುಗಳೆಲ್ಲವೂ ಅದಕ್ಕೆ ಸಮವಲ್ಲ (ಜ್ಞಾನೋಕ್ತಿಗಳು 8:11).

ಹೆಚ್ಚಾಗಿ ಮಾರಾಟವಾಗುವ ಮನಸ್ಸಿನ ಯುದ್ಧರಂಗ (ಮನಸ್ಸಿನ ಹೋರಾಟ) ಅದು ನನ್ನ ಪುಸ್ತಕವಾಗಿದೆ. ಅದನ್ನು ಆದಷ್ಟುಬೇಗ ನೀವು ಓದಬೇಕೆಂದು ನಿಮಗೆ ಶಿಫಾರಸ್ಸು ಮಾಡಲು ನಾನು ಇಷ್ಟಪಡುತ್ತೇನೆ. ನೆನಪಿಟ್ಟುಕೊಳ್ಳಿರಿ ನಿಮ್ಮ ಯೋಚನೆಗಳನ್ನು ಹೊಸತರದ್ದಾಗಿ ಮಾಡಲು ನೀವು ಯೋಚಿಸುವಾಗ, ಒಂದು ವೇಳೆ ಸ್ವಲ್ಪ ಸಮ ಹೋರಾಟವಾಗಿ ಕಾಣಬಹುದು. ಆದರೆ ಬಿಟ್ಟುಬಿಡಬೇಡಿರಿ. ದೇವರನ್ನು ಯಾರು ಸತತವಾಗಿ ಹುಡುಕುತ್ತಾರೋ ಅವರಿಗೆ ಬಹುಮಾನ ದೊರಕುತ್ತದೆ.

# ಅಧ್ಯಾಯ–6

# ಮಾತಾಡುವ ಒಂದು ನೂತನ ಮಾರ್ಗ

ಮಾತುಗಳು ಬಲದಿಂದ ಕೂಡಿದ ಪೆಟ್ಟಿಗೆಯಂತಿದೆ. ಸೃಷ್ಟಿಮಾಡುವ ಇಲ್ಲವೇ ನಾಶಮಾಡುವ ಶಕ್ತಿಯನ್ನು ಅವುಗಳೂ ಸಾಗಿಸುತ್ತವೆ. ಪ್ರಾರಂಭದ ಸಮಯದಲ್ಲಿ ದೇವರು ಮಾತನಾಡಿದಾಗ ಆತನು, ಒಳ್ಳೆಯದನ್ನೇ ಸೃಷ್ಟಿಸಿದನು, ನಾವು ಆತನ ಮಾದರಿಯನ್ನೇ ಹಿಂಬಾಲಿಸುವವರಾಗಿರಬೇಕು.

> ಮನುಷ್ಯನು ತನ್ನ ಬಾಯಾ ಬೆಳೆಯನ್ನು ಹೊಟ್ಟೆ ತುಂಬಾ ಉಣ್ಣುವನು; ತನ್ನ ತುಟಿಗಳ ಫಲವನ್ನು ಸಾಕಾದಷ್ಟು ತಿನ್ನುವನು.
>
> ಜೀವನ ಮರಣಗಳು ನಾಲಿಗೆಯ ವಶ, ವಚನಪ್ರೀಯರು ಅದರ ಫಲವನ್ನು ಅನುಭವಿಸುವರು. —ಜ್ಞಾನೋಕ್ತಿಗಳು 18:20–21

ಈ ವಾಕ್ಯಗಳು ಗಮನಕೊಟ್ಟು ಅಭ್ಯಸಿಸುವುದಾದರೆ, ನಮ್ಮಮಾತುಗುಳು ಪರಿಣಾಕಾರಿಯಾಗಿದೆ ಎಂದು ತಿಳಿಸುತ್ತದೆ. ಕೆಲವು ಒಳ್ಳೆಯದನ್ನು ತರುತ್ತದೆ, ಇನ್ನು ಕೆಲವು ಕೆಟ್ಟದನ್ನು ತರುತ್ತದೆ. ಮಾತಾಡುವುದಕ್ಕೆ ನಮ್ಮ ಬಾಯನ್ನು ನಾವು ತೆರೆಯುವಾಗ, ನಮ್ಮ ಮಾತುಗಳ ಶಕ್ತಿಯನ್ನು ನಾವು ಗ್ರಹಿಸುವುದು ಅತ್ಯಂತ ಅವಶ್ಯಕವಾದದ್ದು, ನಮ್ಮ ಆಲೋಚನೆಗಳು ನಮ್ಮ ಮಾತುಗಳಾಗಿ ಹೊರಬರುತ್ತದೆ, ಸೈತಾನನು ನಮ್ಮ ಮನಸ್ಸಿನೊಳಗೆ ಇಡುವ ನಕರಾತ್ಮಕ ಯೋಚನೆಗಳು ಅದು ಮುಖ್ಯವಾದ ಕಾರಣಗಳಲ್ಲಿ ಒಂದಾಗಿರುತ್ತದೆ. ಅವುಗಳನ್ನು ನಾವು ನಮ್ಮ ಸ್ವಂತ

ಅಲೋಚನೆಯಂತೆ ತೆಗೆದುಕೊಂಡರೆ, ಕೊನೆಗೆ ನಾವು ಅವುಗಳನ್ನೇ ಮಾತನಾಡತ್ತೇವೆ ಮತ್ತು ಅದು ನಮ್ಮ ಜೀವಿತದಲ್ಲಿ ಅವನ ಹೊಲಸಾದ ಕೆಲಸವನ್ನು ಮಾಡಲು ಅವನಿಗೆ ಒಂದು ತೆರೆದಬಾಗಿಲನ್ನು ಮಾಡಿಕೊಡುತ್ತದೆ.

> ತನ್ನ ಬಾಯನ್ನು ನಾಲಿಗೆಯನ್ನು ಕಾಯುವವನು ತೊಂದರೆಗಳಿಂದ ರಕ್ಷಿಸಿಕೊಳ್ಳುವನು. —ಜ್ಞಾನೋಕ್ತಿಗಳು 21:23

ನಾವು ಯಾವುದನ್ನು ನೋಡುತ್ತೇವೋ ಮತ್ತು ಅನ್ವಯಿಸಿಕೊಳ್ಳುತ್ತೇವೋ ಅದರ ಕುರಿತಾಗಿ ಮಾತಾಡುವುದು ಲೋಕದಲ್ಲಿ ಅತ್ಯಂತ ದೊಡ್ಡ ಶೋಧನೆಯಾಗಿದೆ, ನಾವು ಯಾವುದನ್ನು ಹೊಂದಿಕೊಳ್ಳಬಹುದು ಎಂದು ದೇವರ ವಕ್ಯಗಲು ಹೇಳುತ್ತದೊ ಅದರ ಕುರಿತು ಮಾತನಡುದುದಕ್ಕೆ ದೇವರು ಆಶಿಸುತ್ತಾನೆ. ನಿಮ್ಮ ಸಂಧರ್ಭಗಳನ್ನು ನೀವು ನಿರ್ಲಕ್ಷಿಸಬೇಕೆಂದು ನಾನು ಪ್ರಸ್ತಾಪಿಸುತ್ತಿಲ್ಲ, ಆದರೆ ಅವುಗಳ ಮೇಲೆ ಗೆಲುವು ಸಾಧಿಸಬೇಕು ಮತ್ತು ಅದರಲ್ಲಿ ಮಾಡುವುದಕ್ಕೆ ಬೇಕಾದಷ್ಟು ನಿಮ್ಮ ಸಮಸ್ಯೆಯು ಎದುರಾಗುವ ಸಮಯದಲ್ಲಿ ನೀವು ಹೇಗೆ ಮಾತನಾಡಬೇಕೆಂದು ನಾನು ನಿಮಗೆ ಹೇಳುತ್ತಿದ್ದೇನೆ.

ಇಸ್ರಾಯೇಲರು ಅಡವಿಯಲ್ಲಿ ಹನ್ನೊಂದು ದಿನಗಳ ಪ್ರಯಾಣವನ್ನು ಮಾಡಲು ಪ್ರಯತ್ನಿಸಿ ನಲವತ್ತು ವರುಷಗಳನ್ನು ಅರಣ್ಯದಲ್ಲ ಕಳೆದರು. ಅವರು ಅದೇ ಬೆಟ್ಟಗಳನ್ನು ಸುತ್ತಿ ಸುತ್ತಿ ಬರುವದನ್ನೇ ನಡೆಸಿಕೊಂಡು ಹೋಗುತ್ತಿದ್ದರು, ಆದರೆ ಯಾವ ಪ್ರಗತಿಯನ್ನು ತೋರಿಸಿದೆ ಹೋದರು. ಅವರಲ್ಲಿ ಬೇಕಾದಷ್ಟು ಸಮಸ್ಯೆಗಳಿದ್ದವು ಅದರಲ್ಲಿ ದೂರು ಹೇಳುವುದೇ ಒಂದು ಮುಖ್ಯವಾದ ಸಮಸ್ಯೆಯಾಗಿತ್ತು. ಪ್ರತಿ ಸಮಯದಲ್ಲಿಯೂ ಅವರ ಮಧ್ಯದಲ್ಲಿ ಸಮಸ್ಯೆಗಳು ಪರಿಹಾರವಾಗದೇ ಇರುವಲ್ಲಿ ಅವರು ಗೊಣಗುಟ್ಟುತ್ತಿದ್ದರು ಮತ್ತು ದೂರು ಹೇಳುತ್ತಾ ಇದ್ದರು. ನಾವು ಅಡವಿಯ ಜೀವಿತದಲ್ಲಿದ್ದರೂ ಅದರಂತೆಯೇ ಬೆಟ್ಟಗಳ ಮೇಲೆ ಇದ್ದರೂ (ಕಷ್ಟದಲ್ಲಿ ಅಥವಾ ಸುಖದಲ್ಲಿ) ನಾವು ಆತನಿಗೆ ಸ್ತೋತ್ರ ಮತ್ತು ವಂದನೆಗಳನ್ನು ಸಲ್ಲಿಸಬೇಕೆಂದು

ನಮಲ್ಲಿ ದೇವರು ಆಶಿಸುತ್ತಾನೆ. ಕಷ್ಟದ ಸಮಯದಲ್ಲಿ ನಾವು ಏನು ಹೆಳುತೆವ್ಪೊ, ಅದು ನಾವು ಎಲ್ಲಿಯವರೆಗೆ ಸಿಲುಕಿಕೊಂಡಿರುತ್ತೆವೆ ಎಂದು ನಿರ್ದರಿಸುತ್ತದೆ.

ಇದು ನಿಮಗೆ ಆಶ್ಚರ್ಯಕರವಾಗಿ ಕಂಡುಬರಹುದು. ಆದರೆ ನಿಮ್ಮ ಮಾತುಗಳು ಬಲಹೊಂದಿ ಮಾತಾಡುತ್ತದೆ. ರೋಮಪುರದವರಿಗೆ ಬರೆದ ಪತ್ರಿಕೆ 4ನೇಯ ಅಧ್ಯಾಯ 17ನೇಯ ವಚನದಲ್ಲಿ ಇಲ್ಲದ್ದನ್ನು ಇರುವುದಾಗಿ ಕರೆಯುುವ ದೇವರನ್ನು ನಾವು ಸೇವಿಸುತ್ತೇವೆ. ಏನು ಆಗಬೇಕೊ ಅದನ್ನು ಆಗುವಂತೆ ದೇವರು ನೋಡಲು ಇಷ್ಟಪಡುತ್ತಾನೆ ಮತ್ತು ಅದು ಈಗಾಗಲೇ ಆಗಿಹೋಗಿದೆಯೆಂದು ಆತನು ಕಾಣುತ್ತಾನೆ. ಇದನ್ನು ಮಾಡುವಂತೆ ನೀವು ನಂಬಿಕೆಯ ಕಣ್ಣುಗಳಿಂದ ನೋಡತಕ್ಕದ್ದು. ನಂಬಿಕೆಯು, ನೈಸರ್ಗಿಕವಾಗಿ ನೋಡಲಾಗದವುಗಳನ್ನು ಮತ್ತು ಅನುಭವಿಸಲಾಗದವುಗಳನ್ನು ವಾಸವಿಕವೆಂದು ತಿಳಿದುಕೊಳ್ಳುವುದೆ. ನಂಬಿಕೆಯು ದೇವರ ವಾಗ್ದಾನಗಳನ್ನು ಕೈಗೆತ್ತಿಕೊಳ್ಳುತ್ತದೆ ಮತ್ತು ಅವುಗಳು ಸತ್ಯವಾದವುಗಳು ಎಂಬುವಂತೆ ಕ್ರಿಯೆಮಾಡುತ್ತದೆ!

ನಮಗೆ ಒಂದು ಸಮಸ್ಯೆ ಇರುವಲ್ಲಿ ನಾವು ನಿಜವಾಗಿ ದೇವರಲ್ಲಿ ನಂಬಿಕೆ ಇಡುವುದಾದರೆ, ದೇವರು ಅವುಗಳಿಂದ ಬಿಡುಗಡೆ ಮಾಡುತ್ತಾನೆ, ಆದರಿಂದ ನವು ಸಂತೋಷಿಸವಹುದು. ಒಂದು ಬದಲವಣೆ ಕಾಣುವವರೆಗೆ ನಾವುಕಾಯ ಬೇಕಾಗಿಲ್ಲ ಏಕೆಂದರೆ ನಂಬಿಕೆಯಿಂದಲೇ ಅದನ್ನು ನಾವು ಹೊಂದಿದ್ದೇವೆ. ದೇವರು ನಮ್ಮ ನಂಬಿಕೆಯ ಮೇಲೆ ಕಾರ್ಯ ಮಾಡುತ್ತಿದ್ದಾನೆ ಎಂದು ನಮ್ಮ ಹೃದಯದ ಅಂತರಾಳದಲ್ಲಿ ನಾವು ತಿಳಿದಿದ್ದೇವೆ.

ಪ್ರವಾದಿಯಾದ ಹೆಜ್ಕೇಲನು ಸುತ್ತಲೂ ನೋಡಿದಾಗ ಕಂಡಂತಹ ಎಲ್ಲರೂ ಸತ್ತು ಬಿದ್ದಿದ್ದರು, ಒಣಗಿದ ಮೂಳೆಗಳು ಇದ್ದವು. ದೇವರು ಅವನನ್ನು “ಈ ಎಲುಬುಗಳಿಗೆ ಜೀವವು ಬರಬಹುದೊ” ಎಂದು ಕೇಳಿದನು. ಹೆಜ್ಕೇಲನು “ಕರ್ತನಾದ ಯೆಹೋವನೇ ನೀನೇ ಬಲ್ಲೆ,” ಎಂದು ಉತ್ತರ ಕೊಟ್ಟನು. ಅದಕ್ಕೆ ಪ್ರತ್ಯುತ್ತಾರವಾಗಿ ದೇವರು “ಈ ಎಲುಬುಗಳಿಗೆ ಹೇಳು, ಕರ್ತನ ವಾಕ್ಯವನ್ನು ಕೇಳಿರಿ ಎಂದು ಪ್ರವಾದನೆ

ಮಾಡು" (ಮಾತನಾಡು) ಎಂದು ಹೇಳಿದನು. ಅವನಿಗೆ ಮಾಡುವುದಕ್ಕೆ ಆಜ್ಞೆ ಕೊಟ್ಟಂತೆ ಯೆಹೆಜ್ಕೇಲ ಪ್ರವಾದನೆ ಮಾಡಲು ಪ್ರಾರಂಭಿಸಿದ, ಮೂಳೆಗಳು ಒಂದಕ್ಕೊಂದು ಜೋಡಣೆಯಾಗುತ್ತಾ ಬಂದವು. ನರಗಳು ಮತ್ತು ಮಾಂಸವು ಅವುಗಳ ಮೇಲೆ ಹರಡಿಕೊಂಡವು. ಬಲಿಷ್ಠವಾದ ಸೈನ್ಯದಂತೆ ತಮ್ಮ ಕಾಲುಗಳ ಮೇಲೆ ಎದ್ದು ನಿಂತವು (ಯೆಹೆಜ್ಕೇಲ, 37ನೇಯ ಅಧ್ಯಾಯ), ದೇವರ ವಾಕ್ಯಕ್ಕೆ ಇರುವ ಶಕ್ತಿಯ ಬಗ್ಗೆ ಎಂಥಹ ದೊಡ್ಡ ಉದಾಹರಣೆ!

## ದೇವರ ವಾಕ್ಯವನ್ನು ಬಹಿರಂಗವಾಗಿ ಜೋರಾಗಿ ಮಾತನಾಡುವುದು

ಜನರು ಗಟ್ಟಿಯಾದ ಸ್ವರದಿಂದ ದೇವರ ವಾಕ್ಯವನ್ನು ಎಲ್ಲೆಲ್ಲಿಯೂ ಮಾತನಾಡಬೇಕೆಂದು ಮತ್ತು ಅದನ್ನು ತಮ್ಮ ಆತ್ಮೀಕ ಶಿಸ್ತಿಗಾಗಿ ಇದನ್ನು ಪ್ರತಿದಿನವು ಉದ್ದೇಶಪೂರ್ವಕವಾದ ಭಾಗವಾಗಿ ಮಾಡಬೇಕೆಂದು ನಾನು ಜನರಿಗೆ ಕಲಿಸುತ್ತೇನೆ. ಇದನ್ನು ದೇವರು ನನಗೆ ಕಲಿಸಿದ ಒಂದು ಅತ್ಯಂತ ಪ್ರಾಮುಖ್ಯವಾದ ಸಂಗತಿ ಮತ್ತು ಇದು ನನ್ನ ಮನಸ್ಸನ್ನು ನೂತನವಾಗಿ ಮಾಡಿದೆ ಮತ್ತು ನನ್ನ ಜೀವಿತವನ್ನು ಸುತ್ತುವರಿದು ತಿರುಗುವಂತೆ ಮಾಡಿದೆ ಎಂದು ನಾನು ಹೇಳಬಲ್ಲೆನು.

ದೇವರವಾಕ್ಯ ಆತ್ಮದ ಖಡ್ಗವಾಗಿದೆ. ಸೈತಾನನಿಗೆ ವಿರುದ್ಧವಾಗಿ ನೀವು ಉಪಯೋಗಿಸವ ಅತ್ಯಂತ ಬಲವಾದ ಶಸ್ತ್ರವಾಗಿದೆ. ದೇವರ ವಾಕ್ಯಕ್ಕೆ ಅವನು ಭಯಪಡುವವನು ಮತ್ತು ನಡುಗುವವನು ಆಗಿದ್ದಾನೆ. ಲೂಕನ ಸುವಾರ್ತೆ 4ನೇಯ ಅಧ್ಯಾಯದಲ್ಲಿ, ಯೇಸು ಸೈತಾನನಿಂದ ಶೋಧಿಸಲ್ಪಟ್ಟ ಸಮಯವನ್ನು ನಾವು ನೋಡುತ್ತೇವೆ. ಅವನು ಅಡವಿಯಲ್ಲಿದ್ದನು, ಅವನು ಬಹಳ ದಿನಗಳವರೆಗೆ ಊಟವನ್ನೇ ಮಾಡಿರಲಿಲ್ಲ, ಆಗ ಸೈತಾನನು ಅವನ ಮನಸ್ಸಿನಲ್ಲಿ ಆಲೋಚನೆಗಳನ್ನು ಇಡುವುದಕ್ಕೆ ಪ್ರಾರಂಭಿಸಿದನು. ಪ್ರತಿಸಮಯದಲ್ಲಿ ಯೇಸುವಿಗೆ ಸೈತಾನನು ಸುಳ್ಳು ಹೇಳತೊಡಗಿದನು. ಪ್ರತ್ಯುತ್ತರವಾಗಿ ಯೇಸು, "ಅದು ಬರೆಯಲ್ಪಟ್ಟಿದೆ," ಎಂದು

ಹೇಳಿದನು, ನಂತರ ದೇವರ ವಾಕ್ಯವನ್ನು ಗಟ್ಟಿಯಾದ ಶಬ್ಧದಿಂದ ಉಲ್ಲೇಖಿಸಿ ಸುಳ್ಳನ್ನು ಖಂಡಿಸಿದನು. ಆತನ ಉದಾಹರಣೆಗಳನ್ನು ಅನುಕರಿಸುವುದಕ್ಕೆ ನಾವು ಕಲಿತುಕೊಳ್ಳುವಾಗ, ಜಯವನ್ನು ಹೊಂದುವುದಕ್ಕೆ ನಮ್ಮ ಮಾರ್ಗದಲ್ಲಿ ಒಳ್ಳೆಯ ಸ್ಥಿತಿಯಲ್ಲಿದ್ದೇವೆ.

ನೀವು ಏನು ಹೇಳುತ್ತೀರೊ ಅದಕ್ಕೆ ನಿಮ್ಮ ಗಮನವನ್ನು ಕೊಡಲು ಪ್ರಾರಂಭಿಸುವುದಕ್ಕೆ ನೀವು ಇಷ್ಟಪಡುತ್ತೀರೊ? ಹಾಗಿದ್ದರೆ, ನಮ್ಮ ಹಾಗೆ, ನಿಮ್ಮ ಉಳಿದಿರುವ ಜೀವತದಲ್ಲಿ ಬಹಳಷ್ಟು ಸಂಗತಿಗಳು ಖಂಡಿತವಾಗಿ ಆಗಲಾರದೆಂದು ನೆನೆಸುವ ಅನೇಕ ಸಂಗತಿಗಳನ್ನು ಕುರಿತು ಹೇಳುವಿರಿ. ಹಾಗೆಯೇ ಕಂಡುಕೊಳ್ಳುವಿರಿ. ಪ್ರಾಮಾಣಿಕವಾಗಿ ನಾವು ಸಂಭಾಷಿಸುವ ರೀತಿಯಿಂದ ಸಮಾಧಾನದ ಸಂತೋಷದ ನಮ್ಮ ಘನತೆಯನ್ನು ನಾವು ಹೆಚ್ಚಿಸಿಕೊಳ್ಳಬಲ್ಲೆವು ಅಥವಾ ತಗ್ಗಿಸಿಕೊಳ್ಳಬಲ್ಲೆವು ಎಂಬುದನ್ನು ನಾನು ನಂಬುತ್ತೇನೆ. ನಾನು ಒಂದು ವೇಳೆ ಸರಿಯಾಗಿದ್ದ ಪಕ್ಷದಲ್ಲಿ ನಿಮ್ಮನ್ನು ದುಃಖ ಪಡಿಸುವ ಬದಲಾಗಿ ಸಂತೋಷಪಡಿಸುವ ವಿಷಯದಲ್ಲಿ ಏಕೆ ಏನಾದರು ಒಂದನ್ನು ಹೇಳಬಾರದು?

ನಂಬಿಕೆಯಿಂದ ಮಾತನಾಡುವುದು ನಿಮ್ಮ ಜೀವಿತದ ಭಾಗವಾಗಿದೆ, ಆದುದರಿಂದ ಈಗಾಗಲೇ ಸಿದ್ದರಾಗಿರಿ, ನೀವು ಈ ರೀತಿಯಾಗಿ ವಿಷಯಗಳನ್ನು ಹೇಳಬಲ್ಲಿರಿ:

ದೇವರು ನನ್ನನ್ನು ಪ್ರೀತಿಸುತ್ತಾನೆ ಮತ್ತು ನನ್ನ ಜೀವಿತಕ್ಕಾಗಿ ಒಳ್ಳೆಯ ಯೋಜನೆಗಳಿವೆ.

ನಾನು ಹೋಗುವಲೆಲ್ಲಾ ನಾನು ದಯೆಗೆ ಪ್ರಾತ್ರಳಾಗಿದ್ದೇನೆ.

ಪ್ರತಿಯೊಂದಕ್ಕೂ ನಾನು ನನ್ನ ಕೈ ಚಾಚುವಾಗ ಅಭಿವೃದ್ಧಿ ಹೊಂದುತ್ತದೆ ಮತ್ತು ಸಿದ್ಧಿಹೊಂದುತ್ತದೆ.

ದೇವರು ನನಗೋಸ್ಕರ ಒಳ್ಳೆಯ ಬಾಗಿಲುಗಳನ್ನು ತೆರೆಯುತ್ತಾ ಕೆಟ್ಟದ್ದಾದನ್ನು ಮುಚ್ಚುತ್ತಾನೆ.

ನಾನು ಜ್ಞಾನದಲ್ಲಿ ನಡೆಯುತ್ತೇನೆ.
ನಾನು ಸಮಾಧಾನದಿಂದ ತುಂಬಿದವಳಾಗಿದ್ದೇನೆ.
ನಾನು ಸಂತೋಷವುಳ್ಳವಳಾಗಿದ್ದೇನೆ.
ನಾನು ಪ್ರೀತಿಯಲ್ಲಿ ನಡೆಯುತ್ತೇನೆ.
ಈ ದಿನ ನನಗೆ ಏನೋ ಒಂದು ಒಳ್ಳೆಯದು ಸಂಭವಿಸುವುದಾಗಿದೆ.
ನನ್ನ ಎಲ್ಲಾ ಮಕ್ಕಳು ದೇವರನ್ನು ಪ್ರೀತಿಸುತ್ತಾರೆ ಮತ್ತು ಸೇವಿಸುತ್ತಾರೆ.
ನನ್ನ ವಿವಾಹದ ಜೀವನ ಪ್ರತಿನಿತ್ಯವೂ ಒಳ್ಳೊಳ್ಳೆಯದನ್ನೇ ಪಡೆದುಕೊಳ್ಳುತ್ತದೆ.
ನಾನು ಹೋಗುವಾಗಲೆಲ್ಲಾ ನಾನು ಆಶೀರ್ವಾದಕರವಾಗಿದ್ದೇನೆ.

ಈ ಪಟ್ಟಿಯು ಸಂಪೂರ್ಣವಾಗಿ ಅಂತ್ಯವಿಲ್ಲದ್ದಾಗಿರಬಲ್ಲದು. ನೀವು ಹೇಳುತ್ತಿರುವುದನ್ನೇ ದೇವರ ವಾಕ್ಯ ಹೇಳುತ್ತದೆ ಎಂದು ಪ್ರಾಮಾಣಿಕವಾಗಿ ಖಚಿತಪಡಿಸಿಕೊಳ್ಳಿರಿ. ದೇವರರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳುವುದರಿಂದ ನಿಮಗೆ ಒಂದು ಸಂಪೂರ್ಣವಾದ ನೂತನ ಪ್ರಪಂಚ ತೆರೆಯಲ್ಪಡುತ್ತದೆ. ಅದು ದೇವರ ಯೋಜನೆಗಳನ್ನು ಕ್ರಿಯೆಯಲ್ಲಿ ಮಂಡಿಸುತ್ತದೆ, ಅದನ್ನು ನಿಲ್ಲಿಸುವುದಕ್ಕೆ ಸೈತಾನನಿಗೆ ಮಾಡಲು ಏನೂ ಅಲ್ಲಿ ಇರುವುದಿಲ್ಲ.

# ಅಧ್ಯಾಯ–7

# ನಿಮ್ಮನ್ನು ನೀವೇ ವಿವೇಚಿಸಿಕೊಳ್ಳುವ ಒಂದು ನೂತನ ಮಾರ್ಗ

ನಿಮ್ಮನ್ನು ನೀವು ಯಾವ ರೀತಿಯಲ್ಲಿ ಗಮನಿಸಿಕೊಳ್ಳುತ್ತಿದ್ದೀರಿ? ನಿಮ್ಮ ಸ್ವಯಂ ಆಕಾರ (ರೂಪ) ನಿಮ್ಮ ಹೃದಯದ ಜೋಳಿಗೆಯಲ್ಲಿ ನೀವು ಹೊತ್ತುಕೊಂಡು ಹೋಗುವ ಭಾವಚಿತ್ರದ ರೀತಿಯಲ್ಲಿದೆ. ನಾನು ಅನೀಕ ವರ್ಷಗಳಿಂದ ಜನರಿಗೆ ಮಾಡಿದ ಕರ್ತನ ಸೇವೆಯಲ್ಲಿ, ಅವರಲ್ಲಿ ಹೆಚ್ಚಾಗಿ ತಮ್ಮನ್ನೇ ತಾವು ಬಹಳವಾಗಿ ಇಷ್ಟಪಡದೇ ಇರುವುದನ್ನು ನಾನು ಕಂಡುಹಿಡಿದಿದ್ದೇನೆ. ಅನೇಕ ವರ್ಷಗಳವರೆಗೆ ನನಗೆ ನನ್ನಲ್ಲಿಯೇ ಬಹಳ ಕೆಟ್ಟ ಸಂಭದವವಿತ್ತು. ಅದು ನನ್ನ ಜೀವಿತದಲ್ಲಿ ಪ್ರತಿನಿತ್ಯವು ನನ್ನನ್ನು ಕೆಡಿಸುತ್ತಿತ್ತು (ವಿಷ ಬೀಜವನ್ನು ಬಿತ್ತುತ್ತಿತ್ತು). ದೇವರು ನಿಮ್ಮನ್ನು ಪ್ರೀತಿಸುತ್ತಾನೆ. ಮತ್ತು ನಿಮ್ಮನ್ನು ನೀವೇ ಪ್ರೀತಿಸಿಕೊಳ್ಳ ಬೇಕೆಂದು ಅವನು ಇಷ್ಟಪದುತ್ತಾನೆ. ಸ್ವಂತ ಅಭಿಮಾನದಲ್ಲಿ ಇಲ್ಲವೇ ಸ್ವಂತ ದೃಷ್ಟಿಯ ಮಾರ್ಗದಲ್ಲಿ ಅಲ್ಲ, ಆದರೆ ಹಿತಕರವಾದ ಮಾರ್ಗದಲ್ಲಿ ನಿಮ್ಮಲ್ಲಿ ಇರದೇ ಇರುವುದನ್ನು ನೀವು ಕೊಡಲಿಕ್ಕೆ ಆಗುವುದೇ ಇಲ್ಲ. ದೇವರು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ಮೊದಲು ನಮ್ಮನ್ನು ಉಪಶಮನ ಮಾಡಿದ ಪ್ರೀತಿಯನ್ನು ಬಿಟ್ಟುಕೊಡುವುದಕ್ಕೆ, ನಂತರ ನಮ್ಮ ಮೂಲಕ ಇತರರಿಗೆ ಪ್ರವಹಿಸುವುದಕ್ಕೆ ಆಶಿಸುತ್ತಾನೆ. ಯೋಗ್ಯ ರೀತಿಯಲ್ಲಿ ನಿಮ್ಮನ್ನು ನೀವೇ ಪ್ರೀತಿಸಿಕೊಳ್ಳುವುದರಿಂದ ದೇವರು ನಿಮಗೋಸ್ಕರ ಇಟ್ಟಿರುವ ಆ ಪ್ರೀತಿಯನ್ನು ಅಂಗೀಕರಿಸಿಕೊಳ್ಳುವುದಕ್ಕೆ ನೀವು ನಿರಾಕರಿಸಿದರೆ, ಆಗ ನಿಜವಾಗಿ ಇತರರನ್ನು ನೀವು ಎಂದಿಗೂ ಪ್ರೀತಿಸಲಾರಿರಿ.

ನಿಮ್ಮ ವಿಷಯದಲ್ಲಿ ನಿಮ್ಮ ಅಭಿಪ್ರಾಯವು ನೀವು ಮಾಡುವ ಕಾರ್ಯದ ಮೇಲೆ ಅವಲಂಬಿಸಿದೆಯೊ? ನಮ್ಮಲ್ಲಿ ಹೆಚ್ಚಾಗಿ ಆ ಸ್ಥಿತಿಯಾಗಿದೆ, ನಮ್ಮ ಅಭಿಪ್ರಾಯವು ಒಳ್ಳೆಯದಾಗಿರುವುದಿಲ್ಲ. ಏಕೆಂದರೆ ನಮ್ಮ ಕಾರ್ಯನಿರ್ವಹಣೆ ಒಳ್ಳೆಯ ಸಾಮರ್ಥ್ಯದಿಂದ ಕೂಡಿಲ್ಲ. ನಾವು ಅಪೂರ್ಣರಾದ ಮಾನವರು, ನಾವು ತಪ್ಪುಗಳನ್ನು ಮಾಡುತ್ತೇವೆ. ನಾವು ಒಳ್ಳೆಯದನ್ನೇ ಮಾಡುವುದಕ್ಕೆ ಇಷ್ಟಪಡುತ್ತೇವೆ ಆದರೆ ನಾವು ಯಾವಾಗಲೂ ಅವ್ಯವಸ್ಥೆಯ ಸ್ಥಿತಿಗೆ ಕಾಣಬರುತ್ತೇವೆ. ಅದಕ್ಕೆ ನಿಜವಾಗಿ ಹಾಗೆಯೇ ಯೇಸು ನಮಗೆ ಅವಶ್ಯವಾಗಿದ್ದಾನೆ. ಆತನು ತನ್ನ ಶಕ್ತಿಯನ್ನು ನಮ್ಮ ಬಲಹೀನತೆಯಲ್ಲಿ ಸಂಪೂರ್ಣವಾಗಿ ತೋರಿಸುತ್ತಾನೆ.

ದೇವರಿಗೆ ನೀವು ವಿಸ್ಮಯವಾಗಿರುವುದಿಲ್ಲ. ತನ್ನೊಂದಿಗೆ ಒಂದು ಸಂಬಂಧದಿಂದಿರುವುದಕ್ಕೆ ಅವನು ನಿಮ್ಮನ್ನು ಆಹ್ವಾನಿಸುವಾಗ ನೀವು ಯಾವ ರೀತಿಯಲ್ಲಿದ್ದಿರೆಂದು ಅವನು ತಿಳಿದುಕೊಂಡಿದ್ದನು. ನಮ್ಮ ಜೀವಿತದಲ್ಲಿ ನಾವು ಮಾಡಿರುವ ಎಲ್ಲಾ ಪ್ರತಿಯೊಂದು ತಪ್ಪುಗಳನ್ನು ಆಗಲೇ ತಿಳಿದುಕೊಂಡಿದ್ದಾನೆ, ಮತ್ತು ಎಲ್ಲಾ ರೀತಿಯಲೂ ನಮ್ಮನ್ನು ಆತನು ಪ್ರೀತಿಸುತ್ತಾನೆ ಮತ್ತು ಅಪೇಕ್ಷಿಸುತ್ತಾನೆ. ನಿಮ್ಮ ವಿಷಯದಲ್ಲಿ ಬಹಳ ಕಠಿಣವಾಗಿ ವರ್ತಿಸಬೇಡಿರಿ. ದಿನನಿತ್ಯದ ಆಧಾರದ ಮೇಲೆ ದೇವರ ದಯೆಯನ್ನು ಹೊಂದುವುದಕ್ಕೆ ಕಳಿತುಕೊಳ್ಳಿರಿ. ಪ್ರತಿದಿನವು ಎದ್ದೇಳಿ, ದೇವರ ಮಹಿಮೆಗೋಸ್ಕರ ನೀವು ಮಾಡಬಹುದಾದದ್ದನ್ನು ಅತ್ಯುತ್ತಮವಾಗಿ ಮಾಡಿ ಯಾಕೆಂದರೆ ಆತನು ನಿಮ್ಮನ್ನು ಪ್ರೀತಿಮಾಡುವುದಕ್ಕಾಗಿ ಅಲ್ಲ. ನೀವು ಆತನನ್ನು ಪ್ರೀತಿಸುತ್ತೀರಿ. ಅವನ ಇಚ್ಚೆಯಂತೆ ಸರ್ವ ಅಷ್ಟರಮಟ್ಟಿಗೆ ಅವನು ಈಗಾಗಲೇ ನಿಮ್ಮನ್ನು ಪ್ರೀತಿಸಿದ್ದಾನೆ. ಪ್ರತಿದಿನದ ಕಡೆಯಲ್ಲಿ ನಿಮ್ಮ ಎಲ್ಲ ಪಾಪಗಳಿಗಾಗಿ ಮತ್ತು ತಪ್ಪುಗಳಿಗಾಗಿ ಕ್ಷಮಿಸುವುದಕ್ಕಾಗಿ, ರಾತ್ರಿಯ ಒಳ್ಳೆ ನಿದ್ದೆಗಾಗಿ (ಸುಖನಿದ್ದೆಗಾಗಿ) ಮರುದಿನ ಎದ್ದು ಉಲ್ಲಾಸಕರವಾದ ಪ್ರಾರಂಭಕ್ಕಾಗಿ ದೇವರನ್ನು ಬೇಡಿಕೊಳ್ಳಿರಿ.

ಸೈತಾನನು ನಿಮಗೆ ಎದುರಾಗಿದ್ದಾನೆ ಆದರೆ ದೇವರು ನಿಮ್ಮ ಪರವಾಗಿದ್ದಾನೆ. ದೇವರ ಪರವಾಗಿರುವುದಕ್ಕೆ ನೀವು ಆಸಕ್ತಿಯುಳ್ಳವರಾಗಿಬೇಕು, ಯಾಕೆಂದರೆ ಇಬ್ಬರು ಒಮ್ಮತಕ್ಕೆ ಬಂದಾಗ ಅವರು ಬಹಳ ಬಲಶಾಲಿಗರಾಗಿರುತ್ತಾರೆ. ನೀವು ದೇವರ

ದೃಷ್ಟಿಯಲ್ಲಿ ಅಮೂಲ್ಯರಾಗಿದ್ದೀರಿ ಮತ್ತು ದೇವರಿಗೆ ಪ್ರಯೋಜನಕಾರಿಯಾಗಿರುವ ಅನೇಕ ವರಗಳು ನಿಮ್ಮಲ್ಲಿದೆ. ಎಲ್ಲಿಯವರೆಗೆ ನೀವು ಹೊಗಬೇಕು ಎಂಬುದನ್ನಲ್ಲ – ಬದಲು ಎಷ್ಟು ದೂರ ನೀವು ಬಂದಿದ್ದೀರೆಂದು ಎಂಬುದನ್ನು ನೋಡಬೇಡಿರಿ. ಈಗ ನೀವು ಯೇಸು ಕ್ರಿಸ್ತನಲ್ಲಿ ಒಬ್ಬ ವಿಶ್ವಾಸಿಯಾಗಿದ್ದೀರಿ, ಜೀವಿತದಲ್ಲಿ ಪ್ರತಿಯೊಂದು ಆಶ್ಚರ್ಯಕರವಾದ ರೀತಿಯಲ್ಲಿ ಪ್ರಾರಂಭವಾಗಿದೆ.

## ನೀತಿಯ ತಿಳುವಳಿಕೆ

ನೀತಿಯು (ದೇವರೊಂದಿಗೆ ಸ್ಥಿರವಾಗಿರುವುದು) ಯೇಸುವಿನಲ್ಲಿನ ನಂಬಿಕೆಯ ಮೂಲಕ ಬರುತ್ತದೆಯೇ ಹೊರತು ನಮ್ಮ ಸ್ವಂತ ಕಾರ್ಯಗಳೆಂದಲ್ಲಾ. ಅದು ದೇವರ ವರವೇ ಮತ್ತು ಯೇಸುವನ್ನು ನಿಮ್ಮ ರಕ್ಷಕನ್ನಾಗಿ ಅಂಗೀಕರಿಸಿಕೊಂಡ ಸಮಯದಲ್ಲಿ ಕೊಡಲ್ಪಟ್ಟಿದೆ.

ಬೇಕಾದಷ್ಟು ವೇದವಾಕ್ಯಗಳು ಅದನ್ನು ಎತ್ತಿ ತೋರಿಸುವಂಥವುಗಳಾಗಿವೆ. ನಿಮ್ಮ ಪ್ರೋತ್ಸಾಹಕ್ಕೋಸ್ಕರ ನಾನು ಕೆಲವನ್ನು ಪಟ್ಟಿ ಮಾಡುತ್ತೆನೆ:

> "ದೇವರು ಪಾಪ ಜ್ಞಾನವಿಲ್ಲದ ಅತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗ ಮಾಡಿದನು." ಯಾಕೆಂದರೆ ಆತನಲ್ಲಿ ಆತನ ಮುಲಕ ದೇವರ ನೀತಿ ದೊರಕಿತು. (ನಾವು ಏನಾಗ ಬೇಕೋ ಅದು ಒಪ್ಪಂದ ಮಾಡಲ್ಪಟ್ಟಿದೆ, ಮತ್ತು ಆತನೊಡನೆ ಸರಿಯಾದ ಅನ್ಯೋನತೆಯಿದೆ ಅದು ಆತನ ಒಳ್ಳೆಯತನದಿಂದ) —2 ಕೊರಿಂಥ 5:21

ಹಾ! ಎಂಥಹ ಶ್ರೇಷ್ಠವಾದ ವೇದವಾಕ್ಯ! ಕ್ರಿಸ್ತನು ಪಾಪರಹಿತನಾಗಿದ್ದನು, ಆದಾಗ್ಯೂ ನಮಗಾಗಿ ತನ್ನಲ್ಲಿದ್ದ ಪ್ರೀತಿಯಿಂದ ನಮ್ಮ ಪಾಪಾಗಳನ್ನು ತನ್ನ ಮೇಲೆ ಹೊತ್ತುಕೊಂಡು ತಂದೆಯಾದ ದೇವರೊಂದಿಗೆ ನಮಗೆ ಸ್ಥಿರವಾದ ಅನ್ಯೋನ್ಯತೆಯು

ಸಿಗುವಂತೆ ಮಾಡಿದನು, ಯಾಕೆಂದರೆ ಯೇಸುವನ್ನು ನಮ್ಮ ರಕ್ಷಕನ್ನಾಗಿ ಅಂಗೀಕರಿಸಿಕೊಂಡಿದ್ದೇವೆ ಅದನ್ನು ಪುನಃ ಹಾ! ಎಂದು ನಾನು ಹೇಳಲೇಬೇಕು.

ದೇವರು ಮನನೊಂದಿದವನು ಮತ್ತು ಕೋಪವುಳ್ಳವನು ಎಂದು ಹೆದರಿಕೊಳ್ಳುವ ಬದಲು "ಕ್ರಿಸ್ತನಲ್ಲಿ" ಆತನ ಮುಂದೆ ನಾವು ನಿಂತುಕೊಳ್ಳಬಲ್ಲೆವು ಮತ್ತು ನಾವು ಅಂಗೀಕಾರ ಮಾಡಿಕೊಂಡವರೆಂದು ನಾವು ತಿಳುಕೊಳ್ಳಬಲ್ಲೆವು. "ಎಕೆಂದರೆ ಯಾವಾನಾದರೂ ನೇಮ ನಿಷ್ಟೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವುದಿಲ್ಲ. ಧರ್ಮಶಾಸ್ತ್ರದಿಂದ ಪಾಪದ ಅರುಹು ಉಂಟಾಗುತ್ತದಷ್ಟೆ." —ರೊಮಾ ಪತ್ರಿಕೆ 3:20

ಧರ್ಮಶಾಸ್ತ್ರದಲ್ಲಿ ತಿಳಿಸಿರುವ ಕ್ರೀಯೆಗಳನ್ನು ಅನುಸರಿಸುವುದರಿಂದ ಆತನ ದೃಷ್ಟಿಯಲ್ಲಿ ನೀತಿವಂತರೆಂದು ನಿರ್ಣಯಿಸಲ್ಪಡುವುದಿಲ್ಲ. ಧರ್ಮಶಾಸ್ತ್ರವು ಪಾಪದ ಅರಿವಿನಿಂದ ತಿಳುವಳಿಕೆಯನ್ನು ಜನರಿಗೆ ಮಾಡಿಕೊಡುವುದಕ್ಕೆ ಸಹಕರಿಸುತ್ತದೆ. (ಜ್ಞಾನದಿಂದ ಮಾತ್ರವಲ್ಲ ಅದು ಪಾಪದ ಕಡೆಗೆ ಪಶ್ಚಾತಾಪಕ್ಕೆ ನಡಿಸುವ ಒಂದು ಪರಿಚಯವನ್ನು ಮಾಡಿಕೊಟ್ಟು ನಂಬಿಕೆ ಮತ್ತು ಪವಿತ್ರ ನಡವಳಿಕೆಯ ಕಡೆಗೆ ನಡೆಸುವಂತದ್ದಾಗಿದೆ) ಅಂದರೆ ದೇವರ ನೀತಿಯು ನಂಬುದವರೆಲ್ಲರಿಗೆ ಯೇಸುಕ್ರಿಸ್ತನಲ್ಲಿ (ಆತನು ಮೇಸ್ಸೀಯನು) ನಂಬುವವರೆಲ್ಲರಿಗು ಅನ್ವಯಿಸುತ್ತದೆ. ಯಾವ ಭೇಧವೂ ಇರುವಿದಿಲ್ಲ. —ರೋಮಾ ಪತ್ರಿಕೆ 3:22

ಆದರೂ ಯಾವನಾದರೂ ಯೇಸುಕ್ರಿಸ್ತನ ಮೇಲಣ ನಂಬಿಕೆಯಿಂದಲೇ ಹೊರತು ನೇಮನಿಷ್ಟೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವುದಿಲ್ಲವೆಂಬದು ನಮಗೆ ತಿಳಿದಿರುವುದರಿಂದ ನಾವು ಸಹ ನೇಮನಿಷ್ಟೆಗಳನ್ನು ಬಿಟ್ಟು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ

> ನೀತಿವಂತರೆಂದು ನಿರ್ಣಯಿಸಲ್ಪಡುವುದಕ್ಕಾಗಿ ಕ್ರಿಸ್ತಯೇಸುವಿನಲ್ಲಿಯೇ ನಂಬಿಕೆಯಿಟ್ಟೆವು; ಯಾಕೆಂದರೆ ಯಾವನಾದರೂ ನೇಮನಿಷ್ಟೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವುದಿಲ್ಲ.
>
> —ಗಲಾತ್ಯಪತ್ರಿಕೆ 2:16

ಯೇಸುಕ್ರಿಸ್ತನನ್ನು ನಿಮ್ಮ ನಂಬಿಕೆಯ ಮುಖಾಂತರ ದೇವರ ಮುಂದೆ ಸ್ಥಿರವಾಗಿ ನಿಂತುಕೊಳ್ಳುವುದಕ್ಕೆ ನಿವಾಗಿ ನೀವು ಕಾಣಿಸಿಕೊಳ್ಳುವುದು ನಿಮ್ಮ ಆತ್ಮೀಯ ಬೆಳವಣಿಗೆಗೆ ಬಹು ಪ್ರಾಮುಖ್ಯವಾದದ್ದು. ಅದು ದೇವರಿಂದ ಬಂದ ಒಂದು ವರ. ನಾವು ನಮ್ಮ ಸ್ವಂತ ವಿಷಯದಲ್ಲಿ ಒಂದು ವೇಳೆ ಯಾವಾಗಲೂ ಕೆಟ್ಟ ಅನುಭವ ಪಡೆದರೆ ಅಂದರೆ, ದೇವರು ನಮ್ಮ ಕಡೆಗೆ ಕೋಪಉಳ್ಳವನಾಗಿದ್ದಾನೆ ಎಂದು ಯೋಚಿಸುವುದಾದರೆ, ದೇವರು ಅದರಲ್ಲಿ ನಮ್ಮನ್ನು ನಡೆಸಲಿಕ್ಕೆ ಇಷ್ಟಪಡುವ ಶಕ್ತಿಯನ್ನು ನಾವು ಕಳಕೊಳ್ಳುತ್ತೇವೆ. ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನಮಗೆ ಸೈತಾನನ ಮೇಲೆ ಅಧಿಕಾರವಿದೆ, ಆದರೆ ದೇವರ ಮುಂದೆ, ದೋಷವೆಂಬ ಚಿಂದಿ (ಹರಕು) ಬಟ್ಟೆ ಮತ್ತು ದಂಡನೆಯ ವಸ್ತ್ರಗಳಿಂದಲ್ಲ, ನೀತಿವಸ್ತ್ರಗಳೆಂಬ ಬಟ್ಟೆಗಳನ್ನು ಧರಿಸಿಕೊಂಡು ನಾವು ದೇವರ ಮುಂದೆ ನಿಲ್ಲಬೇಕು.

ಎಫೆಸ್ಸ ಪತ್ರಿಕೆ 6ನೇ ಅಧ್ಯಾಯದಲ್ಲಿ ಸ್ಪಷ್ಟವಾಗಿ ತಿಳಿಸಿರುವ ಹಾಗೆ ಎದೆಯ ಕವಚದಂತೆ ನಾವು ನೀತಿಯೆಂಬ ಕವಚವನ್ನು ಧರಿಸಿಕೊಳ್ಳಬೇಕು. ಸೈನಿಕನಿಗೆ, ಎದೆಕವಚ ಆತನ ಹೃದಯ ಭಾಗವನ್ನು ಮುಚ್ಚುತ್ತದೆ. ನೀವೇ ನಿಮ್ಮ ವಿಷಯದಲ್ಲಿ ಯಾವುದನ್ನು ನಿಜವಾಗಿ ನಂಬುತ್ತೀರಿ? ನೀವು ದೇವರೊಂದಿಗೆ ಸ್ಥಿರವಾಗಿ ನಿಂತಿದ್ದೇವೆ ಎಂದು ವಿಶ್ವಾಸದಿಂದ ನೀವು ನಂಬಬಲ್ಲಿರೋ? ನೀವು ಮಾಡುವ ಪ್ರತಿಯೊಂದು ತಪ್ಪಿನ ಮೇಲಲ್ಲ, ಯೇಸು ನಿಮಗಾಗಿ ಏನು ಮಾಡಿದ್ದಾನೊ ಅದರ ಮೇಲೆ ನಿಮ್ಮ ದೃಷ್ಟಿಯನ್ನು ಇಡುವುದಾದರೆ, ನೀವು ನೋಡಬಲ್ಲಿರಿ. ನೀವು ತಪ್ಪುಗಳನ್ನು ಮಾಡುತ್ತೀರಿ, ನೀವು ಮಾಡುವಾಗ, ತಕ್ಷವೇ ಮಾನಸಾಂತರಪಡಿರಿ, ದೇವರ ಕ್ಷಮಾಪಣೆಯನ್ನು ಹೊಂದಿರಿ. ನೀತಿಮಾರ್ಗದಲ್ಲಿ ನೀವು ನಡೆಯಲು ಇದು ಒಂದೇ

ಮಾರ್ಗವಾಗಿದೆ. ಇದರಲ್ಲಿ ನಾವು ನಡೆಯುವುದು ನಮ್ಮ ನೀತಿಯಿಂದಲ್ಲ ಯಾಕೆಂದರೆ ನಮ್ಮ ನೀತಿ ಕೊಳಕು ಚಿಂದಿ ಬಟ್ಟೆಯಂತೆ ಇದೆ, ಆದರೆ ಕ್ರಿಸ್ತನಲ್ಲಿ ನಾವು ಇಟ್ಟಿರುವ ನಂಬಿಕೆಯ ಮೂಲಕ ದೇವರ ನೀತಿಯಲ್ಲಿ ನಾವು ನಡೆಯಬಲ್ಲೆವು ಮತ್ತು ನಡೆಯಲೇಬೇಕು. ಈಗ ನೀವು ನಿಮ್ಮ ಕಡೆಗೆ ಹೊಂದಿರುವ (ಪಡಕೊಂಡಿರುವ) ಈ ಆಶ್ಚರ್ಯಕರವಾದ ನೂತನ ನಡವಳಿಕೆ, ಯೇಸುವಿನಲ್ಲಿ ವಿಶ್ವಾಸಿಯಾಗಿರುವ ನಿಮಗೆ ನಿಮ್ಮ ನೂತನ ಜೀವನ ಒಂದು ಅಂಶವಾದ ಕಟ್ಟು (ಬಂಡಲು) ಆಗಿದೆ.

## ನೀವಾಗಿಯೇ ಸಂತೋಷದಿಂದಿರುವುದು

ನೀವಾಗಿಯೇ ನೀವು ಈಗ ಸಂತೋಷಪಡುವುದಕ್ಕೆ ಸ್ವತಂತ್ರರಾಗಿದ್ದೀರಿ, ಇದು ನೀವು ಮಾಡುವ ದೇವರ ಚಿತ್ತವಾಗಿದೆ. ಬೇರೆಯವರು ಏನು ಹೇಳುತ್ತಾರೊ ಆ ತಳಹದಿಯ ಮೇಲೆ ನಿಮ್ಮ ಯೋಗ್ಯತೆಯನ್ನು ಮತ್ತು ಬೆಲೆಯನ್ನು ಅಸ್ತಿವಾರವಾಗಿ ಮಾಡಿಕೊಳ್ಳಬೇಡಿರಿ. ಅವರು ನಿಮ್ಮನ್ನು ಕುರಿತು ಏನು ಹೇಳಿದ್ದಾರೊ ಅದರ ಮೇಲೆ ಜನರು ನಿಮ್ಮನ್ನು ಹೇಗೆ ನಡೆಸಿಕೊಂಡಿದ್ದಾರೊ ಆ ಅಸ್ತಿವಾರದಮೇಲೂ ಅವಲಂಬನೆ ಮಾಡಿಕೊಳ್ಳಬೇಡಿರಿ. ಅದೂ ಅಲ್ಲದಿದ್ದರೆ ನೀವು ಜೀವಿತದಲ್ಲಿ ಮುಗಿಸಿದ ಕಾರ್ಯಗಳ ಮೇಲೆ ನಿಮಗಾಗಿ ತನ್ನ ಮಗನು ಪ್ರಾಣಕೊಡುವುದಕ್ಕೆ ನೀವು ಯೋಗ್ಯತೆಯುಳ್ಳವರಾಗಿದ್ದೀರೆಂದು ದೇವರು ಯೋಚನೆ ಮಾಡಿದನು ಮತ್ತು ಸಂತೋಷಪಡಲು ಇದು ಒಂದು ಕಾರಣ.

ನಾವು ಜೀವನವನ್ನು ಸಂತೋಷದಿಂದ ಕಳೆಯಬೇಕೆಂದು ದೇವರು ಇಷ್ಟಪಡುತ್ತಾನೆಂದು ಸತ್ಯವೇದವು ಸ್ಪಷ್ಟವಾಗಿ ತಿಳಿಸುತ್ತದೆ. ನಿಮ್ಮಲ್ಲಿ ನೀವು ಸಂತೋಷಪಡದೆ ಹೋದರೆ ಅದು ಸಾಧ್ಯವಗುವುದಿಲ್ಲ. ಒಂದು ಕ್ಷಣಕ್ಕಾಗಿ ಸಹ ನೀವು ಇಲ್ಲಿಂದ ಎಂದಿಗೂ ಹೊರಟು ಹೋಗದೆ ಒಬ್ಬ ವ್ಯಕ್ತಿಯಾಗಿದ್ದೀರಿ. ನೀವಾಗಿಯೇ ಸಂತೋಷಪಡದೆ ಹೋಗುವುದಾದರೆ, ನೀವು ಯಾವುದೋ ಒಂದು ಕಷ್ಟಕರವಾದ ಜೀವಿತದಲ್ಲಿದ್ದೀರಿ.

ನನ್ನ ಹಾಗೆಯೇ, ನೀವು ತಿಳಿದ ಹಾಗೆ ನೀವು ಇತರ ಜನರಿಗಿಂತ ಸಾಧಾರಣವಾಗಿ ಭಿನ್ನವಾದ ವ್ಯಕ್ತಿಯಾಗಿದ್ದೀರಿ, ಆದರೆ ಅದು ಸರಿ. ದೇವರು ಯಾವುದೋ ಉದ್ದೇಶ ಪೂರ್ವಕವಾಗಿ ಮಾಡಿದಂಥ ಒಂದು ಸಂಗತಿಯಾಗಿದೆ. ಅವನು ನಮ್ಮೆಲ್ಲರನು ಕೊಂಚ ಬಿನ್ನವಾಗಿ ಸೃಷ್ಟಿಸಿದ್ದಾನೆ. ಆತನಿಗೆ ವಿಧವಿಧವಾದದ್ದು ಇಷ್ಟ. ನೀವು ವಿಕಾರಿಯಾಗಿಲ್ಲ; ನೀವು ಅದ್ವಿತೀಯ ಮೂಲದವರಾಗಿದ್ದೀರಿ ಮತ್ತು ಬೇರೆ ಇತರ ಯಾವುದಾದರೊಂದರ ಕೇವಲ ನಕಲಿಗಳ ವಿಷಯಗಳಿಗಿಂತ ಮಹತ್ವವುಳ್ಳ ಬೆಲೆಯನ್ನು ಹೊಂದಿದ್ದೀರಿ.

ಇತರರೊಂದಿಗೆ ನಿಮ್ಮನ್ನು ಹೋಲಿಸಿಕೊಳ್ಳಬೇಡಿ, ಅವರೊಂದಿಗೆ ನಿಮ್ಮ ಜೀವಿತದ ಸಮಯವನ್ನು ಪೈಪೋಟಿಯಿಂದ ಕಳೆಯಬೇಡಿರಿ (2 ಕೋರಿಂಥ 10:12) ನೀವಾಗಿಯೇ ನೀವು ಇರ್ರಿ, ನೀವು ಯಾರಾಗಿದ್ದೀರೊ ಅದಕ್ಕಾಗಿ ಸಂತೋಷಪಡಿರಿ. ಉಳಿದ ನಮ್ಮಂತೆಯೇ ನೀವು ಕೆಲವು ಪ್ರದೇಶಗಳಲ್ಲಿ ಸರಿಯಾದ ರೀತಿಯಲ್ಲಿ ಬದಲಾಯಿಸಿಕೊಳ್ಳುವುದು ಅವಶ್ಯ ಮತ್ತು ಪರಿಶುದ್ಧಾತ್ಮನು ನಿಮ್ಮ ಉಳಿದಿರುವ ಜೀವನದಲ್ಲಿ ಆ ಬದಲಾವಣೆಗಳ ಮೇಲೆ ಕರಿಯ ಮಾಡುತ್ತಯಿದ್ದನೆ. ಶುಭ ಸಂದೇಶವೆನೆಂದರೆ ಈ ಕರ್ಯ ನಡೆಯುತಿರುವಗ ನೀವು ನಿಮಲಿಯೇ ಸಂತೋಷಿಸಬಹುದು.

# ಅಧ್ಯಾಯ–8

# ನಂಬಿಕೆಗೆ ಭಯವನ್ನು ವಿನಿಮಯ ಮಾಡು (ಅದಲು ಬದಲು)

ಭಯವು ಹೇಗನಿಸುತ್ತದೆಯೆಂದು ನಮ್ಮೆಲ್ಲರಿಗೂಗೊತ್ತಿದೆ. ಅದು ಸಂಕಟ ಕೊಡುವಂಥದ್ದು ಮತ್ತು ನಮ್ಮ ಪ್ರಗತಿಯನ್ನು ತಡೆಹಿಡಿಯುವಂತದ್ದು ಆಗಿದೆ. ಭಯವು ನಮ್ಮನ್ನು ನಡುಗುವಂತೆ ಮಾಡುತ್ತದೆ ಮತ್ತು ಬೆವರುವಂತೆ ಮಾತ್ರವಲ್ಲ ಬಲಹೀನತೆಯುನ್ನು ಅನುಭವಿಸುವಂತೆ ಮಾಡುತ್ತದೆ ಹಾಗೂ, ನಾವು ಎದುರಿಸಲಾರದಂತಹ ವಿಷಯುಗಳಿಂದ ಓಡಿಹೋಗುವುದಕ್ಕೆ ನಮುಗೆ ಕಾರಣವಾಗುತ್ತದೆ.

ಭಯವು ದೇವರಿಂದ ಬಂದದ್ದಲ್ಲ. ಅದು ಸೈತಾನನ ಸಾಧನವಾಗಿದ್ದು, ದೇವರು ನಾವು ಜೀವಿಸಬೇಕೆಂದು ಇಷ್ಟಪಡುವ ಒಳ್ಳೆಯ ಜೀವಿತವನ್ನು ತಡೆಹಿಡಿಯುತ್ತದೆ. (2 ತಿಮೋತಿ 1:7) ನಾವು ನಂಬಿಕೆಯಲ್ಲಿ ಜೀವಿಸುವದಕ್ಕೆ ದೇವರು ಇಷ್ಟಪಡುತ್ತಾನೆ. ನಮ್ಮ ಸಂಪೂರ್ಣ ವ್ಯಕ್ತಿತ್ವಗಳ ಒಲವು ದೇವರ ಮೇಲಿನ ಪೂರ್ಣ ನಂಬಿಕೆ, ಆತನ ಶಕ್ತಿಯಲ್ಲಿ ದೃಢ ವಿಶ್ವಾಸ, ಜ್ಞಾನ ಮತ್ತು ಒಳ್ಳೆಯತನ ಇವುಗಳಲ್ಲಿ ಭರವಸೆಯನ್ನುಂಟು ಮಾಡುತ್ತದೆ. ನಾವು ನೋಡದೇ ಇರುವ ವಿಷಯಗಳ ಮತ್ತು ಅವುಗಳ ಮನವರಿಕೆಯ ಅಸ್ತಿತ್ವದ ಸಾಕ್ಷಿಯಾಗಿದೆ.

ಆತ್ಮೀಯ ರಾಜ್ಯದಲ್ಲಿ ನಂಬಿಕೆ ಕಾರ್ಯಮಾಡುತ್ತದೆ. ನೀವು ಯಾವುದನ್ನು ಕಣ್ಣಿನಿಂದ ನೋಡುತ್ತೀರೋ ಮತ್ತು ಅನುಭವಿಸುತ್ತೀರೊ ಅದನ್ನು ಮಾತ್ರ ನಂಬುವಲ್ಲಿ

ಒಂದು ವೇಳೆ ರೂಢಿ ಮಾಡಿಕೊಂಡಿರಬಹುದು, ಆದರೆ ಒಂದು ದೇವರ ಮಗುವಿನಂತೆ ನೀವು ನೋಡದೇ ಇರುವ ಒಂದು ಸುಭದ್ರವಾದ ಜೀವಿತವನ್ನು ಹೊಂದುವ ಅವಶ್ಯಕತೆ ಇದೆ. (ಆತ್ಮೀಯ ರಾಜ್ಯ) ದೇವರು ಆತ್ಮ ಸ್ವರೂಪನಾಗಿರುವುದರಿಂದ ನಾವು ಆತನನ್ನು ನೋಡುವುದಿಲ್ಲ, ಆದರೆ ನಾವು ಆತನಲ್ಲಿ ದೃಢವಾಗಿ ನಾವು ನಂಬುತ್ತೇವೆ. ಸಾಧಾರಣವಾಗಿ ನಾವು ದೇವದೂತರನ್ನು ನೋಡುವುದಿಲ್ಲ. ಆದರೆ ಅವರೆಲ್ಲರೂ ನಮ್ಮ ಸುತ್ತಲೂ ಆವರಿಸಿಕೊಂಡು ನಮ್ಮನ್ನು ಕಾಪಾಡುತ್ತಿದ್ದಾರೆಂದು ದೇವರ ವಾಕ್ಯ ತಿಳಿಸುತ್ತದೆ.  ದೇವರಲ್ಲಿ ನಮ್ಮ ನಂಬಿಕೆಯನ್ನು ಆತನ ವಾಕ್ಯವನ್ನು ಸ್ಪಷ್ಟವಾಗಿ ಗ್ರಹಿಸುತ್ತಿರುವುದರಿಂದ ನಾವು ಆತ್ಮೀಯ ರಾಜ್ಯದೊಳಗೆ ಹೋಗಿ ತಲುಪಬಲ್ಲೆವು ಮತ್ತು ನಾವು ಸಂತೋಷಿಸುವುದಕ್ಕೆ ದೇವರು ಇಷ್ಟಪಡುವ ವಿಷಯಗಳನ್ನು ಬಹಿರಂಗವಾಗಿ ತರಬಲ್ಲೆವು. ಆದರೆ ಇನ್ನೂ ಸತ್ಯವಾದವುಗಳಲ್ಲ.

ಸಂದರ್ಭಗಳಿಗೆ ತಕ್ಕಂತೆ ಮತ್ತು ಮುಂದಿನ ದಿನಗಳಲ್ಲಿ ನಾವು ಹೆದರುವಂತೆ ಸೈತಾನನು ಪ್ರಯತ್ನಿಸುವುದರಿಂದ ನಮ್ಮ ಗಮನ ಸೆಳೆಯುವುದರಲ್ಲಿ ಸಂತೋಷಪಡುತ್ತಾನೆ. ಇನ್ನೊಂದು ಕಡೆ ದೇವರನ್ನು ನಾವು ನಂಬುವಂತೆ ದೇವರು ಆಶಿಸುತ್ತಾನೆ, ಏಕೆಂದರೆ ಯಾವುದೇ ಸಂದರ್ಭಕ್ಕಿಂತ ಅಥವಾ ಸೈತಾನನಿಂದ ಬರುವ ಬೆದರಿಕೆಗಿಂತ ಆತನು ಶ್ರೇಷ್ಠನು ಎಂದು ನಂಬುವುದರಿಂದ.

ಪುರುಷರ ಮತ್ತು ಸ್ತ್ರೀಯರ ನಿರಾಸೆಯ ಸನ್ನಿವೇಶದಲ್ಲಿ ಅವರಾಗಿಯೇ ಕಂಡುಕೊಂಡಂಥ ಗಣನೀಯ ಉದಾಹರಣೆಗಳಿಂದ ಸತ್ಯವೇದದಲ್ಲಿ ಹೆಚ್ಚಾಗಿ ತಿಳಿಸಲ್ಪಟ್ಟಿದೆ (ತುಂಬಿಸಲ್ಪಟ್ಟಿದೆ) ಮತ್ತು ಪರಿಣಾಮವಾಗಿ ಅವರ ಮನಸ್ಸು ಭಯದಿಂದ ತುಂಬಿತ್ತು. ಆದರೆ ಅವರು ದೇವರಲ್ಲಿ ತಮ್ಮ ನಂಬಿಕೆಯನ್ನು ಇಡುವುದಕ್ಕೆ ಅವರು ತೀರ್ಮಾನಿಸಿಕೊಂಡರು ಮತ್ತು ಮಹತ್ವವುಳ್ಳ ಬಿಡುಗಡೆಯನ್ನು ಅನುಭವಿಸಿದರು. ನೀವು ಭಯದಲ್ಲಿ ಅಥವಾ ನಂಬಿಕೆಯಲ್ಲಿ ಜೀವಿಸುವುದಕ್ಕೆ ಹೋಗುತ್ತಿರುವುದಾದರೆ ನೀವು ನಿರ್ಧರಿಸಲೇಬೇಕು. ಈಗ ನೀವು ಒಬ್ಬ ಕ್ರೈಸ್ತನಾಗಿದ್ದಾಗ್ಯೂ ಇನ್ನೂ ಸಹ ನಂಬಿಕೆಯ ಮುಖಾಂತರ ಬದುಕಲು ನಿಶ್ಚಯಮಾಡದೇ ಹೋದರೆ ಎಲ್ಲ ತರಹದ ಭಯದಲ್ಲಿ ಅದರ ಜೊತೆಯಲ್ಲಿ ಯಾತನೆ ಪಡುವಂತಹ ಜೀವಿತವನ್ನು ಜೀವಿಸಲು

ಸಾಧ್ಯವಿದೆ. ನೀವು ನಂಬಿಕೆಯಿಂದ ಯೇಸುವನ್ನು ನಿಮ್ಮ ರಕ್ಷಕನನ್ನಾಗಿ ನೀವು ಅಂಗೀಕರಿಸಿಕೊಂಡಿದ್ದೀರಿ; ನಂಬಿಕೆಯಿಂದ ಜೀವಿಸುವುದಕ್ಕೆ ತಿಳಿದುಕೊಳ್ಳುವುದು ಅದು ಮುಂದಿನ ಮೆಟ್ಟಿಲಾಗಿದೆ.

> "ಹೇಗೆಂದರೆ ದೇವರಿಂದ ದೊರಕುವ ನೀತಿಯು ಅದರಲ್ಲಿ ತೋರಿ ಬರುತ್ತದೆ. ನೀತಿವಂತನು ನಂಬಿಕೆಯಿಂದಲೇ ಬದುಕುವನೆಂಬ ಶಾಸ್ತ್ರೋಕ್ತಿಯ ಪ್ರಕಾರ ಆ ನೀತಿಯು ನಂಬಿಕೆಯು ಫಲವಾಗಿದ್ದು ನಂಬಿಕೆಯುನ್ನು ಪ್ರಕಟಿಸುವಂತದ್ದಾಗಿದೆ." —ರೋಮಪುರ 1:17

ದೇವರ ಪ್ರೀತಿಯುನ್ನು ಅರ್ಥಮಾಡಿಕೊಳ್ಳುತ್ತಿದ್ದಂತೆಯೇ ಯೇಸುವಿನ ಪುನರುತ್ಥಾನದಿಂದ ಮತ್ತು ಮರಣದ ಮುಖಾಂತರ ದೇವರೊಂದಿಗೆ ಸಂಧಾನ ಮಾಡಲ್ಪಟ್ಟಿದ್ದೇವೆ ಮತ್ತು ನಮಗೆ ನಂಬಿಕೆಯಲ್ಲಿ ನಡೆಯಲು ಸುಲಭಕರವಾಗಿ ಕಾಣುತ್ತದೆ. ನಾವಾಗಿಯೇ ನಾವು ಮಾಡಿಕೊಳ್ಳುವ ಅನಿಸಿಕೆಯ ಬದಲು ನಮ್ಮ ಮೇಲೆ ಕಾತುರತೆಯುನ್ನು ತೆಗೆದುಕೊಳ್ಳುವುದಕ್ಕೆ ದೇವರನ್ನು ನಂಬುವುದಕ್ಕೆ ಪ್ರಾರಂಭಿಸುತ್ತೇವೆ.

ಧೈರ್ಯವು ನಂಬಿಕೆಯ ಮುಂದೆ ಭಯವಿಲ್ಲವೆಂಬುದಾಗಿ ಹೇಳಲು ಆಗುವುದಿಲ್ಲ, ಆದರೆ ಅದು ಇದ್ದಾಗ್ಯೂ ಅದರ ಸಮ್ಮುಖದಲ್ಲಿಯೇ ನಡೆಯುತ್ತಿರುವ ಒಂದು ಕಾರ್ಯ. ದೇವರು ತನ್ನ ಸೇವಕರಿಗೆ ಹೆದರಬೇಡಿರಿ ಎಂದು ಹೇಳಿದಾಗ ಭಯವನ್ನು ಅನುಭವಿಸಲಿಕ್ಕಿಲ್ಲ ದೇವರು ಅವರನ್ನು ಆಜ್ಞಾಪಿಸುತ್ತಿದದ್ದು ಆದರೆ ಅವರು ಹೇಗೆ ತಿಳಿದುಕೊಂಡರೂ ಪರವಾಗಿಲ್ಲ, ಅವನು ಅವರನ್ನು ತನಗೆ ವಿಧೇಯರಾಗಬೇಕೆಂದು ಹೇಳುತ್ತಿದ್ದನು. ದೇವರೊಂದಿಗೆ ನಮ್ಮ ನಡೆಯಲ್ಲಿ ಭಯದ ಆತ್ಮ ಯಾವಾಗಲೂ ನಮ್ಮನ್ನು ಕಾಪಾಡಿಕೊಳ್ಳುವುದಕ್ಕೆ ಪ್ರಯತ್ನಿಸುತ್ತದೆ. ಅದು ಏಕೆಂದರೆ, ಎಲ್ಲಾ ಸಮಯದಲ್ಲಿ ಆತನು ನಮ್ಮೊಂದಿಗೆ ಇದ್ದಾನೆಂದು ಆತನು ವಾಕ್ಯದಲ್ಲಿ ಮೇಲಿಂದ ಮೇಲೆ ನಮಗೆ ಹೇಳುತ್ತಾನೆ ಮತ್ತು ಆದಕಾರಣ ಭಯಕ್ಕೆ ನಾವು ತಲೆಬಾಗಿಸಬೇಕಾಗಿಲ್ಲ.

ಎಲಿಯನೋರ್ ರೊಸ್ ವೆಲ್ಟ್ ಹೇಳಿದರು "ಬಲ ಧೈರ್ಯ, ಭರವಸೆಗಳನ್ನು ನಿಜವಾಗಿ ಭಯದ ಮುಂದೆ ಅನುಭವಿಸುತ್ತಾ ಪ್ರತಿಯೊಂದು ಅನುಭವದಲ್ಲಿ ನೀವು ಪಡೆದುಕೊಳ್ಳುತ್ತೀರಿ."

> "ನೀವು ಶೂರರಾಗಿ ಧೈರ್ಯದಿಂದಿರ್ರಿ ಅವರಿಗೆ ಅಂಜಬೇಡಿರಿ ಕಳವಳ ಪಡಬೇಡಿರಿ, ನಿಮ್ಮ ದೇವರಾದ ಯೆಹೋವನೇ ನಿಮ್ಮ ಸಂಗಡ ಇರುತ್ತಾನಲ್ಲಾ ಆತನು ನಿಮ್ಮನ್ನು ಕೈಬಿಡುವುದಿಲ್ಲ ಅಪಜಯಕ್ಕೆ ಗುರಿಪಡಿಸುವುದೇ ಇಲ್ಲ" ಎಂದು ಹೇಳಿದನು.
>
> —ಧರ್ಮೋಪದೇಶಕಾಂಡ 3:16

ನಂಬಿಕೆ ಮಾತ್ರ ದೇವರನ್ನು ಮೆಚ್ಚಿಸುತ್ತದೆ, ನಂಬಿಕೆಯ ಮೂಲಕ ದೇವರಿಂದ ನಾವು ಪಡೆದುಕೊಳ್ಳುತ್ತೇವೆ. ಆದುದರಿಂದ ಕ್ರಿಸ್ತನಲ್ಲಿ ನೂತನ ವಿಶ್ವಾಸಿಗೆ ನಂಬಿಕೆ ವಿಷಯವಾಗಿ ಮತ್ತು ಅದರಲ್ಲಿ ನಡೆಯುವುದಕ್ಕೆ ಪ್ರಾರಂಭಿಸುವುದನ್ನು ಕಲಿತುಕೊಳ್ಳುವುದಕ್ಕೆ ಅದು ಪ್ರಾಮುಖ್ಯವಾದದ್ದಾಗಿದೆ. ಬಲವುಳ್ಳ ಸ್ನಾಯುಗಳನ್ನು ವೃದ್ಧಿಗೊಳಿಸುವಂತೆಯೇ ಬಲವುಳ್ಳ ನಂಬಿಕೆಯನ್ನು ಕೂಡ ವೃದ್ಧಿಗೊಳಿಸಬೇಕು. ನಿಮ್ಮ ನಂಬಿಕೆಯನ್ನು ಸ್ವಲ್ಪ ಸ್ವಲ್ಪವಾಗಿ ಅಭ್ಯಾಸಮಾಡುತ್ತಾ ಬನ್ನಿರಿ ಮತ್ತು ಪ್ರತಿಸಾರಿ ಅದನ್ನು ನೀವು ಮಾಡುವಾಗ ಹೆಚ್ಚಾದ ಬಲವನ್ನು ಹೊಂದುವಿರಿ.

ಮತ್ತಾಯ 17:20 ರಲ್ಲಿ ನಂಬುವವರೆಲ್ಲರಿಗೆ ಎಲ್ಲವೂ ಸಾಧ್ಯ ಎಂದು ನಮಗೆ ಭೋಧಿಸುತ್ತದೆ. ಸಾಸಿವೆಕಾಳಷ್ಟು ನಂಬಿಕೆ ಇರುವುದಾದರೆ ನಮ್ಮ ಜೀವಿತದಲ್ಲಿ ಬೆಟ್ಟದಂತಿರುವ ಕಷ್ಟಗಳು ಚಲಿಸಬಲ್ಲವು. ನಿಮ್ಮ ಸಮಸ್ಯೆಗಳನ್ನು ನಿಮ್ಮ ಜೀವಿತದಲ್ಲಿ ಪರಿಹರಿಸಿಕೊಳ್ಳಲು ಒಂದು ವೇಳೆ ಹೆಚ್ಚಾಗಿ ಸಮಯವನ್ನು ವೆಚ್ಚಮಾಡಿರಬಹುದು ಮತ್ತು ಅನೇಕ ಸಂದರ್ಭಗಳಲ್ಲಿ ನಿಷ್ಫಲಗೊಳಿಸುವುದನ್ನು ಅನುಭವಿಸಿರಬಹುದು ಮತ್ತು ನಿರಾಶೆಯಾಗಿರಬಹುದು. ಹಾಗಿರುವುದಾದರೆ ಒಂದು ಕಡಿದಾದ ಪ್ರದೇಶದಲ್ಲಿರುವ ಒಂದು ಹೊಸ ಅನುಭವವನ್ನು ಪಡೆದುಕೊಳ್ಳುತ್ತೀರಿ. ಈಗ ನೀವು

ದೇವರೊಂದಿಗೆ ಮಾತನಾಡಬಲ್ಲಿರಿ (ಪ್ರಾರ್ಥನೆ) ಮತ್ತು ನಿಮಗೆ ಸಂಬಂಧಪಟ್ಟಿರುವ ಎಲ್ಲಾ ವಿಷಯಗಳಲ್ಲಿ ಆತನನ್ನು ಒಳಪಡಿಸಿಕೊಳ್ಳಲು ಆಹ್ವಾನಿಸಬಹುದು ಮತ್ತು ಮನುಷ್ಯನಿಗೆ ಯಾವುದು ಅಸಾಧ್ಯವಾಗಿದೆಯೋ ಅದು ದೇವರಿಗೆ ಸಾಧ್ಯ ಎಂದು ನೀವು ಕಂಡುಕೊಳ್ಳಬಹುದು.

ನಿಮ್ಮ ನಂಬಿಕೆಯ ಪ್ರಕಾರ ನಿಮಗೆ ಅದು ಮಾಡಲ್ಪಡುತ್ತದೆ (ಮತ್ತಾಯ 9:29). ನಿಮ್ಮ ಜೀವನದಲ್ಲಿ ಹೆಚ್ಚಾಗಿ ಭಯದ ಜೀವಿತದಲ್ಲಿ ಜೀವಿಸಿರಬಹುದು, ಆದರೆ ಈಗ ದೇವರಲ್ಲಿ ನಂಬಿಕೆಯುಡುವುದರ ಮುಲಕ ಭಯುವನ್ನು ವಿನಿಮಯ ಮಾಡಿಕೊಳ್ಳುವುದಕ್ಕೆ ಇದು ಸಮಯುವಾಗಿದೆ. ನೂತನ ಮಾರ್ಗವನ್ನು ತಿಳಿದುಕೊಳ್ಳುವುದಕ್ಕೆ ಸ್ವಲ್ಪ ಸಮಯತೆಗೆದುಕೊಳ್ಳುತ್ತೆ, ಆದರೆ ನಿರಾಶೆಯಿಂದಿರ ಬೇಡಿರಿ ಅದನ್ನು ಬಿಟ್ಟುಬಿಡಿ. ಭೂಲೋಕದಲ್ಲಿ ಪ್ರತಿಯೊಂದು ಕಾರ್ಯಗಳು ಕ್ರಮೇಣ ಬೆಳೆಯವ ನಿಯಮಕ್ಕನುಸಾರವಾಗಿರುತ್ತದೆ. ದೇವರು ನಮಗೆ ಏನನ್ನು ಮಾಡಬೇಕೆಂದು ಹೇಳುತ್ತಾನೋ ಅದನ್ನು ಮಾಡುತ್ತಾಹೋದರೆ ಸ್ವಲ್ಪವಾಗಿ ಪ್ರತಿಯೊಂದು ಬದಲಾವಣೆಯಾಗುತ್ತದೆ.

# ಅಧ್ಯಾಯ–9

# ಆನಂದಿಸುವ ಜೀವಿತ

ಕಳ್ಳನು ಕದ್ದುಕೊಳ್ಳುವುದಕ್ಕೂ, ಕೊಲ್ಲುವುದಕ್ಕೂ ಮತ್ತು ನಾಶಮಾಡುವುದಕ್ಕೂ ಬರುತ್ತಾನೆ. ನಾನಾದರೂ ಅವರಿಗೆ ಜೀವವೂ, ಸಂತೋಷವೂ ಮತ್ತು ಸಮೃದ್ಧಿಯನ್ನು ಕೊಡುವುದಕ್ಕಾಗಿ ಬಂದೆನು (ತುಂಬಿ ಹೊರಸೂಸುವವರೆಗೂ)

—ಯೋಹಾನ 10:10

ಯೇಸು ಸತ್ತದದರಿಂದ ನೀವು ನಿಮ್ಮ ಜೀವಿತದಲ್ಲಿ ಸಂತೋಷಪಡಬಲ್ಲಿರಿ. ಅದನ್ನು ನೀವು ಹೊಂದುವ ಸರಿಯಾದ ಮಾರ್ಗದಲ್ಲಿ ಪ್ರತಿಯೊಂದನ್ನು ನೀವು ಅರ್ಥ ಮಾಡಿಕೊಂಡಿರುವುದಿಲ್ಲ. ಅದರ ಅರ್ಥ, ದೇವರೊಂದಿಗೆ ನಿಮ್ಮ ಸಂಬಂಧದ ಮೂಲಕ ಲೋಕದಲ್ಲಿ ನಿಮಗಿರುವ ಕಷ್ಟಕಿಂತಲು ಮೇಲೆತ್ತಲ್ಪಡಬಹುದು ಮತ್ತು ಪವಿತ್ರಾತ್ಮನ ಬಳದಿಂದ, ಆತನಿಗಾಗಿ ಮತ್ತು ಆತನೊಂದಿಗೆ ನಾವು ಪುನರುತ್ಥಾನದ ಜೀವನವನ್ನು ಜೀವಿಸವಹುದು.

ನಮ್ಮ ನಿಜವಾದ ಜೀವನ ದೇವರಾಗಿದ್ದಾನೆ. ಆತನಲ್ಲಿಯೇ ನಾವು ಜೀವಿಸುತ್ತೇವೆ, ಚಲಿಸುತ್ತೇವೆ, ನಮಗೆ ಬೇಕಾದದ್ದೆಲ್ಲವನ್ನು ಹೊಂದುತ್ತೇವೆ. ಸಂತೋಷ ಪಡುವುದಕ್ಕೆ ಕಲಿತುಕೊಳ್ಳುವುದರಿಂದ, ನಿಮ್ಮ ಜೀವಿತದ ಪ್ರತಿಯೊಂದು ದಿನ ಸಂತೋಷ ಪಡುವುದಕ್ಕೆ ದೇವರು ನಿಮ್ಮನ್ನು ಬಿಟ್ಟುಕೊಡುತ್ತಾನೆ. ಆತನೊಂದಿಗೆ ಅನ್ಯೋನ್ಯತೆಯನ್ನು ಅನುಭವಿಸಿರಿ. ನಿಮಗೆ ಸಂಬಂಧ ಪಟ್ಟ ಯಾವುದೇ ವಿಷಯದಲ್ಲಾಗಲಿ ದೇವರು ಸಂಬಂಧ ಪಟ್ಟವನಾಗಿದ್ದಾನೆ, ಮತ್ತು ನಿಮಗೆ ಯಾವುದು

ಅನ್ವಯಿಸುತ್ತದೆಯೊ ಅದನ್ನು ಪೂರ್ಣಗೊಳಿಸುತ್ತಾನೆಂದು ಸತ್ಯವೇದವು ಸ್ಪಷ್ಟವಾಗಿ ಹೇಳುತ್ತದೆ. ಆತನ ಚಿತ್ತದಂತೆ ಸಂಪೂರ್ಣವಾಗಿ ನಿಮ್ಮನ್ನು ಕರತರುವುದರಿಂದ, ಎಲ್ಲಾ ಸಮಯಗಳಲ್ಲಿ ಆತನು ನಿಮ್ಮ ಜೀವಿತದಲ್ಲಿ ಕಾರ್ಯಮಾಡುತ್ತಿದ್ದಾನೆ.

ತಪ್ಪಾದ ರೀತಿಯಲ್ಲಿ ದೇವರ ಭಯದಲ್ಲಿರಬೇಡಿ. ದೇವರ ಪೂಜ್ಯಬಾವದ ಭಯವನ್ನು ನಾವು ಹೊಂದಿರಬೇಕು, ಅದರ ಅರ್ಥ ಆತನು ಹೇಳುವುದೆಲ್ಲವನ್ನು ಅರ್ಥ ಮಾಡಿಕೊಂಡು, ಅವನು ಎಲ್ಲದರಲ್ಲಿ ಬಲಶಾಲಿಯಾದವನು ಎಂದು ತಿಳಿದುಕೋಂಡು ಆತನನ್ನು ಗೌರವಿಸಬೇಕು. ಆದರೆ ಎಲ್ಲಾ ಸಮಯದಲ್ಲಿ ನಾವು ಮಾಡುವ ತಪ್ಪುಗಳಿಗಾಗಿ ದೇವರು ಕೋಪ ಮಾಡುತ್ತಾನೆ ಅಥವ ಎಲ್ಲಾ ಸಮಯಗಳಲ್ಲಿ ನಾವು ಪರಿಪೂರ್ಣರಾಗಿರುವುದಕ್ಕೆ ತಪ್ಪಿದ್ದಲ್ಲಿ ಶಿಕ್ಷಿಸುತ್ತಾನೆ ಎಂದು ನಾವು ಹೆದರದೇ ಇರಬಾರದು. ದೇವರು ಕರುಣೆಯುಳ್ಳವನು ಮತ್ತು ಆತನು ಕೋಪಗೊಳ್ಳುವುದರಲ್ಲಿ ದೀರ್ಘ ಶಾಂತನಾಗಿದ್ದಾನೆ. ಅವನು ದೀರ್ಘಶಾಂತನಾಗಿರುವುದರಿಂದ, ನಮ್ಮ ಸ್ತಿಥಿಯನ್ನು, ನಮ್ಮ ತಿಳುವಳಿಕೆಯನ್ನು, ನಮ್ಮಬಲಹೀನತೆಗಳನ್ನು ಮತ್ತು ದೌರ್ಬಲ್ಯವನ್ನು ಅವನು ಬಲ್ಲವನಾಗಿದ್ದಾನೆ. ನಮ್ಮಲ್ಲಿ ಉಳಿದವರಂತೆ ನೀವು ಅದೇರೀತಿಯಲ್ಲಿರುವುದಾದರೆ, ಅನೇಕ ವಿಶಯಗಳು ನಿಮ್ಮ ನಿಮ್ಮ ಜೀವಿತದಲ್ಲಿದೆ ಮತ್ತು ವಯ್ಯಕ್ತಿಗತವಾಗಿ ಅದು ಬದಲಾವಣೆಯಾಗುವುದು ಅವಶ್ಯ–ಮತ್ತು ದೇವರು ಅವುಗಳ್ಳನ್ನು ಬದಲಾಯಿಸುತಾನೆ. ಆದರೆ ಒಂದು ಒಳ್ಳೆಯ ಸಮಾಚಾರವೇನೆಂದರೆ ನೀವು ನಿಮ್ಮ ಜೀವಿತದಲ್ಲಿಯೂ ಸಹ ಸಂತೋಷಪಡಬಲ್ಲಿರಿ.

ಈಗ ಸಧ್ಯಕ್ಕೆ ನೀವಿರುವ ಜೀವಿತವು, ನೀವು ಅಂತ್ಯಗೊಳಿಸದೇ ಇರುವಂಥ ಒಂದು ಜೀವಿತವಾಗಿರಬಹುದು, ಆದರೆ ಸಧ್ಯದ ಸಮಯದಲ್ಲಿ ಆದೊಂದನ್ನೇ ನೀವು ಹೊಂದಿರಬಹುದು, ಆದದರಿಂದ ಅದರಲ್ಲಿ ಸಂತೋಷಪಡುವುದಕ್ಕೆ ಪ್ರಾರಂಭಿಸುವುದು ಅವಶ್ಯವಾಗಿದೆ. ಅದರಲ್ಲಿ ಒಳ್ಳೆಯವಿಷಯಗಳನ್ನು ಕಂಡುಹಿಡಿಯಿರಿ. ಸತ್ಯವಾದದ್ದನ್ನು ಉಚ್ಛರಿಸುವಾಗ, ಪ್ರತಿ ಯೊಂದರಲ್ಲಿಯೂ ಒಳ್ಳೆಯದನ್ನು ನೋಡುವುದಕ್ಕೆ ಕಲಿತುಕೊಳ್ಳಿರಿ. ನಿಮ್ಮ ಕುಟುಂಬ ಮತ್ತು ಸ್ನೇಹಿತರನ್ನು ಸಂತೋಷಪಡಿಸಿರಿ ಅಥವಾ ನಿಮ್ಮ ಕುಟುಂಬದಲ್ಲಿ ಮತ್ತು ಸ್ನೇಹಿತರಲ್ಲಿ ಸಂತೋಷಪಡಿರಿ. ಅವರನ್ನು ಪ್ರತ್ಯೇಕವಾಗಿ

ಆರಿಸಿಕೊಳ್ಳಬೇಡಿರಿ ಮತ್ತು ಅವರನ್ನು ಬದಲಾವಣೆ ಮಾಡುವುದರಲ್ಲಿ ಕಾರ್ಯನಿರತರಾಗುವಂತೆ ಪ್ರಯತ್ನಿಸುವುದಕ್ಕೆ ನಡೆಸಬೇಡಿರಿ. ಅವರಿಗಾಗಿ ಪ್ರಾರ್ಥಿಸಿರಿ, ಅವರನ್ನು ಬದಲಾವಣೆ ಮಾಡಲು ದೇವರಿಗೆ ಒಪ್ಪಿಸಿಕೊಡಿರಿ.

ನಿಮ್ಮ ಕೆಲಸದಲ್ಲಿ ಸಂತೋಷಪಡಿರಿ, ನಿಮ್ಮ ಮನೆಯಲ್ಲಿ ಸಂತೋಷಿಸಿರಿ ಮತ್ತು ಪ್ರತಿದಿನದ ಸಾಧಾರಣವಾದ ಜೀವಿತದಲ್ಲಿ ಸಂತೋಷದಿಂದಿರಿ. ನೀವು ದೇವರಲ್ಲಿ ನಂಬಿಕೆಯಿಟ್ಟರೆ ಮತ್ತು ಒಳ್ಳೆಯ ಗುಣಸ್ವಭಾವವನ್ನು ಹೊಂದಲು ತೀರ್ಮಾನಿಸಿದರೆ ಇದು ಸಾಧ್ಯವಾಗುತ್ತದೆ. ನಿಮ್ಮ ಸೃಷ್ಟಿಯನ್ನು ನಿಮ್ಮಲ್ಲಿರುವ ನಿಮ್ಮ ಜೀವಿತದಲ್ಲಿರುವ, ನಿಮ್ಮ ಕುಟುಂಬದಲ್ಲಿರುವ ಮತ್ತು ಲೋಕದಲ್ಲಿರುವ ಕೆಟ್ಟದ್ದಾಗಿರುವ ಪ್ರತಿಯೊಂದರ ಮೇಲೆ ಅಲ್ಲ, ದೇವರ ಮೇಲೆ ಇಡಿರಿ. ದೇವರು ನಿಮಗೋಸ್ಕರ ಒಂದು ಒಳ್ಳೆಯ ಯೋಜನೆಯನ್ನು ಹೊಂದಿದ್ದಾನೆ ಮತ್ತು ಅವನು ಈಗಾಗಲೇ ಅದರ ಕಾರ್ಯಮಾಡುವುದಕ್ಕೆ ಪ್ರಾರಂಭಿಸುತ್ತಿದ್ದಾನೆ. ಬರಲಿರುವ ಒಳ್ಳೆಯ ಸಂಗತಿಗಳ ಕುರಿತು ಎದುರು ನೋಡುವವರಾಗಿ ಅದಕ್ಕಿಂತ ಮೊದಲೇ ನೀವು ಸಂತೋಷಪಡಬಹುದು.

ಅನೇಕ ಜನರು ಅವರು ನಂಬಿರುವುದರಲ್ಲಿಯೇ ಜೀವಿಸುತ್ತಾರೆ, ಅವರಲ್ಲಿ ಯಾವುದೇ ರೀತಿಯ ಕೊರತೆಗಳು ಇರುವ ತನಕ ಅವರು ತಮ್ಮ ಜೀವಿತದಲ್ಲಿ ಸಂತೋಷಿಸುವುದಿಲ್ಲ, ಆದರೆ ಅದು ತಪ್ಪಾದ ಅಭಿಪ್ರಾಯ, ನಿಮ್ಮ ತಪ್ಪುಗಳ ಮೇಲೆ ಅಥವಾ ನಿಮ್ಮ ಹಿಂದಿನ ವಿಷಾದಪಡುವವುಗಳ ಮೇಲೆ ಇರಬೇಡಿರಿ. ಕ್ರಿಸ್ತಯೇಸುವಿನ ಮೂಲಕ ನಿಮಗಿರುವ ಮಹತ್ವದ ನೂತನ ಭವಿಷ್ಯದ ವಿಷಯದಲ್ಲಿ ಯೋಚಿಸುವುದಕ್ಕೆ ಪ್ರಾರಂಭಿಸಿರಿ. ಸಂತೋಷಪಡುವುದಕ್ಕೆ ಏನಾದರು ನೀವು ತೀರ್ಮಾನಿಸಿದರೆ ನೀವು ಸಂತೋಷಪಡಬಹುದು. ನೀವು ತೀರ್ಮಾನಿಸಿವುದಾದರೆ ವಾಹನಗಳ ಒತ್ತಡದಲ್ಲಿ ಕುಳಿತು ಸಂತೋಷಿಸಬಹುದು. ನಾನು ನಿಮಗೆ ಒಂದು ಜೀವಿಸುವ ಹೊಸಮಾರ್ಗವನ್ನು ತಿಳಿಸಿಕೊಡುತ್ತಿದ್ದೇನೆಂದು ನೆನಪುಮಾಡಿಕೊಳ್ಳಿರಿ ಮತ್ತು ನಿಮ್ಮ ನಡತೆ ಜೀವನದ ಕಡೆಗೆ ಅದರ ಭಾಗವಾಗಿದೆ ಎಂದು ನೆನಪುಮಾಡಿಕೊಳ್ಳಿರಿ. ನಾನು ಎಲ್ಲಿಗೆ ಹೋಗುತ್ತಿದ್ದೆನೊ ಆ ಮಾರ್ಗದಲ್ಲಿ ನಾನು ಪ್ರಯಾಣ ಮಾಡುತ್ತಿರುವಾಗ ಅದರಲ್ಲಿ

ಸಂತೋಷದಿಂದಿರಬೇಕೆಂದು ಕಟ್ಟಕಡೆಗೆ ಕಲಿತುಕೊಂಡೆನು ಮತ್ತು ಅದನ್ನೇ ನೀವು ಸಹ ಮಾಡಬೇಕೆಂದು ನಿಮ್ಮನ್ನು ನಾನು ಒತ್ತಾಯ ಮಾಡುತ್ತೇನೆ. ನಿಮ್ಮ ಜೀವಿತದಲ್ಲಿ ಮಾಡುವುದಕ್ಕೆ ದೇವರಲ್ಲಿ ಬೇಕಾದಷ್ಟು ಇರುತ್ತದೆ ಮತ್ತು ಅದನ್ನು ಮಾಡುತ್ತಿರುವಾಗ ನೀವು ದುಃಖಭರಿತರಾಗಿರಬೇಕೆಂದು ದೇವರಿಗೆ ಇಷ್ಟವಿಲ್ಲ. ಚಿಕ್ಕ ಮಕ್ಕಳಾಗಿ ದೊಡ್ಡವರಾಗಿ ಬೆಳೆಯುತ್ತಾರೊ ಹಾಗೆಯೇ ಕ್ರಿಸ್ತನಲ್ಲಿ ಸಹ ಬೆಳೆಯಬೇಕು. ಅದು ನಮಗೆ ಬೇರೆಯದಕ್ಕಿಂತ ಹೆಚ್ಚಾದ ಸಮಯವನ್ನು ಈ ಮಂದಗತಿಯಲ್ಲಿ ಮುಂದೆ ಸಾಗಲು ಸಮಯ ಹಿಡಿಯುತ್ತದೆ. ಅಂದರೆ ಆ ಪ್ರಯಾಣದಲ್ಲಿ ಸಂತೋಷಪಡದೆ ಇರುವುದರಲ್ಲಿ ಯಾವ ಅಂಶವೂ ಇಲ್ಲ.

ಇಂದೇ ನೀವು ಸಂಪೂರ್ಣರಾಗಿರಬೇಕೆಂದು ದೇವರು ನಿಮ್ಮ ಕುರಿತು ಅಪೇಕ್ಷೆ ಮಾಡುವುದಿಲ್ಲ. ನಿಜವಾಗಿ, ನೀವು ಈ ಲೋಕದಲ್ಲಿ ಎಲ್ಲಿಯವರೆಗೆ ಜೀವಿಸುತ್ತೀರೊ ಅಲ್ಲಿಯವರೆಗೆ ನೀವು ಸಂಪೂರ್ಣವಾಗಿ ಪರಿಪೂರ್ಣರಾಗುವುದಿಲ್ಲವೆಂದು ಅವನು ಈಗಾಗಲೇ ತಿಳಿದುಕೊಂಡಿರುವನು. ಹೇಗಾದರು ನಮ್ಮಲ್ಲಿ ಪ್ರತಿಯೊಬ್ಬರೂ ಒತ್ತಾಯ ಮಾಡುವುದನ್ನು ಕಾಪಾಡಿಕೊಂಡು ಬರುವುದಕ್ಕೆ ಅವನು ಅಪೇಕ್ಷಿಸುತ್ತಾನೆ. ಪ್ರತಿನಿತ್ಯವು ನಾವು ಯತಾರ್ಥವಾಗಿ ದೇವರನ್ನು ಸೇವಿಸುವುದಕ್ಕೆ ಅತ್ಯುತ್ತಮವಾದದ್ದನ್ನು ಮಾಡುವುದಕ್ಕೆ ಎದ್ದೇಳಬೇಕು. ನಮ್ಮ ಬಲಹೀನತೆಗಳನ್ನು (ಪಾಪಗಳನ್ನು) ನಾವು ಅರಿಕೆಮಾಡಿ, ಒಪ್ಪಿಕೊಂಡು, ಅವುಗಳಿಂದ ತಿರುಗಿಕೊಳ್ಳುವುದಕ್ಕೆ ಇಚ್ಛಿಸುವವರಾಗಿ ನಮ್ಮ ಪಾಪಗಳಿಗಾಗಿ ಕ್ಷಮಾಪಣೆಯನ್ನು ಕೇಳಿಕೊಳ್ಳಬೇಕು. ನಾವು ಇದನ್ನು ಮಾಡುವುದಾದರೆ, ದೇವರು ಉಳಿದದ್ದನ್ನು ಮಾಡುತ್ತಾನೆ. ಆತನ ಪವಿತ್ರಾತ್ಮನ ಮೂಲಕ ನಮ್ಮೊಂದಿಗೆ ಆತನು ಕಾರ್ಯಸಾಧಿಸುವುದನ್ನು ಕಾಪಾಡಿಕೊಂಡು ಬರುತ್ತಾನೆ. ಅವನು ನಮಗೆ ಭೋದಿಸುತ್ತಾನೆ, ಮಾರ್ಪಡಿಸುತ್ತಾನೆ ಮತ್ತು ನಮ್ಮನ್ನು ಉಪಯೋಗಿಸಿಕೊಳ್ಳುತ್ತಾನೆ. ನೀವು ಜೀವಿಸುವ ಒಂದು ಹೊಸ ಮಾರ್ಗದಲ್ಲಿ ಕಾಲಿಟ್ಟಿದ್ದೀರಿ. ನೀವು ಎಂದಿಗೂ ದುಃಖಿಸುವುದಿಲ್ಲ ಎಂದು ನಾನು ನಂಬುತ್ತೇನೆ. ದೇವರಲ್ಲಿ ಸಂತೋಷಿಸಿರಿ, ನಿಮ್ಮಲ್ಲಿಯೇ ಸಂತೋಷಪಡಿರಿ, ಯೇಸು ನಿಮಗೆ ಕೊಡುವುದಕ್ಕೆ ಸತ್ತನು ಆದರಿಂದ ಜೀವಿತದಲ್ಲಿ ಸಂತೋಷಪಡಿರಿ.

# ರಕ್ಷಣೆಯ ಪ್ರಾರ್ಥನೆ

*ತಂದೆಯಾದ ದೇವರೆ, ನಾನು ನಿನ್ನನ್ನು ಪ್ರೀತಿಸುತ್ತೇನೆ. ಇಂದೇ ನಾನು ನನ್ನ ಪಾಪಗಳ ಕ್ಷಮೆಗಾಗಿ ಬೇಡುವುದಕ್ಕಾಗಿ ನಂಬಿಕೆಯಿಂದ ನಿಮ್ಮ ಬಳಿಗೆ ಬರುತ್ತೇನೆ. ಯೇಸುವೆ, ನಾನು ನಿನ್ನನ್ನು ನಂಬುತ್ತೇನೆ. ನನಗೋಸ್ಕರ ಆ ಕಲ್ವಾರಿ ಬೆಟ್ಟದ ಶಿಲುಬೆಯ ಮೇಲೆ ನೀನು ಪ್ರಾಣಕೊಟ್ಟೆ ಎಂದು ನಂಬುತ್ತೇನೆ. ನೀನು ನಿನ್ನ ನಿಷ್ಕಳಂಕ ರಕ್ತವನ್ನು ನನಗೋಸ್ಕರ ಸುರಿಸಿದಿ, ನನ್ನ ಸ್ಥಾನವನ್ನು ನೀನು ತೆಗೆದುಕೊಂಡೆ, ನಾನು ಅನುಭವಿಸಬೇಕಾದ ಎಲ್ಲಾ ಶಿಕ್ಷೆಯನ್ನು ನೀನು ಅನುಭವಿಸಿದೆ, ನೀನು ಸತ್ತು ಅಡಕಮಾಡಲ್ಪಟ್ಟು ಮೂರನೆಯ ದಿನದಲ್ಲಿ ಸತ್ತವರೊಳಗಿಂದ ಜೀವಿತನಾಗಿ ಎದ್ದು ಬಂದಿರುವೆ ಎಂದು ನಾನು ನಂಬುತ್ತೇನೆ. ಮರಣವು ನಿನ್ನನ್ನು ಹಿಡಿದುಕೊಳ್ಳಲಾರದೆ ಹೋಯಿತು. ನೀನು ಸೈತಾನನ ಮೇಲೆ ವಿಜಯವನ್ನು ಹೊಂದಿ, ಪಾತಾಳ ಲೋಕದ ಬೀಗದ ಕೈಯನ್ನು ಅವನಿಂದ ತೆಗೆದುಕೊಂಡು ಅವನಿಂದ ಮರಣವನ್ನು ಓಡಿಸಿದೆ, ಇವೆಲ್ಲವನ್ನು ನನಗೋಸ್ಕರ ಮಾಡಿದೆ ಏಕೆಂದರೆ ನೀನು ನನ್ನನ್ನು ಪ್ರೀತಿಸುತ್ತಿ ಎಂದು ನಂಬುತ್ತೇನೆ. ನಾನು ಒಬ್ಬ ಕ್ರೈಸ್ತನಾಗಿರಬೇಕೆಂದು ಆಶಿಸುತ್ತೇನೆ. ನನ್ನ ಜೀವಿತದ ಎಲ್ಲಾ ದಿನಗಲ್ಲಿ ನಿನ್ನ ಸೇವೆ ಮಾಡುವುದಕ್ಕೆ ಆಶಿಸುತ್ತೇನೆ. ನೀನು ನನಗೆ ವಾಗ್ದಾನ ಮಾಡಿದ ನೂತನ ಜೀವಿತದಲ್ಲಿ ಹೇಗೆ ಜೀವಿಸಬೇಕೆಂದು ಕಲಿತುಕೊಳ್ಳುವುದಕ್ಕೆ ನಾನು ಆಶಿಸುತ್ತೇನೆ. ಯೇಸುವೇ ಈಗ ನಾನು ನಿನ್ನನ್ನು ಅಂಗೀಕರಿಸಿಕೊಳ್ಳುತ್ತೇನೆ ಮತ್ತು ನನ್ನನ್ನು ನಾನು ನಿನಗೆ ಒಪ್ಪಿಸಿಕೊಡುತ್ತೇನೆ. ನಾನು ಈಗಿರುವ ಸ್ಥಿತಿಯಲ್ಲಿಯೇ ನನ್ನನ್ನು ಸೇರಿಸಿಕೊ ಮತ್ತು ನಾನು ಯಾವ ರೀತಿಯಲ್ಲಿರಬೇಕೆಂದು ಆಶಿಸುತ್ತಿಯೋ ಅದರಂತೆ ನನ್ನನ್ನು ನಡೆಸು.*

*ನನ್ನನ್ನು ರಕ್ಷಿಸಿದಕ್ಕಾಗಿ, ಯೇಸುವೆ ನಿನಗೆ ವಂದನೆಗಳು. ನಿನ್ನ ಪವಿತ್ರಾತ್ಮನಿಂದ ನನ್ನನ್ನು ತುಂಬಿಸಿ ಅಭಿಷೇಕಿಸು ಮತ್ತು ನಾನು ತಿಳಿದುಕೊಳ್ಳಬೇಕಾದ ಪ್ರತಿಯೊಂದನ್ನು*

*ನನಗೆ ಕಲಿಸಿಕೊಡು. ನಾನೀಗ ರಕ್ಷಿಸಲ್ಪಟ್ಟಿದ್ದೇನೆ. ನಾನು ಹೊಸದಾಗಿ ಹುಟ್ಟಿದ್ದೇನೆ. ನಾನು ಸತ್ತ ಮೇಲೆ ಪರಲೋಕಕ್ಕೆ (ಸ್ವರ್ಗಲೋಕಕ್ಕೆ) ಹೋಗುತ್ತೇನೆ ಎಂಬುದಾಗಿ ನಾನು ನಂಬುತ್ತೇನೆ. ತಂದೆಯಾದ ದೇವರೇ, ನನ್ನ ಯಾತ್ರೆಯಲ್ಲಿ ಸಂತೋಷಪಡುವುದಕ್ಕೆ ನಾನು ಹೋಗುತ್ತೇನೆ ಮತ್ತು ನಾನು ನಿನ್ನ ಮಹಿಮೆಗಾಗಿ ಜೀವಿಸುತ್ತೇನೆ!*

# ಯುಕ್ತಿಸಾಧನೆಯ ಶಿಫಾರಸ್ಸು

ನಿಮ್ಮ ನೂತನ ಜೀವಿತದಲ್ಲಿ ನೀವು ಕಲಿಯುವುದಕ್ಕೆ ಮತ್ತು ಬೆಳೆಯುವುದಕ್ಕೆ ಸಹಾಯ ಮಾಡಲು ಸಿಗುವಂತಹ ಬೇಕಾದಷ್ಟು ಸಾಧನಗಳು ನನ್ನಲ್ಲಿವೆ. ನೀವು ಒಂದು ಸಾಧನೆಯ ಪುಸ್ತಕದ ಪಟ್ಟಿಯನ್ನು ಕೇಳಿಕೊಳ್ಳುವುದಾದರೆ, ಉಚಿತವಾಗಿ ಒಂದು ಪುಸ್ತಕವನ್ನು ನಿಮಗೆ ಕಳುಹಿಸಿಕೊಡುತ್ತೇವೆ. ನಮ್ಮ ಮಾಸ ಪತ್ರಿಕೆಯನ್ನು ನಿಮಗೆ ಕಳುಹಿಸಿ ಕೊಡುವುದಕ್ಕೆ ಕೇಳಿಕೊಳ್ಳಬೇಕೆಂದು ನಾನು ನಿಮಗೆ ಶಿಫಾರಸ್ಸನ್ನು ಮಾಡುತ್ತೇನೆ. ಅದನ್ನು ಕೆಲವು ತಿಂಗಳ ಮಟ್ಟಿಗೆ ಉಚಿತವಾಗಿ ಕೂಡ ಕಳುಹಿಸಿ ಕೋಡುತ್ತೇವೆ.

*"Battlefield of the Mind"* ಹಾಗೆಯೆ *"How to Succeed at Being Yourself"* ಎಂಬ ನನ್ನ ಪುಸ್ತಕಗಳನ್ನು ನಾನು ಶಿಫಾರಸ್ಸು ಮಾಡುತ್ತೇನೆ. *"The Word, The Name, The Blood"* ಎಂಬ ಪುಸ್ತಕಗಳನ್ನು ಅದರಲ್ಲಿ ಕ್ರೂಜೆಯ ಮೇಲೆ ಯೇಸು ಏನು ಮಾಡಿದನೊ ಅದಕ್ಕಾಗಿ ಒಂದು ಒಳ್ಳೆಯ ಧೃಡವಾದ ಆಸ್ತಿವಾರವನ್ನು ಮತ್ತು ನಿಮಗೆ ಬೇಕಾದ ಶಕ್ತಿಯನ್ನು ಒಬ್ಬನು ನಂಬಿದವನಾಗಿ ಹೊಂದಿಕೊಳ್ಳಲು ಕುರಿತು ಸಹಾಯಮಾಡುವ ಈ ಪುಸ್ತಕವನ್ನು ಶಿಫಾರಸ್ಸು ಮಾಡುತ್ತೇನೆ.

*"Pressing In and Pressing On"* (ಧ್ವನಿಸುರುಳೀಗಳನ್ನು) ಕ್ಯಾಸೆಟ್ ಅಥವಾ ಸಿ.ಡಿ ಗಳಲ್ಲಿ ದೊರಕುತ್ತವೆ ಮತ್ತು *"The Mouth"* ನಿಮ್ಮ ವಾಕ್ಚಾತುರ್ಯದ ವಿಷಯವಾಗಿ ನೀವು ಕಲಿತುಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ.

ನಾವು ನಮಗೆ ಇನ್ನೂ ಏನಾದರು ಹೆಚ್ಚಿಗೆ ಸಹಾಯ ಮಾಡಬೇಕಾದರೆ, ಮರೆಯದೆ ನಮ್ಮ ಕಛೇರಿಗೆ ಕರೆಮಾಡಿ, ದೇವರು ನಿಮ್ಮನ್ನು ಪ್ರೀತಿಸಿದ ಹಾಗೆಯೇ ನಾವು ಕೂಡ ನಿಮ್ಮನ್ನು ಪ್ರೀತಿಸುತ್ತೇವೆಂಬುದನ್ನು ನೆನಪು ಮಾಡಿಕೊಳ್ಳಿರಿ!

# ಲೇಖಕರ ಬಗ್ಗೆ

ಜಾಯ್ಸ್ ಮೇಯರ್ ದೇವರ ವಾಕ್ಯವನ್ನು 1977ರಿಂದ ಬೋಧಿ ಸುತ್ತಿರುವರು ಮತ್ತು 1980ರಿಂದ ಪೂರ್ಣ ಸೇವೆಯಲ್ಲಿರುವರು. ಆಕೆ ಐವತ್ತಕ್ಕಿಂತ ಹೆಚ್ಚಾದ ದೈವೀಕ ಪ್ರೇರಣೆವುಂಟುಮಾಡುವ ಪುಸ್ತಕಗಳನ್ನು, ದೇವರಿಂದ ಹೇಗೆ ಕೇಳುವುದು, ದೇವರನ್ನು ವೈಯಕ್ತಿಕವಾಗಿ ಅರಿಯುವುದು, ಮನಸ್ಸಿನ ಯುದ್ಧಭೂಮಿ ಎಂಬ ಪುಸ್ತಕಗಳನ್ನು ಒಳಗೊಂಡು ಅತ್ಯುತ್ತಮವಾಗಿ ಮಾರಾಟ ಮಾಡುವ ಲೇಖಕಿಯಾಗಿರುವರು. ಆಕೆಯು ಸಾವಿರಕ್ಕಿಂತ ಹೆಚ್ಚಾದ ಬೋಧನೆಯ ಧ್ವನಿ ಸುರುಳಿಗಳನ್ನು ಮತ್ತು ಹಿಂದು ಪೂರ್ಣ ವೀಡಿಯೋ ಗ್ರಂಥಾಲಯವನ್ನು ಸಹ ಬಿಡುಗಡೆ ಮಾಡಿರುವರು. ಜಾಯ್ಸ್ ರವರ ಪ್ರತಿದಿನ ಬಾಳನ್ನು ಅನುಭವಿಸುವ ಬಾನುಲಿ ಮತ್ತು ದೂರದರ್ಶನ ಕಾರ್ಯಕ್ರಮಗಳು ಲೋಕಾದ್ಯಂತ ಪಸರಿಸಿದ, ಮತ್ತು ಆಕೆಯು ದೊಡ್ಡ ಸಮಾರಂಭಗಳನ್ನು ನಿರ್ವಹಿಸುತ್ತ ಪ್ರಯಾಣಿಸುತ್ತಿರುವರು. ಜಾಯ್ಸ್ ಮತ್ತು ಆಕೆಯ ಗಂಡ ಡೇವ್, ನಾಲ್ಕು ಬೆಳೆದ ಮಕ್ಕಳ ಪೋಷಕರಾಗಿರುವರು ಮತ್ತು ತಮ್ಮ ಗೃಹವನ್ನು ಸಂಟ್. ಲೂಯಿಸ್, ಮಿಸೌರಿಯಲ್ಲಿ ಮಾಡಿರುವರು.

To contact the author in the United States, please write:
Joyce Meyer Ministries
P.O. Box 655,
Fenton, Missouri 63026
or call: (636) 349-0303
or log on to: www.joycemeyer.org

**Go to tv.joycemeyer.org**
**to watch Joyce's messages in a variety of languages**

To contact the author in India, please write:
Joyce Meyer Ministries
Plot No. 512/B, Road No. 30,
Jubilee Hills, Hyderabad - 500 033
or call: 2300 6777
or log on to: www.jmmindia.org

*Please include your testimony or help received from this book when you write. Your prayer requests are welcome.*

# ನಿಮ್ಮ ನಿತ್ಯತ್ವವನ್ನು ಎಲ್ಲಿ ಕಳೆಯುತ್ತೀರಿ?



ಬಹಳ ಜನರು, ಈದಿನ ಅಥವ ಒಂದು ವೇಳೆ ಕೆಲವು ತಿಂಗಳ ನಂತರದ ಮಾರ್ಗದಲ್ಲಿ ಏನಾಗುತ್ತದೆಂಬ ವೆಷಯಗಳಿಗೆ ಮಾತ್ರ ಚಿಂತಿಸುವವರಾಗಿದ್ದಾರೆ. ನಿವೃತ್ತಿಯಾದ ನಂತರ ಏನಾಗುತ್ತದೆ ಎಂಬ ಭವಿಷ್ಯದ ಕಡೆಗೆ ಚಿಂತಿಸುವವರಾಗಿದ್ದಾರೆ. ಆದರೆ ಮರಣಾನಂತರದ ಜೀವಿತ ಏನು? ಅದಕ್ಕಾಗಿ ನೀವು ಸಿದ್ಧರಾಗಿದ್ದಿರೊ? ಒಂದು ದಿನ ನಿಮ್ಮ ಪ್ರಾಕೃತ ದೇಹ ಸಾಯುವುದಾಗಿದ್ದಾಗ್ಯೂ, ನಿಮ್ಮ ಆತ್ಮ ನಿತ್ಯತ್ವಕ್ಕೋಸ್ಕರ ಜಿವಿಸಲು ಮುಂದುವರಿಯುತ್ತದೆ. ನಿಮ್ಮ ಆತ್ಮ ಎಲ್ಲಿ ನೆಲೆಸುವುದು, ಪರಲೋಕದಲ್ಲಾ ಆಥವ ನರಕದಲ್ಲಾ ಎಂಬ ತಿರ್ಮಾನವು ನೀವು ಈ ದಿನ ಮಾಡುವ ಆಯ್ಕೆಯ ಮೇಲೆ ಅವಲಂಬಿತವಾಗಿದೆ. ಗ್ರಂಥಕರ್ತರಾದ ಜಾಯ್ಸ್ ಮೇಯರ್ ರವರ ಹೆಚ್ಚಾಗಿ ಮಾರಾಟವಗುವಂಥ ಈ ಪುಸ್ತಕದಲ್ಲಿ ದೇವರ ರಕ್ಷಣೆಯ ಉದ್ದೇಶದ ಮುಖ್ಯ ಅಂಶಗಳಿವೆ, ಆದುದರಿಂದ ನೀವು ಈಗ ಸರಿಯಾದ ತೀರ್ಮಾನವನ್ನು ಮಡಿಕೊಳ್ಳಬಲ್ಲಿರಿ.

**ಪ್ರೀತಿಯಿಂದ ಮತ್ತು ಸಮಾಧಾನದಿಂದ, ಅವರು ನಿಮಗೆ ಉಪದೇಶಮಾಡುತ್ತಾರೆ:**

- ಯೇಸುವಿನ ಕಥೆ–ಮತ್ತು ಯೇಸುವಿನ ಪ್ರಾಮುಖ್ಯತೆ
- ಮನಸ್ಸಿನಲ್ಲಿ ಅಲ್ಲ–ಹೃದಯದಲ್ಲಿ ನಂಬಿಕೆ ಹೇಗೆ ಉಂಟಾಗುತ್ತದೆ
- ಕ್ರಿಸ್ತನನ್ನು ಅಂಗಿಕರಿಸಿಕೊಳ್ಳುವುದುದಕ್ಕೆ ಏನನ್ನು ನೀವು ನಂಬಬೇಕು
- ನಿಮ್ಮ ನೂತನ ಜೀವಿತವನ್ನು ಯಾವರಿತಿಯಲ್ಲಿ ಪ್ರರಂಭಿಸಬೇಕು

**ತಡಮಾಡಬೇಡಿರಿ, ನಿಮಗೆ ಜೀವಿಸುವ ಒಂದು ನೂತನ ಮಾರ್ಗವನ್ನು ಕಂಡುಹಿಡಿಯುವುದಕ್ಕೆ ಇದೇ ಒಳ್ಳೆಯ ಸಮಯ!**

JOYCE MEYER MINISTRIES®
Plot No. 512/B, Road No. 30,
Jubilee Hills, Hyderabad - 500 033